ಬುಧವಾರ, ಜನವರಿ 11, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪುಣ್ಯಸ್ನಾನ

ಮಕರ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಕೋಲ್ಕತ್ತದ ಸಾಗರ್ ದ್ವೀಪದಲ್ಲಿ ಮಂಗಳವಾರ ಪುಣ್ಯಸ್ನಾನ ಕೈಗೊಳ್ಳಲು ಸಾಧುವೊಬ್ಬರು ತೆರಳಿದರು

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಒಂದೇ ಫೋನ್‌ನಲ್ಲಿ ಎರಡು ವಾಟ್ಸ್‌ಆ್ಯಪ್ ಖಾತೆಗಳನ್ನು ತೆರೆಯಲು ಅವಕಾಶವಿದೆ



ಆಳ-ಅಗಲ
ಕುಲಾಂತರಿ ಸಾಸಿವೆಗೆ ತರಾತುರಿಯ ಒಪ್ಪಿಗೆ

ಸ್ಯಾಂಟ್ರೊ ರವಿ ಪ್ರಕರಣ: ಎಡಿಜಿಪಿಯಿಂದ ವಿಚಾರಣೆ 5

ಜೋಶಿಮಠ: ಭೂಕಂಪನ ವೀಕ್ಷಣಾ ವ್ಯವಸ್ಥೆ ಸ್ಥಾಪನೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,115 ▼	17,914 ▼	₹ 57,850 (ಬೆಂಗಳೂರು) ▼	₹ 69,800 (ಬೆಂಗಳೂರು) ▼	81.74 ▲

ಸಾಹಿತಿ ಸಾರಾ ಅಬೂಬಕ್ಕರ್ ಇನ್ನಿಲ್ಲ

ಮಂಗಳೂರು: ಕನ್ನಡದ ಹೆಸರಾಂತ ಸಾಹಿತಿ ಸಾರಾ ಅಬೂಬಕ್ಕರ್ (87) ಮಂಗಳವಾರ ನಿಧನರಾದರು.

ಆರು ತಿಂಗಳ ಹಿಂದೆ ಬಾಯಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆರೋಗ್ಯ ಏರುಪೇರಾಗಿದ್ದರಿಂದ ನಗರದ ಯುನಿಟಿ ಆಸ್ಪತ್ರೆಗೆ ಮಂಗಳವಾರ ಬೆಳಿಗ್ಗೆ ಅವರನ್ನು ದಾಖಲಿಸಲಾಗಿತ್ತು. ಸ್ವಲ್ಪ ಹೊತ್ತಿನಲ್ಲೇ ಅವರು ಕೊನೆಯುಸಿರೆಳೆದರು.

ಸಾರಾ ಅವರಿಗೆ ನಾಲ್ವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆಯು ನಗರದ ಬಂದರ್‌ನ ಜೀನತ್ ಬಕ್ಷ್ ಜುಮ್ಮಾ ಮಸೀದಿ ಪ್ರದೇಶದಲ್ಲಿ ನೆರವೇರಿತು.

ಕಾಸರಗೋಡು ಜಿಲ್ಲೆಯ 'ಪುದಿಯಾಪುರ್ (ಹೊಸಮನೆ) ತರವಾಡು ಮನೆಯಲ್ಲಿ ಜನಿಸಿದ್ದ ಸಾರಾ, 1984ರಲ್ಲಿ ರಚಿಸಿದ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಮೂಲಕ ಖ್ಯಾತರಾಗಿದ್ದರು. ಇದು ಹಿಂದಿ, ತಮಿಳು, ತೆಲುಗು, ಮರಾಠಿ ಮತ್ತು ಒಡಿಯಾ ಭಾಷೆಗೆ ಅನುವಾದವಾಗಿದೆ.

5ನೇ ಪುಟ ನೋಡಿ

ನುಡಿನಮನ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿಮಾನನಿಲ್ದಾಣ ಸಂಪರ್ಕಿಸುವ ಮೆಟ್ರೊ ಮಾರ್ಗ, ಹೆಣ್ಣೂರು ಕ್ರಾಸ್ ಬಳಿ ಅವಘಡ

ಉರುಳಿದ ಪಿಲ್ಲರ್ ಚೌಕಟ್ಟು ತಾಯಿ– ಮಗು ಸಾವು

ಪ್ರಜಾವಾಣಿ ವಾರ್ತೆ

ತೇಜಸ್ವಿನಿ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಮಂಗಳವಾರ ಬೆಳಿಗ್ಗೆ ಉರುಳಿಬಿದ್ದ ಪರಿಣಾಮ, ಪತಿಯೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ಪತ್ನಿ–ಮಗು ಮೃತಪಟ್ಟಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ತೇಜಸ್ವಿನಿ (28) ಹಾಗೂ ಅವರ ಎರಡೂವರೆ ವರ್ಷದ ಮಗು ವಿಹಾನ್ ಮೃತರು. ಅವಘಡದಲ್ಲಿ ತೇಜಸ್ವಿನಿ ಅವರ ಪತಿ ಲೋಹಿತ್ ಕುಮಾರ್ ಸುಲಾಖೆ (33) ಗಾಯಗೊಂಡಿದ್ದಾರೆ. ಮಗಳು ವಿಸ್ಮಿತಾಳಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ.

'ಕೆ.ಆರ್.ಪುರದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ನಿಗಮ) ವತಿಯಿಂದ ಮೆಟ್ರೊ ಮಾರ್ಗ ನಿರ್ಮಿಸಲಾಗುತ್ತಿದೆ. ಹೆಣ್ಣೂರು ಕ್ರಾಸ್‌ನಿಂದ ನಾಗವಾರ ಜಂಕ್ಷನ್‌ಗೆ ತೆರಳುವ ರಸ್ತೆಯಲ್ಲಿ ಪಿಲ್ಲರ್ ನಿರ್ಮಿಸುವ ಕೆಲಸ ಆರಂಭಿಸಲಾಗಿದೆ. ಇದೇ ಮಾರ್ಗದಲ್ಲಿ ಪಿಲ್ಲರ್ ನಿರ್ಮಾಣಕ್ಕಾಗಿ ನಿಲ್ಲಿಸಲಾಗಿದ್ದ 25 ಮೀಟರ್ ಎತ್ತರ ಹಾಗೂ 6 ಮೀಟರ್ ಅಗಲದ ಕಬ್ಬಿಣದ ಚೌಕಟ್ಟು ಮಂಗಳವಾರ ಬೆಳಿಗ್ಗೆ 10.30ರ ಸುಮಾರಿಗೆ ಉರುಳಿಬಿದ್ದಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ರಿಮಿನಲ್ ಮೊಕದ್ದಮೆ: ಸಿ.ಎಂ ಆದೇಶ

ಮೆಟ್ರೊ ಕಾಮಗಾರಿಯ ಮುಖ್ಯ ಎಂಜಿನಿಯರ್, ಕಾಮಗಾರಿಯ ಉಸ್ತುವಾರಿ ವಹಿಸಿದ್ದ ಎಲ್ಲ ಎಂಜಿನಿಯರ್‌ಗಳನ್ನು ಅಮಾನತು ಮಾಡಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶಿಸಿದ್ದಾರೆ.

'ಈ ದುರ್ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಗುತ್ತಿಗೆ ಪಡೆದಿರುವ ಕಂಪನಿಯ ಮುಖ್ಯಸ್ಥರ ವಿರುದ್ಧವೇ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಸೂಚಿಸಿದ್ದಾರೆ.

₹ 40 ಲಕ್ಷ ಪರಿಹಾರ ಘೋಷಣೆ: ಮೃತರ ಕುಟುಂಬಕ್ಕೆ ಮುಖ್ಯಮಂತ್ರಿ ನಿಧಿಯಿಂದ ₹ 20 ಲಕ್ಷ ಹಾಗೂ ಬಿಎಂ ಆರ್‌ಸಿಎಲ್ ಕಡೆಯಿಂದ ₹ 20 ಲಕ್ಷ ಪರಿಹಾರ ಘೋಷಿಸಲಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

5ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3C

'ಮೀಸಲಾತಿ ಕಸಿದರೆ ವಿಧಾನಸೌಧಕ್ಕೇ ನುಗ್ಗುತ್ತೇವೆ': ಎಚ್ಚರಿಕೆ

ಒಳಮೀಸಲಾತಿ ವಿರೋಧಿಸಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ವಿರೋಧಿಸಿ, ನಗರದಲ್ಲಿ ಮಂಗಳವಾರ ನಡೆದ ಪರಿಶಿಷ್ಟ ಜಾತಿಗಳ ಸಂಕಲ್ಪ ಸಮಾವೇಶದಲ್ಲಿ 'ಭೋವಿ, ಲಂಬಾಣಿ, ಕೊರಚ, ಕೊರಮ ಜನಾಂಗದ ಮೀಸಲಾತಿ ಕಸಿದುಕೊಂಡರೆ ವಿಧಾನ ಸೌಧಕ್ಕೇ ನುಗ್ಗುತ್ತೇವೆ' ಎಂದು ಸಮುದಾಯದವರು ಎಚ್ಚರಿಸಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನೇತೃತ್ವದಲ್ಲಿ ಆಯೋಜಿಸಿದ್ದ ಸಮಾವೇಶಕ್ಕೆ ರಾಜ್ಯದ ವಿವಿಧೆಡೆಯಿಂದ ಪ್ರತಿಭಟನನಿರತರು ಬಂದಿದ್ದರು. ಇದಕ್ಕೂ ಮುನ್ನ ಸಂಗೊಳ್ಳಿ ರಾಯಣ್ಣ ರೈಲುನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಪ್ರತಿಭಟನ ರ‍್ಯಾಲಿ ನಡೆಯಿತು.ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಮಂದಿ ಘೋಷಣೆ ಕೂಗಿದರು.

'ಭಿಕ್ಷೆ ಬೇಡಲು ರಾಜಧಾನಿಗೆ ಬಂದಿಲ್ಲ. ಜನ್ಮಸಿದ್ಧ ಹಕ್ಕು ಪಡೆಯಲು ಧಾವಿಸಿದ್ದೇವೆ. ಕಾಡಿನ ನಿವಾಸಿಗಳ ಹಕ್ಕು ಕಸಿಯುವ ವ್ಯವಸ್ಥಿತ ಷಡ್ಯಂತ್ರಗಳು ನಡೆಯುತ್ತಿವೆ. ಪ್ರತಿಭಟನೆ ಹತ್ತಿಕ್ಕುವ ಕೆಲಸಗಳೂ ನಡೆದವು. ಇದ್ಯಾವುದಕ್ಕೂ ಜಗ್ಗುವುದಿಲ್ಲ. ಆಯೋಗದ ವರದಿಯ ದೃಢೀಕೃತ ಪ್ರತಿಯನ್ನು ನೀಡಬೇಕು' ಎಂದು ಆಗ್ರಹಿಸಿದರು.

5ನೇ ಪುಟ ನೋಡಿ

ಆಸ್ಕರ್: ಅರ್ಹತೆ ಪಡೆದ ಕಾಂತಾರ, ವಿಕ್ರಾಂತ್ ರೋಣ

ಬೆಂಗಳೂರು: ಕನ್ನಡದ 'ಕಾಂತಾರ' ಮತ್ತು 'ವಿಕ್ರಾಂತ್ ರೋಣ' ಸಿನಿಮಾಗಳು ಆಸ್ಕರ್ ಪ್ರಶಸ್ತಿಗೆ ಸ್ಪರ್ಧಿಸಲು ಅರ್ಹತೆ ಪಡೆದ 301 ಸಿನಿಮಾಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಜತೆಗೆ ಆರ್‌ಆರ್‌ಆರ್ ಚಿತ್ರದ 'ನಾಟುನಾಟು' ಹಾಡು, ವಿವಿಧ ಭಾಷೆಗಳ ಭಾರತೀಯ ಚಿತ್ರಗಳಾದ 'ಗಂಗೂಬಾಯಿ ಕಾಠಿಯಾವಾಡಿ', 'ದಿ ಕಾಶ್ಮೀರ್ ಫೈಲ್ಸ್', 'ಮಿ. ವಸಂತ ರಾವ್', 'ತುಜ್ಯಾ ಸಾಥಿ ಕಹೀ ಹಿ', 'ರಾಕೆಟ್ರಿ: ದಿ ನಂಬಿ ಎಫೆಕ್ಟ್', 'ಇರವಿನ್ ನಿಳಲ್', ಸಾಕ್ಷ್ಯಚಿತ್ರಗಳಾದ 'ಆಲ್ ದಟ್ ಬ್ರೆಥ್ಸ್' ಮತ್ತು 'ದಿ ಎಲಿಫೆಂಟ್ ವಿಸ್ಪರರ್ಸ್' ಸಹ ಸ್ಥಾನ ಪಡೆದಿವೆ.

ಒಳ ಪುಟಗಳು

ದೇವನಹಳ್ಳಿ: 55 ಪ್ರಯಾಣಿಕರನ್ನು ಬಿಟ್ಟು ಹಾರಿದ ವಿಮಾನ! 11

ಕಳಸಾ ತಿರುವು: ಸ್ಥಳ ಪರಿಶೀಲಿಸಿದ ಕೇಂದ್ರ ತಂಡ 7

ಜನಾರ್ದನ ರೆಡ್ಡಿ ಆಸ್ತಿ ಮುಟ್ಟುಗೋಲಿಗೆ ವಿಳಂಬ ಏಕೆ: ಹೈಕೋರ್ಟ್ ಪ್ರಶ್ನೆ 3C

ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಆಯೋಜನೆ • 15ರಂದು ವಿವಿಧ ರೆಜಿಮೆಂಟ್‌ಗಳಿಂದ ಪಥಸಂಚಲನ

ಸೇನಾ ದಿನ: ಪರೇಡ್, ಶಕ್ತಿ ಪ್ರದರ್ಶನಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜ.15ರಂದು ನಡೆಯುವ ಸೇನಾ ದಿನದ ಪರೇಡ್‌ಗೆ ಎಂಇಜಿ ಕೇಂದ್ರದಲ್ಲಿ ಸಿದ್ಧತೆಗಳು ಭರದಿಂದ ನಡೆದಿವೆ. ಇದೇ ಪ್ರಥಮ ಬಾರಿಗೆ ರಾಷ್ಟ್ರ ರಾಜಧಾನಿ ನವದೆಹಲಿಯಿಂದ ಹೊರಗೆ ದೇಶದ ಎಲ್ಲ ಪ್ರಮುಖ ಸ್ಥಳಗಳಲ್ಲಿ ಮಹತ್ವದ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಆಯೋಜಿಸಲು ಕೇಂದ್ರ ಸರ್ಕಾರ ಸೂಚಿಸಿತ್ತು. ಹೀಗಾಗಿ, ಈ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ.

ರವಿ ಮುರುಗನ್

ಭಾರತದಲ್ಲಿ ಕೊನೆಯದಾಗಿ ಕಾರ್ಯನಿರ್ವಹಿಸಿದ್ದ ಬ್ರಿಟಿಷ್ ಕಮಾಂಡರ್ 'ಇನ್ ಚೀಫ್' ಜನರಲ್ ಫ್ರಾನ್ಸಿಸ್ ರಾಯ್ ಬುಚರ್ ಅವರಿಂದ ಭಾರತೀಯ ಸೇನೆಯ 'ಕಮಾಂಡರ್ ಇನ್ ಚೀಫ್' ಆಗಿ 1949ರ ಜನವರಿ 15ರಂದು ಲೆಫ್ಟಿನೆಂಟ್ ಜನರಲ್ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಧಿಕಾರ ಸ್ವೀಕರಿಸಿದ್ದರು. ಬ್ರಿಟಿಷರು ಅಧಿಕಾರ ಹಸ್ತಾಂತರಿಸಿದ ಈ ಐತಿಹಾಸಿಕ ದಿನವನ್ನು ಸೇನಾ ದಿನ ಎಂದು ಆಚರಿಸಲಾಗುತ್ತಿದೆ.

ಸೇನಾ ದಿನದ ಪರೇಡ್‌ಗಾಗಿ ಎಂಇಜಿ ಸೆಂಟರ್‌ನ 'ಗೋವಿಂದಸ್ವಾಮಿ ಸ್ಕ್ವೇರ್ ಡ್ರಿಲ್'ನಲ್ಲಿ ಹಲವು ದಿನಗಳಿಂದ ವಿವಿಧ ರೆಜಿಮೆಂಟ್‌ಗಳ ಯೋಧರು ತಾಲೀಮು ಕೈಗೊಂಡಿದ್ದಾರೆ.

ಸೇನಾ ದಿನದಂದು ಸುಮಾರು 500 ಯೋಧರಿಂದ ಆಕರ್ಷಕ ಪಥ ಸಂಚಲನ ನಡೆಯಲಿದೆ. ಜತೆಗೆ 'ಟಿ-90' ಟ್ಯಾಂಕ್‌ಗಳು, 155ಎಂ.ಎಂ. ಬೊಫೋರ್ಸ್ ಗನ್ ಸೇರಿದಂತೆ ಸೇನೆಯ ಸಾಮರ್ಥ್ಯ ಬಿಂಬಿಸುವ ವಿವಿಧ ಯುದ್ಧ ಟ್ಯಾಂಕ್‌ಗಳು, ರೇಡಾರ್‌ಗಳ ಪ್ರದರ್ಶನವೂ ನಡೆಯಲಿದೆ.

'ದೆಹಲಿಯಿಂದ ಹೊರಗೆ ಆಯೋಜಿಸುತ್ತಿರುವ ಈ ರಾಷ್ಟ್ರೀಯ ಕಾರ್ಯಕ್ರಮದ ಆತಿಥ್ಯ ವಹಿಸಲಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ. ಸೇನೆಯ ಬಗ್ಗೆ ಕರ್ನಾಟಕದ ಜನರು ಅಪಾರ ಗೌರವ ಹೊಂದಿದ್ದಾರೆ ಮತ್ತು ಇಂತಹ ಕಾರ್ಯಕ್ರಮಗಳನ್ನು ವೀಕ್ಷಿಸಲು ಉತ್ಸುಕರಾಗಿದ್ದಾರೆ. ಪಥಸಂಚಲನದ ಸಂದರ್ಭದಲ್ಲಿ ಧ್ರುವ ಮತ್ತು ರುದ್ರ ಹೆಲಿಕಾಪ್ಟರ್‌ಗಳ ಪ್ರದರ್ಶನವೂ ನಡೆಯಲಿದೆ' ಎಂದು ಕರ್ನಾಟಕ ಮತ್ತು ಕೇರಳ ಉಪ ವಲಯದ ಜನರಲ್ ಆಫೀಸರ್ ಕಮಾಂಡಿಂಗ್ ಮೇಜರ್ ಜನರಲ್ ರವಿ ಮುರುಗನ್ ವಿವರಿಸಿದರು.

ಬೆಂಗಳೂರಿನ ಎಂಇಜಿ ಸೆಂಟರ್‌ನಲ್ಲಿ ಮಂಗಳವಾರ ನಡೆದ ಪಥಸಂಚಲನದ ತಾಲೀಮಿನಲ್ಲಿ ಬಾಂಬೆ ಎಂಜಿನಿಯರ್ಸ್ ಗ್ರೂಪ್ ಆ್ಯಂಡ್ ಸೆಂಟರ್‌ನ ಯೋಧರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂದು ಮದ್ರಾಸ್ ಎಂಜಿನಿಯರಿಂಗ್ ಯುದ್ಧ ಸ್ಮಾರಕದಲ್ಲಿ ಸೇನಾ ಪಡೆ ಮುಖ್ಯಸ್ಥ ಮೇಜರ್ ಜನರಲ್ ಮನೋಜ್ ಪಾಂಡೆ ಅವರು ಹುತಾತ್ಮರಾದ ಯೋಧರಿಗೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ನಂತರ, ಪಥಸಂಚಲನ ವೀಕ್ಷಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಶೌರ್ಯ ಪ್ರಶಸ್ತಿ ಹಾಗೂ ಅಸಾಧಾರಣ ಕಾರ್ಯಕ್ಷಮತೆ ತೋರಿದ ಘಟಕಗಳಿಗೆ ಪ್ರಶಂಸಾ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಿದ್ದಾರೆ' ಎಂದು ತಿಳಿಸಿದರು.

'ಕಳೆದ ವಾರ ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು, ರಕ್ಷಣಾ ಪಡೆಗಳ ಯೋಧರ ಕುಟುಂಬದ ಸದಸ್ಯರು ಸೇರಿದಂತೆ ಸಾರ್ವಜನಿಕರಿಗೆ ಪಥಸಂಚಲನದ ತಾಲೀಮು ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು. ಸುಮಾರು 11 ಸಾವಿರ ಮಂದಿ ಈ ಪಥಸಂಚಲನ ವೀಕ್ಷಿಸಿದ್ದಾರೆ. ಜ.15ರ ಸಂಜೆ ನಡೆಯುವ 'ಮಿಲಿಟರಿ ಟ್ಯಾಟೂ' ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಈ ಬಾರಿ ಸೇನಾ ದಿನ ನಡೆಯುತ್ತಿರುವುದು ಹೆಮ್ಮೆಯ ವಿಷಯ. ದೆಹಲಿಯ ಭಾಗವಹಿಸಿದ್ದೆ. ಈಗ ಮತ್ತೊಮ್ಮೆ ಭಾಗವಹಿಸುವ ಅವಕಾಶ ದೊರೆತಿದೆ

ಶಿವನಗೌಡ

ಎಂಇಜಿ ಸೆಂಟರ್ ಯೋಧ

ಭಾಗವಹಿಸುವ ರೆಜಿಮೆಂಟ್‌ಗಳು

- ಆರ್ಮಿ ಸರ್ವಿಸ್ ಕಾರ್ಪ್ಸ್
- ರೆಜಿಮೆಂಟ್ ಆಫ್ ಆರ್ಟಿಲರಿ
- ಬಾಂಬೆ ಎಂಜಿನಿಯರ್ಸ್ ಗ್ರೂಪ್ ಆ್ಯಂಡ್ ಸೆಂಟರ್
- ಮಹಾರ್ ರೆಜಿಮೆಂಟ್ ಸೆಂಟರ್
- ಮದ್ರಾಸ್ ರೆಜಿಮೆಂಟ್ ಸೆಂಟರ್
- ಆರ್ಮಿ ಏವಿಯೇಷನ್ ಕೋರ್ ಮಿಲಿಟರಿ ಬ್ಯಾಂಡ್
- 2 ಸಿಗ್ನಲ್ ಟ್ರೈನಿಂಗ್ ಸೆಂಟರ್, ಗೋವಾ

ಸುದ್ದಿ 2 ನಿಮಿಷ

ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಜ.29ಕ್ಕೆ: ಸಚಿವ ವಿ. ಸೋಮಣ್ಣ

ಬೆಂಗಳೂರು: ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಗ್ರಹಾರ ದಾಸರಹಳ್ಳಿ ವಾರ್ಡ್‌ನ ಎಂ.ಸಿ. ಬಡಾವಣೆಯಲ್ಲಿ, 300 ಹಾಸಿಗೆಗಳ ಸಾಮರ್ಥ್ಯದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಉದ್ಘಾಟನೆಯು ಜ. 29ಕ್ಕೆ ನಡೆಯಲಿದೆ ಎಂದು ಸ್ಥಳೀಯ ಶಾಸಕರು ಆದ ಸಚಿವ ವಿ.ಸೋಮಣ್ಣ ತಿಳಿಸಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ರಸ್ತೆ, ಸೇತುವೆ, ಆಸ್ಪತ್ರೆ, ಕ್ರೀಡಾಂಗಣಗಳ ಉದ್ಘಾಟನೆ ಕುರಿತು ವಿಧಾನ ಸೌಧದಲ್ಲಿ ಮಂಗಳವಾರ ಅಧಿಕಾರಿಗಳ ಜತೆ ಸಭೆ ನಡೆಸಿದ ಅವರು, ಕಾರ್ಯಕ್ರಮದ ಸಿದ್ಧತೆಗೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡಿದರು. ಮಾಗಡಿ ರಸ್ತೆ ಪೊಲೀಸ್ ಠಾಣೆಯ ನೂತನ ಕಟ್ಟಡ, ಪೈಪ್‌ಲೈನ್ ರಸ್ತೆಯ ನೂತನ ಮೇಲ್ಸೇತುವೆ, ಮಾಗಡಿ ರಸ್ತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೊಸ ಕಟ್ಟಡ, ನವೀಕರಣಗೊಂಡಿರುವ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದ ಉದ್ಘಾಟನೆಯೂ ಅದೇ ದಿನ ನಡೆಯಲಿದೆ ಎಂದರು.

'ಆಸ್ಪತ್ರೆ ನಿರ್ಮಿಸಲು ಕೋವಿಡ್ ಅವಧಿಯಲ್ಲಿ ನಿರ್ಧರಿಸಲಾಗಿತ್ತು. ಅತ್ಯಂತ ವೇಗವಾಗಿ ಕಾಮಗಾರಿ ಪೂರ್ಣಗೊಳಿಸಲಾಗಿದೆ' ಎಂದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ವಸತಿ ಇಲಾಖೆ ಕಾರ್ಯದರ್ಶಿ ಜೆ. ರವಿಶಂಕರ್ ಸಭೆಯಲ್ಲಿದ್ದರು.

'ದಾಖಲೆಗಳು ಇತಿಹಾಸದ ಭಾಗ'

ಬೆಂಗಳೂರು: 'ಒಂದು ದೇಶದ ಸಂಸ್ಕೃತಿ ನಾಶವಾದರೇ, ಆ ದೇಶದ ಇತಿಹಾಸವೇ ನಾಶವಾದಂತೆ' ಎಂದು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಗವಿಸಿದ್ದಯ್ಯ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿ ಇತಿಹಾಸ ವಸ್ತು ಸಂಗ್ರಹಾಲಯ ಮತ್ತು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 'ಚಾರಿತ್ರಿಕ ದಾಖಲೆಗಳು ಮತ್ತು ಛಾಯಾ ಚಿತ್ರಗಳ ಪ್ರದರ್ಶನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇತಿಹಾಸದ ಪರಂಪರೆಯೆಂದರೆ ಕಟ್ಟಡಗಳು, ಉಡುಗೆ–ತೊಡುಗೆಗಳು, ಸ್ಮಾರಕಗಳು ಹಾಗೂ ನಾಣ್ಯಗಳು ಅಷ್ಟೇ ಅಲ್ಲ, ದಾಖಲೆಗಳ ಪರಂಪರೆಯು ಇತಿಹಾಸದ ಭಾಗವೇ ಆಗಿದೆ' ಎಂದು ತಿಳಿಸಿದರು.

ಛಾಯಾ ಚಿತ್ರಗಳ ಪ್ರದರ್ಶನದಲ್ಲಿ ಮೈಸೂರು ಸಂಸ್ಥಾನದ ಆದೇಶಗಳು, ಪತ್ರ ವ್ಯವಹಾರಗಳು, ಸುತ್ತೋಲೆಗಳು. ಮೈಸೂರು ಮಹಾರಾಜರು ಮತ್ತು ದಿವಾನರ ಛಾಯಾ ಚಿತ್ರಗಳು, ಆಹ್ವಾನ ಪತ್ರಗಳು, ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳು ಮತ್ತು ಕರ್ನಾಟಕದ ಮುಖ್ಯಮಂತ್ರಿಗಳ ಛಾಯಾ ಚಿತ್ರಗಳು ಸೇರಿದಂತೆ 120ಕ್ಕೂ ಹೆಚ್ಚಿನ ದಾಖಲೆಗಳು ಮತ್ತು ಛಾಯಾ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕುಲಸಚಿವ ಎನ್. ಮಹೇಶ್ ಬಾಬು ಪ್ರದರ್ಶನವನ್ನು ಉದ್ಘಾಟಿಸಿದರು.

ಒತ್ತುವರಿ: ಬಿಡಿಎ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ನಿರ್ದೇಶನ

ಬೆಂಗಳೂರು: 'ಕೊಡಿಗೆಹಳ್ಳಿ ಮತ್ತು ಕೋತಿಹೊಸಹಳ್ಳಿಯ ಖಾಸಗಿ ಕಂಪನಿಗಳು ಸರ್ಕಾರಿ ಜಮೀನು ಒತ್ತುವರಿ ಮಾಡಿ ವಸತಿ ಸಮುಚ್ಚಯ ನಿರ್ಮಿಸಲು ಅವಕಾಶ ಕಲ್ಪಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಎಂಟು ಮಂದಿ ಅಧಿಕಾರಿಗಳ ವಿರುದ್ಧ ಕಾನೂನು ಮತ್ತು ಸೇವಾ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್, ಬಿಡಿಎ ಆಯುಕ್ತರಿಗೆ ನಿರ್ದೇಶಿಸಿದೆ.

'ಸರ್ಕಾರಿ ಜಾಗದ ಒತ್ತುವರಿ ತೆರವಿಗೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಕೊಡಿಗೆಹಳ್ಳಿಯ ನಿವಾಸಿ ಅಶ್ವತ್ಥ ನಾರಾಯಣ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಸರ್ಕಾರಿ ವಕೀಲರ ಪ್ರಮಾಣ ಪತ್ರ ಹಾಜರುಪಡಿಸಿ, ಒತ್ತುವರಿ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ತನಿಖೆ ನಡೆಸಿ ಸಲ್ಲಿಸಿರುವ ವರದಿ ಮತ್ತು ಯಲಹಂಕ ತಹಶೀಲ್ದಾರ್ ನೀಡಿರುವ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಒದಗಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಪ್ರಕರಣದಲ್ಲಿ ತಪ್ಪಿತಸ್ಥ ಬಿಡಿಎ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಆಯುಕ್ತರಿಗೆ ನಿರ್ದೇಶಿಸಿತು. 'ಒತ್ತುವರಿ ಪ್ರದೇಶವನ್ನು ಮುಂದಿನ 15 ದಿನಗಳಲ್ಲಿ ತೆರವುಗೊಳಿಸಬೇಕು' ಎಂದು ಯಲಹಂಕ ತಹಶೀಲ್ದಾರ್‌ಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 2ಕ್ಕೆ ಮುಂದೂಡಿದೆ.

ಗುತ್ತಿಗೆದಾರರ ಪ್ರತಿಭಟನೆ, ಕಾಮಗಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣಗೊಂಡಿರುವ ಕಾಮಗಾರಿಗೆ ಬಿಲ್ ಪಾವತಿ ಮಾಡಬೇಕೆಂದು ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿರುವ ಬಿಬಿಎಂಪಿ ಗುತ್ತಿಗೆದಾರರ ಸಂಘದ ಸದಸ್ಯರು, ನಗರದ ಹಲವೆಡೆ ಕಾಮಗಾರಿಗಳನ್ನು ಮಂಗಳವಾರ ಸ್ಥಗಿತಗೊಳಿಸಿದರು.

25 ತಿಂಗಳಿಂದ ಬಾಕಿ ಇರುವ ಬಿಲ್ ಪಾವತಿಸಬೇಕು. ಕನಿಷ್ಠ ಆರು ತಿಂಗಳ 'ಜನರಲ್ ಎಲ್‌ಒಸಿ' ನೀಡಬೇಕು ಎಂದು ಆಗ್ರಹಿಸಿ ಸೋಮವಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ ಆರಂಭವಾಗಿದೆ. ಗುತ್ತಿಗೆದಾರರು ಮಂಗಳವಾರ ಹಲವು ಮುಖ್ಯರಸ್ತೆ, ವಾರ್ಡ್ ರಸ್ತೆಗಳ ಕಾಮಗಾರಿಯನ್ನು ನಿಲ್ಲಿಸಿ, ಪ್ರಕಟಣೆಯನ್ನು ಲಗತ್ತಿಸಿದರು.

ನಗರದಲ್ಲಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿರುವ ಗುತ್ತಿಗೆದಾರರು ಆ ಸ್ಥಳದಲ್ಲಿ ಪ್ರಕಟಣೆ ಲಗತ್ತಿಸಿದ್ದಾರೆ

'ವಿಧಾನಸಭಾ ಕ್ಷೇತ್ರವಾರು ಕಾಮಗಾರಿಗಳನ್ನು ನಿಲ್ಲಿಸಿ, '25 ತಿಂಗಳಿಂದ ಬಿಲ್ ಬಾಕಿ ಇರುವುದರಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿದೆ' ಎಂಬ ಫಲಕವನ್ನು ಹಾಕಿ ನಾಗರಿಕರಿಗೆ ಮಾಹಿತಿ ನೀಡುತ್ತಿದ್ದೇವೆ. ಬುಧವಾರ ಹೋರಾಟವನ್ನು ತೀವ್ರಗೊಳಿಸಲಿದ್ದೇವೆ. ಮುಂದಿನ ದಿನಗಳಲ್ಲಿ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರೂ ನಮ್ಮೊಂದಿಗೆ ಪ್ರತಿಭಟನೆ ನಡೆಸಲಿದ್ದಾರೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ನಂದಕುಮಾರ್ ಅವರು ತಿಳಿಸಿದರು.

'ಸಾಕಷ್ಟು ಮನವಿ ಮಾಡಿದ್ದೇವೆ. ಬಿಬಿಎಂಪಿ ಆಯುಕ್ತರು ಗುತ್ತಿಗೆದಾರರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರ ಭರವಸೆಗಳು ಈಡೇರಿಲ್ಲ. ಮುಖ್ಯಮಂತ್ರಿಯವರೇ ಮಧ್ಯಪ್ರವೇಶಿಸಿ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ. ಮಂಜುನಾಥ್ ಅವರು ಒತ್ತಾಯಿಸಿದರು.

'ಬಫರ್ ಝೋನ್‌ನಲ್ಲಿ ಸಾರ್ವಜನಿಕ ಸೌಲಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆಯ ಬಫರ್ ಝೋನ್, ಮೇಲ್ಸೇತುವೆ ಕೆಳಭಾಗದಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಮಂಗಳವಾರ ವಿವಿಧ ಸ್ಥಳಗಳ ಪರಿಶೀಲನೆ ನಡೆಸಿ ಅವರು, ರಾಜಕಾಲುವೆ ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ. ಅದರಲ್ಲಿ ಒಂದಷ್ಟು ಬಫರ್‌ಝೋನ್‌ನಲ್ಲಿ ಸ್ಥಳಾವಕಾಶ ಸಿಗಲಿದೆ. ಎಲ್ಲಿ ಒಳಚರಂಡಿ ನೀರು ಹರಿವು ಇರುವುದಿಲ್ಲವೋ ಅಲ್ಲಿ ನಾಗರಿಕರಿಗೆ ಕುಳಿತುಕೊಳ್ಳುವ ಸೌಲಭ್ಯ ಒದಗಿಸುವ ಜೊತೆಗೆ ಗಿಡಗಳನ್ನು ಬೆಳೆಸಲಾಗುತ್ತದೆ ಎಂದರು.

ಮೇಲುರಸ್ತೆಗಳ ಕೆಳಭಾಗದಲ್ಲಿ ಶೌಚಾಲಯ, ಆಸನ ಸೌಲಭ್ಯ ಕಲ್ಪಿಸಲಿದ್ದು, ಗಿಡಗಳನ್ನು ಬೆಳೆಸಲಾಗುತ್ತದೆ. ಪುರಭವನದ ಎದುರು ಸಾರ್ವಜನಿಕ ಸ್ಥಳ ನಿರ್ಮಿಸಲಾಗುತ್ತಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದರು.

ದಕ್ಷಿಣ ವಲಯದಲ್ಲಿ ಪರಿಶೀಲನೆ ಸಂದರ್ಭದಲ್ಲಿ ರಸ್ತೆಗಳಲ್ಲಿ ಅಪಾಯದ ಸ್ಥಿತಿಯಲ್ಲಿರುವ ಮರದ ಕೊಂಬೆಗಳನ್ನು ಕಟಾವು ಮಾಡಲು ಸೂಚಿಸಿದರು. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಪಾದಚಾರಿ ಮಾರ್ಗದಿಂದ ತೆರವು ಮಾಡಲು ಎಂಜಿನಿಯರ್‌ಗಳಿಗೆ ಆದೇಶಿಸಿದರು.

ಇಂಡಿಯನ್ ಮೋಟರ್ಸ್ ಕಾರುಗಳ ಮಳಿಗೆ ಪಾದಚಾರಿ ಮಾರ್ಗದಲ್ಲಿ ರ‍್ಯಾಂಪ್ ನಿರ್ಮಿಸಿದ್ದು, ಅದನ್ನು ತೆರವುಗೊಳಿಸಿ, ಮಾಲೀಕರಿಗೆ ₹5 ಸಾವಿರ ದಂಡ ವಿಧಿಸಲು ಸೂಚಿಸಿದರು. ಗಣೇಶ ಮಂದಿರದಲ್ಲಿ 'ನಮ್ಮ ಕ್ಲಿನಿಕ್' ಸಿದ್ಧಗೊಂಡಿದ್ದು, ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಿಬ್ಬಂದಿಗೆ ಹೇಳಿದರು. ವಲಯದಲ್ಲಿ ಒತ್ತುವರಿ ತೆರವು ಜಾಗದಲ್ಲಿ ಉದ್ಯಾನ ನಿರ್ಮಿಸುತ್ತಿರುವ ಬಗ್ಗೆ ಆಯುಕ್ತರು ಮೆಚ್ಚುಗೆ ವ್ಯಕ್ತಪಡಿಸಿದರು.

ತರಬೇತಿ: 'ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳ ಸಂದರ್ಭದಲ್ಲಿ ಯಾವ ರೀತಿಯ ಸಾಮಗ್ರಿಗಳನ್ನು ಉಪಯೋಗಿಸಬೇಕು, ಹೇಗೆ ಬಳಸಬೇಕು, ಸುರಕ್ಷತಾ ಕ್ರಮಗಳನ್ನು ಹೇಗೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರಾಧಿಕಾರದ (ಬಿಐಎಎಲ್) ವತಿಯಿಂದ ನಮ್ಮ ಎಂಜಿನಿಯರ್‌ಗಳಿಗೆ ಉನ್ನತಮಟ್ಟದ ತರಬೇತಿಯನ್ನು ಕೊಡಿಸಲಾಗುತ್ತಿದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

ನಗರದ ಮುಖ್ಯ ರಸ್ತೆಗಳಲ್ಲಿ ಬಹುತೇಕ ಎಲ್ಲ ಗುಂಡಿಗಳನ್ನು ಈ ವಾರಾಂತ್ಯಕ್ಕೆ ಮುಚ್ಚಲಾಗುವುದು. ರಸ್ತೆ ಗುಂಡಿ ಹಾಗೂ ಇತರೆ ಸಮಸ್ಯೆ ಸೇರಿದಂತೆ ದಿನಕ್ಕೆ ಸುಮಾರು 600 ದೂರುಗಳು 'ಫಿಕ್ಸ್ ಮೈ ಸ್ಟ್ರೀಟ್ ' ನಲ್ಲಿ (ಎಫ್ ಎಂ ಎಸ್) ಬರುತ್ತಿವೆ' ಎಂದರು.

ವಲಯ ಜಂಟಿ ಆಯುಕ್ತ ಜಗದೀಶ್ ನಾಯ್ಕ್, ವಲಯ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣಾ, ವಲಯ ಆರೋಗ್ಯಾಧಿಕಾರಿ ಡಾ. ಸುರೇಶ್ ಕುಮಾರ್ ಇದ್ದರು.

ಕಡಲೆಕಾಯಿ ಪರಿಷೆ, ಆಹಾರ ಮೇಳ ಜ.14ರಿಂದ

ಬೆಂಗಳೂರು: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಶಿರಡಿ ಶ್ರೀಸಾಯಿ ಮಂದಿರ ಹಾಗೂ ದತ್ತಪೀಠದಿಂದ ಜ. 14 ಮತ್ತು 15ರಂದು ಕಡಲೆಕಾಯಿ ಪರಿಷೆ ಮತ್ತು ಆಹಾರ ಮೇಳವನ್ನು ಆಯೋಜಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ವಡ್ಡರಹಳ್ಳಿಯ ಶ್ರೀಸಾಯಿ ಮಂದಿರ ಹಾಗೂ ದತ್ತಪೀಠದಲ್ಲಿ ನಡೆಯುವ ಕಡಲೆಕಾಯಿ ಪರಿಷೆಯನ್ನು ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ವಿಶ್ವನಾಥ್ ಉದ್ಘಾಟಿಸುವರು ಎಂದು ಪ್ರಕಟಣೆ ತಿಳಿಸಿದೆ.

ಹೋರಾಟಕ್ಕೆ ಬೆಂಬಲ ಇಲ್ಲ: ಹನುಮಂತಪ್ಪ

ಬೆಂಗಳೂರು: 'ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ವಿರೋಧಿಸಿ ನಡೆಯುವ ಪ್ರತಿಭಟನೆಗಳಲ್ಲಿ ಅಲೆಮಾರಿಗಳು ಭಾಗವಹಿಸುತ್ತಾರೆಂದು ಅನಂತ ನಾಯಕ್ ಎಂಬುವವರು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿದ್ದಾರೆ. ಆದರೆ, ಈ ಹೇಳಿಕೆಯನ್ನು ಖಂಡಿಸುತ್ತೇವೆ' ಎಂದು ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಲ್. ಹನುಮಂತಪ್ಪ ತಿಳಿಸಿದ್ದಾರೆ.

'ಆಯೋಗದ ಶಿಫಾರಸು ನಾವು ಒಪ್ಪಿದ್ದೇವೆ. ಶಿಫಾರಸು ಜಾರಿಗೊಳಿಸಲು ನಡೆಯುತ್ತಿರುವ ಹೋರಾಟದಲ್ಲೂ ನಾವು ಪಾಲ್ಗೊಂಡಿದ್ದೇವೆ. ಆಯೋಗದ ವರದಿಯಿಂದ ಏನಾದರೂ ಅನ್ಯಾಯ ಕಂಡುಬಂದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುತ್ತೇವೆ. ವರದಿ ವಿರೋಧಿಸಿ ನಡೆಯುವ ಹೋರಾಟವನ್ನು ಮಹಾಸಭಾ ಬೆಂಬಲಿಸುವುದಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಾಷ್ಟ್ರೀಯ ದ್ರಾವಿಡ ಸಂಘ: ಉದ್ಘಾಟನೆ ನಾಳೆ'

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹೇರುತ್ತಿರುವ ಆರ್ಯ ಸಂಸ್ಕೃತಿಗೆ ವಿರುದ್ಧವಾಗಿ ದ್ರಾವಿಡ ಸಂಸ್ಕೃತಿ ಪ್ರಸಾರ ಮಾಡಲು ಅಸ್ತಿತ್ವಕ್ಕೆ ತಂದಿರುವ ರಾಷ್ಟ್ರೀಯ ದ್ರಾವಿಡ ಸಂಘದ (ಆರ್‌ವಿಡಿ) ಉದ್ಘಾಟನೆ ಗುರುವಾರ ನಡೆಯಲಿದೆ ಎಂದು ಸಂಘಟನೆ ಮುಖಂಡ ಅಗ್ನಿ ಶ್ರೀಧರ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಮಹಾರಾಣಿ ಕಾಲೇಜು ಪಕ್ಕದಲ್ಲಿರುವ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಭಾಂಗಣದಲ್ಲಿ ಬೆಳಿಗ್ಗೆ 10.30ರಿಂದ ಸಂಘಟನೆ ಉದ್ಘಾಟನೆಗೊಳ್ಳಲಿದೆ. ಚಿಂತಕ ಬಂಜಗೆರೆ ಜಯಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡುವರು. ಶಾಸಕ ಸತೀಶ ಜಾರಕಿಹೊಳಿ ಉದ್ಘಾಟಿಸುವರು. ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಕಾರ್ಯದರ್ಶಿ ಜಿ.ಬಿ.ಪಾಟೀಲ ಮುಖ್ಯ ಅತಿಥಿಯಾಗಿದ್ದು, ವಿಶೇಷ ಅತಿಥಿಗಳಾಗಿ ಚಿತ್ರಸಾಹಿತಿ ಕವಿರಾಜ್, ಕ್ರಿಕೆಟ್ ಪಟು ವೇದಾ ಕೃಷ್ಣಮೂರ್ತಿ ಪಾಲ್ಗೊಳ್ಳುವರು' ಎಂದರು. 'ದ್ರಾವಿಡ ಎಂಬುದು ಒಂದು ಧರ್ಮವಲ್ಲ. ಅದೊಂದು ಸಂಸ್ಕೃತಿ. ದ್ರಾವಿಡ ಸಂಸ್ಕೃತಿ ಒಂದು ಕಡಲು. ಅದಕ್ಕೆ ಬಂದು ಸೇರಿಕೊಂಡ ಆರ್ಯ ಧರ್ಮ ಎಂಬ ಉಪನದಿ ಇಡೀ ಕಡಲನ್ನೇ ವಿಷಮಯಗೊಳಿಸುತ್ತಿದೆ. ದ್ರಾವಿಡ ಸಂಸ್ಕೃತಿಯನ್ನು ವಿಷ ಮುಕ್ತಗೊಳಿವುದು ಈ ಸಂಘದ ಗುರಿ' ಎಂದರು.

ಜನೌಷಧಿ ಕೇಂದ್ರವನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಂಗಳವಾರ ಉದ್ಘಾಟಿಸಿದರು. ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಮತ್ತು ಡಾ. ಸಿ. ಎನ್ ಮಂಜುನಾಥ್ ಇದ್ದರು.

ಮಲ್ಲೇಶ್ವರ: ಜನೌಷಧ ಕೇಂದ್ರದ ಉದ್ಘಾಟನೆ

ಬೆಂಗಳೂರು: ಮಲ್ಲೇಶ್ವರದ ಗಾಂಧಿ ಗ್ರಾಮದಲ್ಲಿ ಉನ್ನತೀಕರಿಸಿದ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಧಾನಮಂತ್ರಿ ಜನೌಷಧ ಕೇಂದ್ರವನ್ನು ಆದಿಚುಂಚನಗಿರಿಯ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಂಗಳವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ನಿರ್ಮಲಾನಂದನಾಥ ಸ್ವಾಮೀಜಿ 'ಮನುಷ್ಯನಿಗೆ ಸಾಧನೆ ಎಷ್ಟು ಮುಖ್ಯವೊ ಅದಕ್ಕಿಂತ ಹೆಚ್ಚು ಮನಸ್ಸಿನ ಆರೋಗ್ಯವೂ ಮುಖ್ಯ. ಮನುಷ್ಯ ಕೋಪ ಮಾಡಿಕೊಳ್ಳದೇ ಸಮಾಧಾನ ಚಿತ್ತದೊಂದಿಗೆ ಸ್ಥಿತಪ್ರಜ್ಞತೆಯನ್ನು ರೂಢಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಸ್ಥಳೀಯರಿಗೆ ಉಚಿತವಾಗಿ ಅತ್ಯುತ್ತಮ ಚಿಕಿತ್ಸೆ ಸಿಗಬೇಕು ಎನ್ನುವ ಉದ್ದೇಶದಿಂದ ಈ ಆಸ್ಪತ್ರೆ ಪ್ರಾರಂಭಿಸಲಾಗಿದೆ. ಇಲ್ಲಿ ಪರಿಣತ ವೈದ್ಯರಿದ್ದು, ವರ್ಚ್ಯುಯಲ್ ಕ್ಲಿನಿಕ್ ಕೂಡ ಇದೆ. ಆಧುನಿಕತೆ, ಒತ್ತಡ, ವೃತ್ತಿಗಳ ಸಂಕೀರ್ಣತೆ, ಜೀವನಶೈಲಿ ಇತ್ಯಾದಿಗಳಿಂದ ಆಯುಸ್ಸು 90 ವರ್ಷಗಳಿಂದ 70 ವರ್ಷಕ್ಕೆ ಇಳಿದಿದೆ. ಆದ್ದರಿಂದ ಆರೋಗ್ಯ ರಕ್ಷಣೆಯ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಈ ಆಸ್ಪತ್ರೆಯಲ್ಲಿ ಎಲ್ಲ ವೈದ್ಯಕೀಯ ಸೌಲಭ್ಯಗಳೂ ಇವೆ' ಎಂದರು.

ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಮಾತನಾಡಿ, 'ಇಂದು ದೇಶದಲ್ಲಿ ಶೇಕಡ 60ರಷ್ಟು ಸಾವುಗಳಿಗೆ ಜೀವನಶೈಲಿಯೇ ಕಾರಣ. ಚಿಕ್ಕ ವಯಸ್ಸಿನವರಲ್ಲೇ ಮಧುಮೇಹ, ಹೃದ್ರೋಗ, ರಕ್ತದೊತ್ತಡ ಕಂಡು ಬರುತ್ತಿದೆ. ಕನಿಷ್ಠ ಪಕ್ಷ ಎಲ್ಲರೂ ದಿನವೂ ಒಂದು ಗಂಟೆ ಕಾಲ ವಾಕಿಂಗ್ ಮಾಡಬೇಕು' ಎಂದು ಸಲಹೆ ನೀಡಿದರು.

'ನಾವು ಹಿಂದಿನವರ ಆಹಾರ ಪದ್ಧತಿಯನ್ನು ಅರಿತು, ರೂಢಿಸಿಕೊಳ್ಳಬೇಕು. ಜನರು ಬೈಸಿಕಲ್, ಮೆಟ್ರೋ ಮೂಲಕ ಸಂಚಾರ ಮಾಡಬೇಕು. ತಂತ್ರಜ್ಞಾನದ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು, ಮನುಷ್ಯ ಸಂಬಂಧಗಳಿಗೆ ಮಹತ್ವ ನೀಡಬೇಕು' ಎಂದು ಅವರು ಕಿವಿಮಾತು ಹೇಳಿದರು.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ. 16 ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್‌ಟ್ಯಾಂಕ್ ಬೆಡ್‌ಏರಿಯಾ, ವಸಂತನಗರ, ಬೆಂಗಳೂರು–560 052. ದೂರವಾಣಿ : 080–22374848

ಇ–ಮೈಲ್: mdvishwakaram2015@gmail.com

ಸಂಖ್ಯೆ: KVCDC/ADM/OSV/CR-52/2022-23 ದಿನಾಂಕ: 10.01.2023

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000ರನ್ವಯ, ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಸೇವೆಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ನೋಂದಾಯಿತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಟೆಂಡರ್ ಶೀರ್ಷಿಕೆ: ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆಯುವ ಬಗ್ಗೆ.

ಟೆಂಡರ್ ಸಂಖ್ಯೆ: KVCDC/ADM/OSV/CR-52/2022-23

ಟೆಂಡರ್ ದಾಖಲೆ ಇ–ಪೋರ್ಟಲ್‌ನಲ್ಲಿ ಅಭ್ಯವಾಗುವ ದಿನಾಂಕ: 10.01.2023

ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 24.01.2023

ಇ–ಟೆಂಡರ್ ಅಧಿಸೂಚನೆಯ ದಾಖಲೆಗಳನ್ನು, ಟೆಂಡರ್ ಸಂಸ್ಕರಣ ಶುಲ್ಕಗಳು, ಇತರೆ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ಮತ್ತು ಸಹಾಯವಾಣಿ ಸಂಖ್ಯೆ: +918046010000/+918068948777 ಅಥವಾ ಕೆಲಸದ ಸಮಯದಲ್ಲಿ ನೀವು ಈ ಕಛೇರಿಯನ್ನು ಸಹ ಸಂರ್ಕಿಸಬಹುದು.

ಸಹಿ/–

ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಸ.ಅ.ನಿ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/4016/ಆಕಾರ್/22-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, #2ನೇ ಮತ್ತು 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 3ನೇ ಬ್ಲಾಕ್ ಹೆಚ್‌ಎಂಟಿ ಬಡಾವಣೆ, ಬಿಡಬ್ಲ್ಯೂಎಸ್‌ಎಸ್‌ಬಿ ವಾಟರ್ ಟ್ಯಾಂಕರ್ ಹತ್ತಿರ, ನಾಗಸಂದ್ರ (ಪೋ) ಬೆಂಗಳೂರು–73.

ಸಂಖ್ಯೆ: ಬೃಬೆಂಮಪಾ/ಕಾಪಾಅ/ದಾವಿ/ಟೆಂಡರ್/16/2022–23 ದಿನಾಂಕ: 10.01.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಅರ್ಹ ಸಮಾಲೋಚಕರಿಂದ ದಾಸರಹಳ್ಳಿ ವಿಭಾಗದ ಈ ಕೆಳಕಂಡ ಕಾಮಗಾರಿ ಸೇವೆಗಳಿಗೆ ಪಿಎಂಸಿ ಸಿದ್ದಪಡಿಸಲು ಸಲಹೆ ಸೇವೆಗಳನ್ನು ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ವೆಚ್ಚ (₹.ಕೋಟಿಗಳಲ್ಲಿ)	ಪಿಎಂಸಿ ಯೋಜನೆಯ ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ದಾಸರಹಳ್ಳಿ ವಲಯ–110 ಹಳ್ಳಿಗಳ ಅನುದಾನ ದಾಸರಹಳ್ಳಿ ಉಪವಿಭಾಗದ ವಾರ್ಡ್ ಸಂಖ್ಯೆ–14, ಶೆಟ್ಟಿಹಳ್ಳಿ ಉಪವಿಭಾಗದ ವಾರ್ಡ್ ಸಂಖ್ಯೆ–12 ಶೆಟ್ಟಿಹಳ್ಳಿ ಸರ್ಕಾರಿ ಶಾಲೆಯಿಂದ ಚಿಕ್ಕಸಂದ್ರದವರೆಗೆ, ಕಾವೇರಿ ಬಡಾವಣೆ, ಬೃಂದಾವನ ಬಡಾವಣೆ, ಚಿನ್ನಮ್ಮ ಬಡಾವಣೆಯ 1, 2 ಮತ್ತು 4ನೇ ಅಡ್ಡರಸ್ತೆಗಳು, ಆರ್.ಕೆ ಬಡಾವಣೆ, ಎ.ವೈ.ಆರ್ ಬಡಾವಣೆ ಮತ್ತು ಭೈರವೇಶ್ವರ ಬಾಬಣ್ಣ ಬಡಾವಣೆಯ 1, 2, 3 ಮತ್ತು 4ನೇ ಅಡ್ಡರಸ್ತೆಗಳು, ದುರ್ಗಾ ಪರಮೇಶ್ವರಿ ದೇವಸ್ಥಾನ ಮತ್ತು ಸುತ್ತಮುತ್ತಲ ಪ್ರದೇಶ ಮೇದರಹಳ್ಳಿ, ಎಲ್.ವಿ ಎನ್‌ಕ್ಲೇವ್, ಸಪ್ತಗಿರಿ ಬಡಾವಣೆಯ 1, 2, 3, 4 ಮತ್ತು 5ನೇ ಅಡ್ಡರಸ್ತೆಗಳು ಸಪ್ತಗಿರಿಯ 6, 7, 8, 9 ಮತ್ತು 10ನೇ ಅಡ್ಡರಸ್ತೆಗಳು, ಶೆಟ್ಟಿಹಳ್ಳಿ ಜನತಾ ಕಾಲೋನಿ (ರಾಗಿ ಹಿಟ್ಟಿನ ಗಿರಣಿ) ಎನ್.ಎಂ.ಹೆಚ್ ಬಡಾವಣೆ ಮತ್ತು ಎಂ.ಹೆಚ್.ಆರ್ ಬಡಾವಣೆ ಸುತ್ತಮುತ್ತ, ಸಿಡೇದಹಳ್ಳಿ, ಜನತಾ ಕಾಲೋನಿ, ಕೆ.ಜಿ ಹಳ್ಳಿಯ 18 ಮತ್ತು 19ನೇ ಅಡ್ಡರಸ್ತೆಗಳು, ಮೇದರಹಳ್ಳಿ ಶ್ರೀದೇವಿ ಬಡಾವಣೆ, ಕಿರ್ಲೋಸ್ಕರ್ ಬಡಾವಣೆ ಮತ್ತು ಸುತ್ತಮುತ್ತ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವ ಪ್ಯಾಕೇಜ್ ಕಾಮಗಾರಿಗಾಗಿ ಯೋಜನೆ ನಿರ್ವಹಣೆ ಸಲಹೆಸೇವೆಗಳನ್ನು ಒದಗಿಸುವುದು. (PMC Service)	25.00	25.00	62500.00

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ಬಿಡ್ ದಾಖಲೆಗಳನ್ನು ದಿನಾಂಕ **12.01.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ದಾಸರಹಳ್ಳಿ ವಲಯ, ಹೆಸರುಘಟ್ಟ ಮುಖ್ಯರಸ್ತೆ, ಬಾಗಲಗುಂಟೆ, ದಾಸರಹಳ್ಳಿ, ಬೆಂಗಳೂರು – 560 073 ಇಲ್ಲಿ ದಿನಾಂಕ **19.01.2023**ರ ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **27.01.2023**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ **30.01.2023**ರ ಸಂಜೆ **4:30** ಗಂಟೆಯ ನಂತರ. (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ **31.01.2023**ರ ಸಂಜೆ **4:30** ಗಂಟೆಯ ನಂತರ. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**.ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ವಚನ ರೂಪಕ, ಸಮೂಹ ವಚನ ಗಾಯನ, ವಚನ ರಸಪ್ರಶ್ನೆ, ವಚನ ಕಂಠಪಾಠ, ವಚನ ಕಥೆ, ವಚನ ಅಂತ್ಯಾಕ್ಷರಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9

ಕನ್ನಡ ವಿಷಯದ ಶೈಕ್ಷಣಿಕ ಕಾರ್ಯಾಗಾರ: ಅತಿಥಿಗಳು: ಎಲ್. ಎನ್. ಮುಕುಂದರಾಜ್, ಅಧ್ಯಕ್ಷತೆ: ಆನಂದರಾಜ್ ಎ., ಉಪಸ್ಥಿತಿ: ಮಂಜುನಾಥ್, ರಾಜಗೋಪಾಲ್ ಆರ್., ಪುರುಷೋತ್ತಮ ಜಿ.ಎಸ್., ಹೊ.ನ. ನೀಲಕಂಠೇಗೌಡ, ರೂಪಶ್ರೀ, ಆಯೋಜನೆ: ಪದವಿ ಪೂರ್ವ ಶಿಕ್ಷಣ ಇಲಾಖೆ, ಸ್ಥಳ: ಬಿ.ವಿ. ರತ್ನಯ್ಯ ಶೆಟ್ಟಿ ಸಭಾಂಗಣ, ವಿ.ಇ.ಟಿ ಸಂಸ್ಥೆ, ಜೆ.ಪಿ. ನಗರ 2ನೇ ಹಂತ, ಬೆಳಿಗ್ಗೆ 9.30

'ಸೌಂದರ್ಯ ಸುಗ್ಗಿ ಪರ್ವ': ಅತಿಥಿಗಳು: ಬಿ.ಕೆ. ಸುಮಾ, ಕೀರ್ತನ್ ಕುಮಾರ್ ಎಂ., ವಾಸು ಬಿ.ಎ., ಆಯೋಜನೆ: ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಸೌಂದರ್ಯ ನಗರ, ಸಿದ್ದೇದಹಳ್ಳಿ, ನಾಗಸಂದ್ರ, ಬೆಳಿಗ್ಗೆ 10.30

ಸ್ಮಾರ್ಟ್ ಆಹಾರ ಪಾಕಶಾಲೆಯ ವಿಚಾರಸಂಕಿರಣ: ಉದ್ಘಾಟನೆ: ಬಿ.ಸಿ. ಪಾಟೀಲ, ಅತಿಥಿಗಳು: ಶಿವಯೋಗಿ ಕಳಸದ, ಶ್ರೀನಿವಾಸಮೂರ್ತಿ, ಶರತ್ ಬಿ., ಪುತ್ರಾ ಜೆ.ಟಿ., ಕುಲದೀಪ್ ಕುಮಾರ್ ರೈನಾ, ಮಹಮ್ಮದ್ ಪರ್ವೇಝ್ ಎಚ್. ಬಂತನಾಳ್, ಆಯೋಜನೆ: ಕೃಷಿ ಇಲಾಖೆ, ಸ್ಥಳ: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಜ್ಞಾನಗಂಗೋತ್ರಿ ಆವರಣ, ಹೊಸ ಬಿ.ಇ.ಎಲ್. ರಸ್ತೆ, ಬೆಳಿಗ್ಗೆ 11

ಕಾಲೇಜು ವಾರ್ಷಿಕೋತ್ಸವ: ಅಧ್ಯಕ್ಷತೆ: ಎನ್.ಆರ್. ಪಂಡಿತ ಆರಾಧ್ಯ, ಅತಿಥಿಗಳು: ನಿರಂಜನ ವಾನಳ್ಳಿ, ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 3

ಸಕ್ಷಮ್ ರಾಷ್ಟ್ರ ಮಟ್ಟದ ಹಣಕಾಸು ಸಾಕ್ಷರತಾ ಸಮಾವೇಶ: ಚಾಲನೆ: ಸಾಧ್ವಿ ನಿರಂಜನ್‌ಜ್ಯೋತಿ, ಉಪಸ್ಥಿತಿ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಸ್ಥಳ: ಲೀಲಾ ಭಾರತೀಯ ಸಿಟಿ ಹೋಟೆಲ್, ಥಣಿಸಂದ್ರ ಮುಖ್ಯರಸ್ತೆ, ಹೆಗಡೆನಗರ, ಮಧ್ಯಾಹ್ನ 3

ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವ: ವೀಣೆ: ಸುಮಾ ಸುಧೀಂದ್ರ ಮತ್ತು ಶಿಷ್ಯರು, ಮೃದಂಗ: ದಾಶರಥಿ ಆರ್. ಕಶ್ಯಪ್, ಘಟ: ರಮೇಶ್ ಐಯ್ಯರ್, ಗಾಯನ: ಭಾರ್ಗವಿ ವೆಂಕಟರಾಮ್, ಪಿಟೀಲು: ನಾಗರಾಜ್ ಮಂಡ್ಯ, ಮೃದಂಗ: ಎಸ್.ವಿ. ಬಾಲಕೃಷ್ಣ, ಘಟ್ಟ: ಎಸ್. ಶ್ರೀಶೈಲನ್, ಗಾಯನ: ವಿಜಯ್ ಪ್ರಕಾಶ್, ಪಿಟೀಲು: ಬಿ.ಕೆ. ರಘು, ಮೃದಂಗ: ಕೆ.ಯು. ಜಯಚಂದ್ರ ರಾವ್, ಘಟ: ಸುಕನ್ಯಾ ರಾಮ್‌ಗೋಪಾಲ್, ಮೋರ್ಸಿಂಗ: ಬಿ.ಎಸ್. ಅರುಣ್ ಕುಮಾರ್, ಆಯೋಜನೆ: ತ್ಯಾಗಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರಮಠ, ಚಾಮರಾಜಪೇಟೆ, ಸಂಜೆ 5ರಿಂದ

'ಬಿಳಿ ಅಂಗಿ ಓವರ್ ಕೋಟು' ನಾಟಕ ಪ್ರದರ್ಶನ: ನಿರ್ದೇಶನ: ನಿರಂಜನ ಖಾಲಿಕೊಡ, ಅತಿಥಿಗಳು: ಶಶಿಧರ್ ಭಾರಿಘಾಟ್, ಸಿ. ಪಾರ್ವತಮ್ಮ, ಸತೀಶ್ ಕುಮಾರ್ ಎಸ್. ಹೊಸಮನಿ, ಎಂ. ಬೈರೇಗೌಡ, ಆಯೋಜನೆ: ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಕೃಷ್ಣಾಪುರದೊಡ್ಡಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಸಂಜೆ 6.30

ತಿಂಗಳ ಕಾರ್ಯಕ್ರಮ–18: ವಿಷಯ: ಕವಿ ಸಿದ್ಧಲಿಂಗಯ್ಯ ಅವರ ಒಡನಾಟ ಮತ್ತು ಹೋರಾಟ, ಸಂಪನ್ಮೂಲ ವ್ಯಕ್ತಿ: ಶಿವಾಜಿ ಗಣೇಶನ್, ನಿರ್ವಹಣೆ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಆಯೋಜನೆ: ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ನಿಧನ ವಾರ್ತೆ

ಡಾ. ಎಚ್. ಚಂದ್ರಶೇಖರ

ಬೆಂಗಳೂರು: ಭೂ ವಿಜ್ಞಾನಿ ಡಾ.ಎಚ್. ಚಂದ್ರಶೇಖರ (84) ಅವರು ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.



ಭೂ ವಿಜ್ಞಾನ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದ ಚಂದ್ರಶೇಖರ್ ಅವರು, ಕನ್ನಡ ಸಾಹಿತ್ಯ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು.

ಕರ್ನಾಟಕದ ಹಲವು ಶಾಸನಗಳು, ಸ್ಥಳಗಳು, ನದಿಗಳು, ಜಲಪಾತಗಳು ಮತ್ತು ಇತರೆ ಮಾಹಿತಿ ಒಳಗೊಂಡ ಕೃತಿಗಳನ್ನು ರಚಿಸಿದ್ದರು. ಇವರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದರು.

‘ಆನ್‌ಲೈನ್ ಗೇಮಿಂಗ್ ನಿಯಂತ್ರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿತನದ ಹಕ್ಕು, ಸಾಕ್ಷಿ ಮತ್ತು ಸಾಕ್ಷ್ಯಗಳ ಸಂರಕ್ಷಣೆ, ಆನ್‌ಲೈನ್ ಗೇಮಿಂಗ್ ನಿಯಂತ್ರಣ ಸೇರಿದಂತೆ ಅನ್ಯ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕೆಲವು ಪ್ರಮುಖ ಕಾನೂನುಗಳ ಕುರಿತು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯು ಅಧ್ಯಯನ ಆರಂಭಿಸಿದೆ.

ವಿಧಾನಸೌಧದಲ್ಲಿರುವ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರ ಕಚೇರಿಯಲ್ಲಿ ಮಂಗಳವಾರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಕೆ. ದ್ವಾರಕಾನಾಥ್ ಬಾಬು ಈ ವಿಷಯ ತಿಳಿಸಿದರು.

‘ಕಾನೂನು ಮತ್ತು ಸಂಸದೀಯ ವ್ಯವಹಾರಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಸದನದಲ್ಲಿ ಶಾಸಕರ ಕಡ್ಡಾಯ ಹಾಜರಾತಿ, ಅಧಿವೇಶನಗಳಲ್ಲಿ ಸಕ್ರಿಯ ಭಾಗವಹಿಸುವುದು, ಉತ್ತಮ ಶಾಸಕರ ಕರ್ತವ್ಯಗಳ ಕುರಿತೂ ಅಧ್ಯಯನ ನಡೆಸಲಾಗುತ್ತಿದೆ. ಕೆಲವು ವಿಷಯಗಳ ಕುರಿತು ಸಂಸ್ಥೆಯಿಂದಲೇ ಅಧ್ಯಯನ ನಡೆದರೆ, ಕೆಲವು ವಿಷಯಗಳ ಕುರಿತು ಅಧ್ಯಯನದ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಗೆ ವಹಿಸಲಾಗಿದೆ’ ಎಂದರು.

ಕೆಲ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನಗಳು ನಡೆಯುತ್ತಿವೆ. ಕೆಲವೇ ತಿಂಗಳುಗಳಲ್ಲಿ ವರದಿ ನೀಡಲಾಗುವುದು ಎಂದು ತಿಳಿಸಿದರು. ಸಂಸ್ಥೆಯು ಪ್ರಕಟಿಸಿರುವ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಜೆ.ಸಿ.ಮಾಧುಸ್ವಾಮಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಬಿಡುಗಡೆ ಮಾಡಿದರು.

ಆರ್. ಪೂರ್ಣಿಮಾಗೆ ‘ಗೌರಿಸುಂದರ ಪ್ರಶಸ್ತಿ’

ಆರ್.ಪೂರ್ಣಿಮಾ

ಬೆಂಗಳೂರು: ಶ್ರೀ ಗೌರಿ ಸುಂದರ್ ಪ್ರಶಸ್ತಿ ಸಮಿತಿ ನೀಡುವ ‘ಗೌರಿ ಸುಂದರ ವಾರ್ಷಿಕ ಪ್ರಶಸ್ತಿ’ಗೆ ಪತ್ರಕರ್ತೆ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹ 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಕವಿ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಸಮಿತಿಯ ಕಾರ್ಯದರ್ಶಿ ಇಂದಿರಾ ಸುಂದರ್ ಆಯ್ಕೆ ಸಮಿತಿಯಲ್ಲಿದ್ದರು. ಫೆ.5ರಂದು ಇಲ್ಲಿನ ಬಿ.ಪಿ. ವಾಡಿಯಾ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕವಿ ಲಕ್ಷ್ಮಣರಾವ್ ಅವರಿಗೆ ‘ಕನ್ನಡ ಸಾಹಿತ್ಯ ಪ್ರಣತಿ’ ಪ್ರಶಸ್ತಿ

ಬೆಂಗಳೂರು: ಕವಿ ಬಿ.ಆರ್.ಲಕ್ಷ್ಮಣ ರಾವ್ ಅವರನ್ನು ‘ಕನ್ನಡ ಸಾಹಿತ್ಯ ಪ್ರಣತಿ’ ಪ್ರಶಸ್ತಿ ಹಾಗೂ ಗಾಯಕ ಗರ್ತಿಕೆರೆ ರಾಘಣ್ಣ (ಹೋ. ನಾ.ರಾಘವೇಂದ್ರ ಗರ್ತಿಕೆರೆ) ಅವರನ್ನು ‘ಕನ್ನಡ ಸಾಹಿತ್ಯ ಪ್ರಚಾರ ಪ್ರಣತಿ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬಿ.ಆರ್. ಲಕ್ಷ್ಮಣ್ ರಾವ್



ಗರ್ತಿಕೆರೆ ರಾಘಣ್ಣ

ಜ. 21 ರಂದು ಸಂಜೆ ರವೀಂದ್ರ ಕಲಾಕ್ಷೇತ್ರ ಆವರಣದ ಸಂಸ ಬಯಲು ರಂಗಮಂದಿರದಲ್ಲಿ ನಡೆಯುವ ಪ್ರಣತಿ ಪ್ರತಿಷ್ಠಾನದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕವಿ ಡುಂಡಿರಾಜ್, ವಿದ್ವಾಂಸ ಡಾ.ರಾಮಸ್ವಾಮಿ ಅಯ್ಯಂಗಾರ್ ಇರಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರಣತಿ ರಾಘವೇಂದ್ರ ರಾವ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಸಂಕ್ಷಿಪ್ತ ಸುದ್ದಿ

ಸಿಬಿಐ ತನಿಖೆಗೆ ಆಗ್ರಹ: ಸಹಿ ಸಂಗ್ರಹ ಅಭಿಯಾನ

ಬೆಂಗಳೂರು: 'ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ – ಆಪರೇಟಿವ್ ಲಿಮಿಟೆಡ್ ಅವ್ಯವಹಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಒತ್ತಾಯಿಸಿ ಬ್ಯಾಂಕ್‌ನ ಠೇವಣಿದಾರರು ನಗರದಲ್ಲಿ ಮಂಗಳವಾರ ಸಹಿ ಸಂಗ್ರಹ ಅಭಿಯಾನ ನಡೆಸಿದರು.

ಬಸನಗುಡಿಯಲ್ಲಿರುವ ಕಚೇರಿ ಎದುರು ಸೇರಿದ್ದ ಠೇವಣಿದಾರರು, ಭಿತ್ತಿಪತ್ರಗಳನ್ನು ಹಿಡಿದು ಕೆಲ ಹೊತ್ತು ಪ್ರತಿಭಟನೆ ಸಹ ನಡೆಸಿದರು.

'ವಂಚನೆ ಪ್ರಕರಣ ನಡೆದು ಮೂರು ವರ್ಷವಾಗಿದೆ. ಠೇವಣಿದಾರರು ಹಾಗೂ ಷೇರುದಾರರಿಗೆ ಇದುವರೆಗೂ ನ್ಯಾಯ ಸಿಕ್ಕಿಲ್ಲ. ಹೀಗಾಗಿ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ನಾವೆಲ್ಲರೂ ಸಹಿ ಸಂಗ್ರಹ ಮಾಡುತ್ತಿದ್ದೇವೆ. ಸಹಿಯುಳ್ಳ ಮನವಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಲಾಗುವುದು' ಎಂದು ಪ್ರತಿಭಟನಕಾರರು ಹೇಳಿದರು.

ಬಜರಂಗದಳ ಮುಖಂಡನ ಮೇಲೆ ಹಲ್ಲೆ ಯತ್ನ: ಬಂಧನ

ಶಿವಮೊಗ್ಗ: ಸಾಗರ ಪಟ್ಟಣದಲ್ಲಿ ಬಜರಂಗದಳ ಸಹ ಸಂಚಾಲಕ ಸುನಿಲ್ ಮೇಲೆ ಸೋಮವಾರ ಕತ್ತಿಯಿಂದ ಹಲ್ಲೆ ನಡೆಸಲು ಪ್ರಯತ್ನಿಸಿದ ಘಟನೆಗೆ ಸಂಬಂಧಿಸಿ ಪ್ರಮುಖ ಆರೋಪಿ ಸಮೀರ್ ಹಾಗೂ ಆತನ ಗೆಳೆಯರಾದ ಇಮಿಯಾನ್ ಹಾಗೂ ಮನ್ಸೂರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಸಿ.ಸಿ.ಟಿ.ವಿ ದೃಶ್ಯಾವಳಿ ಆಧರಿಸಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಘಟನೆಗೆ ಕೋಮು ಬಣ್ಣ ಪಡೆದುಕೊಂಡಿದ್ದರಿಂದ ಮಂಗಳವಾರ ಬಜರಂಗದಳದ ನೇತೃತ್ವದಲ್ಲಿ ಸಾಗರ ಪಟ್ಟಣ ಬಂದ್ ಮಾಡಿ ಪ್ರತಿಭಟಿಸಲಾಗಿತ್ತು. ಶಾಸಕ ಹರತಾಳು ಹಾಲಪ್ಪ ಕೂಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವೈಯಕ್ತಿಕ ಜಗಳ ಕಾರಣ: 'ಬಜರಂಗ ದಳ ಸಹ ಸಂಚಾಲಕ ಸುನಿಲ್ ಮೇಲೆ ಸಮೀರ್ ನಡೆಸಿದ ಹಲ್ಲೆ ಯತ್ನಕ್ಕೆ ವೈಯಕ್ತಿಕ ಜಗಳ ಕಾರಣ ಹೊರತು ಕೋಮು ದ್ವೇಷವಲ್ಲ' ಎಂದು ಎಸ್‌ಪಿ ಜಿ.ಕೆ. ಮಿಥುನ್‌ಕುಮಾರ್ ಮಂಗಳವಾರ ಇಲ್ಲಿ ಮಾಧ್ಯಮದವರಿಗೆ ತಿಳಿಸಿದರು.

'ತಂಗಿಯನ್ನು ನಾಲ್ಕೈದು ತಿಂಗಳಿನಿಂದ ಸುನಿಲ್ ಚುಡಾಯಿಸುತ್ತಿದ್ದ. ಹಲವು ಬಾರಿಗೆ ಸುನಿಲ್‌ಗೆ ಎಚ್ಚರಿಕೆ ನೀಡಿದ್ದೆ. ತಂಗಿಯ ಫೋನ್ ನಂಬರ್ ಕೂಡ ಕೇಳಿದ್ದ. ಇದರಿಂದ ಕೋಪಗೊಂಡು ಹಲ್ಲೆಗೆ ಮುಂದಾಗಿದ್ದಾಗಿ ವಿಚಾರಣೆ ವೇಳೆ ಸಮೀರ್ ಮಾಹಿತಿ ನೀಡಿದ್ದಾನೆ' ಎಂದು ಎಸ್‌ಪಿ ತಿಳಿಸಿದರು.

ಸಾಲು ಸಾಲು ಪ್ರತಿಭಟನೆಗಳು • ಪ್ರಮುಖ ವೃತ್ತ, ರಸ್ತೆಗಳಲ್ಲಿ ವಾಹನ ದಟ್ಟಣೆ

ಪ್ರತಿಭಟನೆ, ಅವಘಡ: ಜನ ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಸಾಲು ಸಾಲು ಪ್ರತಿಭಟನೆಗಳು ನಡೆದವು. ಹೆಣ್ಣೂರು ಕ್ರಾಸ್– ನಾಗವಾರ ಜಂಕ್ಷನ್ ರಸ್ತೆಯಲ್ಲಿ ಮೆಟ್ರೊ ಪಿಲ್ಲರ್ ನಿರ್ಮಿಸಲು ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಬಿದ್ದಿತ್ತು. ಇದರಿಂದಾಗಿ ನಗರದ ಹಲವೆಡೆ ವಿಪರೀತ ದಟ್ಟಣೆ ಉಂಟಾಗಿ, ರಸ್ತೆ ದಾಟಲು ಜನರು ಹೈರಾಣಾದರು.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಪರವಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಹಾಗೂ ವಿರುದ್ಧವಾಗಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ನೇತೃತ್ವದಲ್ಲಿ ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು.

ಮೆರವಣಿಗೆ ಸಾಗುತ್ತಿದ್ದ ಮೇಲ್ಸೇತುವೆ ಹಾಗೂ ಶೇಷಾದ್ರಿ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿತ್ತು. ಹೀಗಾಗಿ, ಮೆರವಣಿಗೆ ಸಾಗುತ್ತಿದ್ದ ಅವಧಿಯಲ್ಲಿ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನಗಳು ನಿಂತಲೇ ನಿಲ್ಲಬೇಕಾಯಿತು.

ರೇಸ್ ಕೋರ್ಸ್ ರಸ್ತೆಯಲ್ಲಿ ಮಂಗಳವಾರ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು – ಪ್ರಜಾವಾಣಿ ಚಿತ್ರ

ಮೆಜೆಸ್ಟಿಕ್, ಗಾಂಧಿನಗರ, ಮೈಸೂರು ಬ್ಯಾಂಕ್ ವೃತ್ತ, ಬಸವೇಶ್ವರ ವೃತ್ತ, ಸ್ಯಾಂಕಿ ರಸ್ತೆ, ಶಿವಾನಂದ ವೃತ್ತ, ಆನಂದರಾವ್ ವೃತ್ತ, ಓಕಳಿಪುರ, ಶೇಷಾದ್ರಿಪುರ, ಮಲ್ಲೇಶ್ವರ, ರೇಸ್‌ಕೋರ್ಸ್ ರಸ್ತೆ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕೆಂಪೇಗೌಡ ರಸ್ತೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ವಿಪರೀತ ದಟ್ಟಣೆ ಕಂಡುಬಂತು.

ರಾಜ್ಯದ ವಿವಿಧ ನಗರಗಳಿಂದ ಬಸ್ ಹಾಗೂ ಕಾರುಗಳಲ್ಲಿ ಪ್ರತಿಭಟನಕಾರರು ನಗರಕ್ಕೆ ಬಂದಿದ್ದರು. ಅವರೆಲ್ಲರೂ ತಮ್ಮ ಬಸ್ ಹಾಗೂ ಕಾರುಗಳನ್ನು, ಮೆಜೆಸ್ಟಿಕ್ ಸುತ್ತಮುತ್ತ ರಸ್ತೆಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ನಿಲ್ಲಿಸಿದ್ದರು. ಇದು ಸಹ ದಟ್ಟಣೆಗೆ ಕಾರಣವಾಯಿತು. ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸರು ಸಹ ದಟ್ಟಣೆ ನಿಯಂತ್ರಿಸಲು ಪರದಾಡಿದರು.

ಕಚೇರಿ ಹಾಗೂ ಇತರೆ ಕೆಲಸಕ್ಕಾಗಿ ಹೊರಟಿದ್ದ ಜನ, ದಟ್ಟಣೆಯಲ್ಲಿ ಸಿಲುಕಿ ಪರಿತಪಿಸಿದರು. ಮುಖ್ಯರಸ್ತೆಯಲ್ಲಿದ್ದ ವಾಹನಗಳನ್ನು ಮಾರ್ಗ ಬದಲಾವಣೆ ಮಾಡಿ ಒಳರಸ್ತೆಗಳಲ್ಲಿ ಮುಂದಕ್ಕೆ ಕಳುಹಿಸಲಾಯಿತು.

ಇದರಿಂದಾಗಿ, ಒಳ ರಸ್ತೆಗಳಲ್ಲೂ ದಟ್ಟಣೆ ಉಂಟಾಗಿ ವಾಹನಗಳು ನಿಂತಲೇ ನಿಲ್ಲಬೇಕಾಯಿತು. ಕೆಲಸ ಮುಗಿಸಿ ಸಂಜೆ ಮನೆಯತ್ತ ಹೊರಟಿದ್ದಾಗಲೂ ಜನರು ದಟ್ಟಣೆಯಲ್ಲಿ ಸಿಲುಕಿದ್ದರು. ಪ್ರತಿಭಟನಕಾರರು ಹಾಗೂ ಅವರ ವಾಹನಗಳು ಸ್ಥಳದಿಂದ ಹೊರಟ ಬಳಿಕವೇ ಸಂಚಾರ ವ್ಯವಸ್ಥೆ ಯಥಾಸ್ಥಿತಿಗೆ ತಲುಪಿತು.

ಹೊರವರ್ತುಲ ರಸ್ತೆಯಲ್ಲಿ ದಟ್ಟಣೆ

ಹೆಣ್ಣೂರು ಕ್ರಾಸ್–ನಾಗವಾರ ಜಂಕ್ಷನ್ ರಸ್ತೆಯಲ್ಲಿ ಮೆಟ್ರೊ ಪಿಲ್ಲರ್ ನಿರ್ಮಿಸಲು ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ಸಂಭವಿಸಿದ ಅವಘಡದಿಂದಾಗಿ ಕೆಲ ಗಂಟೆಗಳವರೆಗೆ ವಾಹನಗಳ ಸಂಚಾರವೇ ಬಂದ್ ಆಗಿತ್ತು. ಹೊರವರ್ತುಲ ರಸ್ತೆ ಹಾಗೂ ಒಳ ರಸ್ತೆಗಳಲ್ಲಿ ವಿಪರೀತ ದಟ್ಟಣೆ ಉಂಟಾಗಿ, ಸ್ಥಳೀಯರು ಪರದಾಡಿದರು.

'ಆಪತ್ತು ಗಮನಿಸಿ ಪತ್ನಿ ಕೂಗಿದರು, ಅಷ್ಟರಲ್ಲಿ..'

ಅವಘಡ ನೆನೆದು ಕಣ್ಣೀರಿಟ್ಟ ಪತಿ • ಇಲ್ಲಿ ಬಂದು ಸಾಯ್ಲಿ, ಕೋಟಿ ಕೊಡ್ತೇವೆ: ಸಂಬಂಧಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ಷಣಮಾತ್ರದಲ್ಲಿ ಘಟನೆ ಆಗಿ ಹೋಯಿತು. ಎಷ್ಟು ಹಣ ಕೊಟ್ಟರೂ ಏನೇ ಮಾಡಿದರೂ ಪತ್ನಿ-ಮಗ ವಾಪಸು ಬರುವುದಿಲ್ಲ. ಇಂಥ ಘಟನೆ ಮರುಕಳಿಸಬಾರದು' ಎಂದು ಲೋಹಿತ್‌ಕುಮಾರ್ ಸುಲಾಖೆ ಹೇಳಿದರು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಂದಿನಂತೆ ಮಕ್ಕಳು ಹಾಗೂ ಪತ್ನಿ ಜೊತೆ ಹೊರಟಿದ್ದೆ. ಅವಘಡ ಸಂಭವಿಸಿದ್ದ ಜಾಗದ ಸಮೀಪಕ್ಕೆ ಬಂದಾಗ, ಎದುರುಗಡೆ ಬಸ್ ಹೊರಟಿತ್ತು. ಅದರ ಹಿಂದೆಯೇ ಬೈಕ್‌ವೊಂದು ತೆರಳುತ್ತಿತ್ತು. ನಿಧಾನವಾಗಿ ಬೆಂಡಾಗುತ್ತಿದ್ದ ಕಬ್ಬಿಣದ ಚೌಕಟ್ಟು ನೋಡಿದ್ದ ಆ ಸವಾರ, ಬೈಕ್ ಬಲಕ್ಕೆ ಬಾಗಿಸಿ ಚಲಾಯಿಸಿ ಮುಂದಕ್ಕೆ ಹೋದರು' ಎಂದರು.

'ಅದೇ ಬೈಕ್ ಹಿಂದೆಯೇ ನಾನು ಹೊರಟಿದ್ದೆ. ಕಬ್ಬಿಣದ ಚೌಕಟ್ಟು ಗಮನಿಸಿದ್ದ ಪತ್ನಿ, ಜೋರಾಗಿ ಕೂಗಾಡಲಾರಂಭಿಸಿದ್ದರು. ತಲೆ ಎತ್ತಿ ನೋಡುವಷ್ಟರಲ್ಲೇ ಕಬ್ಬಿಣದ ಚೌಕಟ್ಟು ಬೈಕ್ ಮೇಲೆ ಬಿತ್ತು. ಪತ್ನಿ-ಮಗು ಕಳೆದುಕೊಂಡೆ' ಎಂದು ಲೋಹಿತ್‌ಕುಮಾರ್ ಕಣ್ಣೀರಿಟ್ಟು ಮೌನವಾದರು.

'ಜನರ ಜೀವಕ್ಕೆ ಬೆಲೆಯೇ ಇಲ್ಲವೇ?'

'ಬೆಂಗಳೂರಿನಲ್ಲಿ ಸುತ್ತಾಡುವುದೇ ಕಷ್ಟ ಆಗಿದೆ. ಎರಡು ತಿಂಗಳಿನಿಂದ ಪಿಲ್ಲರ್ ನಿರ್ಮಾಣ ಕೆಲಸ ನಡೆದಿದೆ. ಇಷ್ಟು ಎತ್ತರದ ಪಿಲ್ಲರ್ ನಿಲ್ಲಿಸಲು ಅನುಮತಿ ಕೊಟ್ಟವರು ಯಾರು? ಹಿರಿಯ ಅಧಿಕಾರಿಗಳು ಏನು ಮಾಡುತ್ತಿದ್ದರು? ಸಾರ್ವಜನಿಕರ ಜೀವಕ್ಕೆ ಬೆಲೆ ಇಲ್ಲವೇ? ಟೆಂಡರ್ ಪಡೆದಿದ್ದ ಗುತ್ತಿಗೆದಾರ, ಇಲ್ಲಿಗೆ (ಆಸ್ಪತ್ರೆ) ಬಂದು ಸಾಯ್ಲಿ. ನಾವೇ ₹ 2 ಕೋಟಿ ಕೊಡ್ತೇವೆ' ಎಂದು ಸಂಬಂಧಿಕರು ಆಕ್ರೋಶ ಹೊರಹಾಕಿದರು.

ಅಂಬೇಡ್ಕರ್ ಆಸ್ಪತ್ರೆಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಸಂಬಂಧಿಕರು, 'ಕೆಲಸವನ್ನೂ ಕೂಡಲೇ ಬಂದ್ ಮಾಡಬೇಕು. ಕೆಲಸದ ಮೇಲಿದ್ದ ಎಲ್ಲರನ್ನೂ ಜೈಲಿಗೆ ಹಾಕಬೇಕು' ಎಂದು ಅವರು ಆಗ್ರಹಿಸಿದರು.

ಮಗು ನೆನೆದು ಕಣ್ಣೀರಾದ ನೆರೆಹೊರೆಯವರು

ಗದಗ: ಬೆಂಗಳೂರಿನಲ್ಲಿ ನಾಗವಾರ ಬಳಿ ಮಂಗಳವಾರ ಮೆಟ್ರೊ ಪಿಲ್ಲರ್ ಕುಸಿದು ಮೃತಪಟ್ಟ ತೇಜಸ್ವಿನಿ ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ನೆನೆದು ಸ್ಥಳೀಯರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಗಾಯಗೊಂಡಿರುವ ಲೋಹಿತ್ ಕುಮಾರ್ ಮೂಲತಃ ಗದುಗಿನವರು. ಇಲ್ಲಿನ ಸಿದ್ಧರಾಮೇಶ್ವರ ನಗರದಲ್ಲಿ ಮನೆ ಇದೆ. ಆರೇಳು ವರ್ಷಗಳ ಹಿಂದೆ ದಂಪತಿ ಬೆಂಗಳೂರಿಗೆ ವಾಸ್ತವ್ಯ ಬದಲಿಸಿದ್ದರು. 15 ದಿನಗಳ ಹಿಂದಷ್ಟೇ ಲೋಹಿತ್ ಮತ್ತು ಅವರ ಕುಟುಂಬ ಗದುಗಿಗೆ ಬಂದು ಹೋಗಿತ್ತು.

'ನಿವೃತ್ತಿ ನಂತರ ಲೋಹಿತ್ ತಂದೆ, ತಾಯಿ ಮಗನ ಜತೆಗೆ ಇರುತ್ತಿದ್ದರು. ಆಗಾಗ ಗದಗಕ್ಕೆ ಬರುತ್ತಿದ್ದರು. 15 ದಿನದ ಹಿಂದೆ ಗದುಗಿಗೆ ಬಂದಿದ್ದಾಗ ಲೋಹಿತ್ ನಮ್ಮ ಜತೆಗೆ ಮಾತನಾಡಿದ್ದ. ಮಗುವನ್ನು ನೆನೆದರೆ ನೋವಾಗುತ್ತದೆ' ಎಂದು ನೆರೆಮನೆಯವರಾದ ಮೆಹರುನ್ನೀಸಾ, ನಿಂಗಮ್ಮ, ರೇಣುಕಾ ಕಣ್ಣೀರಾದರು.

ತವರಿನಲ್ಲಿ ಗಾಢ ಮೌನ

ದಾವಣಗೆರೆ: ಮೆಟ್ರೊ ಪಿಲ್ಲರ್‌ನ ಕಬ್ಬಿಣದ ಚೌಕಟ್ಟು ಉರುಳಿ ಮೃತಪಟ್ಟಿರುವ ಜಿ.ಎಂ. ತೇಜಸ್ವಿನಿ (28) ಅವರ ದಾವಣಗೆರೆಯ ತವರು ಮನೆಯಲ್ಲಿ ಮಂಗಳವಾರ ದುಃಖದ ವಾತಾವರಣ ಮಡುಗಟ್ಟಿತ್ತು. ಅವಘಡದ ಸುದ್ದಿ ತಿಳಿದು ತಂದೆ ಜಿ.ಮದನ್, ತಾಯಿ ರುಕ್ಮಿಣಿ ಬಾಯಿ ಬೆಂಗಳೂರಿಗೆ ಧಾವಿಸಿದರು. ದೊಡ್ಡಪ್ಪಂದಿರಾದ ನಾರಾಯಣ ರಾವ್, ರಾಘವೇಂದ್ರ ರಾವ್ ಕುಟುಂಬದವರ ಕಣ್ಣಾಲಿ ತುಂಬಿದ್ದವು.

10 ದಿನದ ಹಿಂದೆ ಇಲ್ಲಿನ ತವರು ಮನೆಗೆ ತೇಜಸ್ವಿನಿ ಬಂದು ಹೋಗಿದ್ದರು. 'ಪರಿಹಾರ ಯಾರಿಗೆ ಬೇಕು? ಅವರಿಂದ (ಬಿಎಂಆರ್‌ಸಿಎಲ್) ಜೀವ ಕೊಡಲು ಆಗುತ್ತದೆಯೇ? ' ಎಂದು ತೇಜಸ್ವಿನಿ ಅವರ ಸಹೋದರಿ ಭಾಗ್ಯ ಒತ್ತಾಯಿಸಿದರು.

ದೂರು ಪಡೆಯಲು ವಿಳಂಬ- ಆಕ್ರೋಶ: ' ಅವಘಡ ಸಂಬಂಧ ಲೋಹಿತ್ ದೂರು ನೀಡಲು ಗೋವಿಂದಪುರ ಠಾಣೆಗೆ ಹೋಗಿದ್ದರು. ದೂರು ಪಡೆಯಲು ವಿಳಂಬ ಮಾಡಿದ್ದ ಪೊಲೀಸರು, ಹಲವು ಗಂಟೆಗಳ ಕಾಲ ಠಾಣೆಯಲ್ಲಿ ಕೂರಿಸಿದ್ದರು' ಎಂದು ತೇಜಸ್ವಿನಿ ದೊಡ್ಡಪ್ಪ ನಾರಾಯಣರಾವ್ ದೂರಿದರು.

ದಾವಣಗೆರೆಯ ಮನೆಯಲ್ಲಿ ತೇಜಸ್ವಿನಿ ಅವರ ಕುಟುಂಬ ಸದಸ್ಯರು ರೋದಿಸುತ್ತಿರುವುದು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಕೋವಿಡ್ ಲಸಿಕೆ: 5.82 ಲಕ್ಷ ಡೋಸ್ ದಾಸ್ತಾನು

ಬೆಂಗಳೂರು: ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಸದ್ಯ 5.82 ಲಕ್ಷ ಡೋಸ್‌ನಷ್ಟು ಕೋವ್ಯಾಕ್ಸಿನ್ ಹಾಗೂ 330 ಡೋಸ್‌ನಷ್ಟು ಕೋವಿಶೀಲ್ಡ್ ಲಸಿಕೆ ದಾಸ್ತಾನು ಇದೆ.

ಚೀನಾ ಸೇರಿ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳದಿಂದ ರಾಜ್ಯದಲ್ಲಿ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ಬೇಡಿಕೆ ಹೆಚ್ಚಳವಾಗಿತ್ತು. ಇದರಿಂದಾಗಿ ಕೋವಿಶೀಲ್ಡ್ ಲಸಿಕೆಯ ಕೆಲವೇ ಡೋಸ್‌ಗಳು ಮಾತ್ರ ಲಭ್ಯವಿದೆ.



ಆರೋಗ್ಯ ಇಲಾಖೆ ಆಗಲೇ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಲಸಿಕೆಗೆ ಪ್ರಸ್ತಾವನೆ ಸಲ್ಲಿಸಿದೆ.

'ಮುಂದಿನ ವಾರದ ವೇಳೆಗೆ 8 ಲಕ್ಷ ಡೋಸ್‌ಗಳಷ್ಟು ಕೋವಿಶೀಲ್ಡ್ ಲಸಿಕೆ ಪೂರೈಕೆಯಾಗಲಿದೆ. ಮೊದಲೆರಡು ಡೋಸ್ ಲಸಿಕೆ ಪಡೆದವರಲ್ಲಿ ಹೆಚ್ಚಿನವರಿಗೆ ಕೋವಿಶೀಲ್ಡ್ ಲಸಿಕೆ ನೀಡಲಾಗಿದೆ. ಹೀಗಾಗಿ, ಈ ಲಸಿಕೆಗೆ ಬೇಡಿಕೆ ಹೆಚ್ಚಿದ್ದು, ಆದ್ಯತೆ ಮೇರೆಗೆ ನೀಡಲಾಗುತ್ತಿದೆ' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯ ಆರೋಗ್ಯ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಈ ತಿಂಗಳು 9 ದಿನಗಳಲ್ಲಿ 1.02 ಲಕ್ಷದಷ್ಟು ಡೋಸ್ ಲಸಿಕೆ ನೀಡಲಾಗಿದೆ. ಡಿಸೆಂಬರ್ ತಿಂಗಳಲ್ಲಿ 2.58 ಲಕ್ಷ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿತ್ತು.

ಸಭ್ಯತೆ ಕಾಪಾಡಿ: ಮುಖ್ಯ ನ್ಯಾಯಮೂರ್ತಿ

ಬೆಂಗಳೂರು: ಹೈಕೋರ್ಟ್ ಕಲಾಪವನ್ನು ಆನ್‌ಲೈನ್‌ನಲ್ಲಿ ವೀಕ್ಷಿಸುತ್ತಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ವೈದ್ಯಕೀಯ ಪದವಿ ವಿದ್ಯಾರ್ಥಿಗಳು ಅನಗತ್ಯ ಚಾಟಿಂಗ್‌ನಲ್ಲಿ ತೊಡಗಿದ್ದ ಘಟನೆಗೆ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ, 'ವಿದ್ಯಾರ್ಥಿಗಳು ವಿಚಾರಣೆ ವೇಳೆ ಸಭ್ಯತೆ ಕಾಯ್ದುಕೊಳ್ಳಬೇಕು' ಎಂದು ಕಿವಿಮಾತು ಹೇಳಿದ ಘಟನೆ ಮಂಗಳವಾರ ನಡೆಯಿತು.

2022ನೇ ಸಾಲಿನಲ್ಲಿ ನಡೆದ ಎಂಬಿಬಿಎಸ್ ಪದವಿ ಪರೀಕ್ಷೆಯ ಮೌಲ್ಯಮಾಪನಕ್ಕೆ ಸಂಬಂಧಿಸಿ ಆರ್‌ಜಿಯುಎಚ್‌ಎಸ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸುತ್ತಿತ್ತು. ಕಲಾಪವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಕಲಾಪ ಪ್ರಸಾರ ಮಾಡಲಾಗುತ್ತಿತ್ತು.

ಈ ವೇಳೆ ಕೆಲವು ವಿದ್ಯಾರ್ಥಿಗಳು ಝೂಮ್ ಆ್ಯಪ್ ಮೂಲಕ ಕಲಾಪವನ್ನು ವೀಕ್ಷಿಸುತ್ತಾ, ಆಡಿಯೊ ಮ್ಯೂಟ್ ಮಾಡಿಕೊಳ್ಳದೆ ಸಂಭಾಷಣೆಯಲ್ಲಿ ತೊಡಗಿದ್ದರು. ಆಡಿಯೊ ಮ್ಯೂಟ್ ಮಾಡಿಕೊಳ್ಳುವಂತೆ ಕೋರ್ಟ್ ಅಧಿಕಾರಿ ಎಚ್ಚರಿಸಿದರೂ ವಿದ್ಯಾರ್ಥಿಗಳು ಚಾಟಿಂಗ್ ಮೂಲಕ ಕಿರಿಕಿರಿ ಉಂಟು ಮಾಡಿದರು.

ಪ್ರಕರಣದ ವಿಚಾರಣೆ ವೇಳೆ ಕೋರ್ಟ್ ಅಧಿಕಾರಿ ವಿದ್ಯಾರ್ಥಿಗಳು ವಿಡಿಯೊ ಕಾನ್ಫರೆನ್ಸ್‌ನಲ್ಲಿ ಹಂಚಿಕೊಂಡಿದ್ದ ಸಂದೇಶಗಳನ್ನು ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತಂದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಅವರು, ವಿದ್ಯಾರ್ಥಿಗಳ ಪರ ಹಾಜರಿದ್ದ ವಕೀಲರಲ್ಲಿ ಬೇಸರ ವ್ಯಕ್ತಪಡಿಸಿದರು.

'ಕಲಾಪ ವೀಕ್ಷಿಸುವಾಗ ಸಭ್ಯತೆಯಿಂದ ನಡೆದುಕೊಳ್ಳಬೇಕು. ಕೋರ್ಟಿನ ಶಿಷ್ಟಾಚಾರ ಮತ್ತು ಹೇಗೆ ವರ್ತಿಸಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಕಾಲೇಜಿನಲ್ಲಿ ವರ್ತಿಸಿದಂತೆ ನ್ಯಾಯಾಲಯದ ಮುಂದೆಯೂ ನಡೆದುಕೊಳ್ಳಬಾರದು. ಎಚ್ಚರದಿಂದ ಇರಬೇಕು' ಎಂದು ಮೌಖಿಕವಾಗಿ ಸೂಚಿಸಿದರು.

ಮೌಲ್ಯ ಶಿಕ್ಷಣ; ಮಠಾಧೀಶರ ಸಲಹೆಗೆ ಚಿಂತಕರ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೌಲ್ಯ ಶಿಕ್ಷಣ' ಕುರಿತು ಚರ್ಚಿಸಲು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಕರೆದಿದ್ದ ವಿವಿಧ ಧರ್ಮ ಗುರುಗಳ ಸಭೆಯಲ್ಲಿ ಕೆಲ ಮಠಾಧೀಶರು ನೀಡಿದ ಸಲಹೆಗಳಿಗೆ ಸಾಹಿತಿಗಳು, ವಿಚಾರವಾದಿಗಳು ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಮಠಾಧೀಶರ ಸಲಹೆ ಆಧರಿಸಿದ ವರದಿ ಓದಿ ನಮಗೆಲ್ಲ ಆಘಾತವಾಗಿದೆ. ಇದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ಜಾಗೃತ ನಾಗರಿಕರು–ಕರ್ನಾಟಕದ ಪ್ರಮುಖರಾದ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಎಸ್.ಜಿ.ಸಿದ್ದರಾಮಯ್ಯ, ರಾಜೇಂದ್ರ ಚೆನ್ನಿ, ವಿಜಯಾ, ಬಂಜಗೆರೆ ಜಯಪ್ರಕಾಶ್, ಬಿ.ಶ್ರೀಪಾದ ಭಟ್, ವಿಮಲಾ. ಕೆ.ಎಸ್, ಕೆ.ನೀಲಾ, ಮೀನಾಕ್ಷಿ ಬಾಳಿ, ಟಿ.ಸುರೇಂದ್ರ ರಾವ್, ವಸುಂಧರಾ ಭೂಪತಿ, ನಿರಂಜನಾರಾಧ್ಯ, ಎನ್. ಗಾಯತ್ರಿ, ಸಿ.ಕೆ.ಗುಂಡಣ್ಣ, ಲೀಲಾ ಸಂಪಿಗೆ, ಎನ್. ಆರ್.ವಿಶುಕುಮಾರ್, ಎನ್.ಯೋಗಾನಂದ ಪ್ರತಿಕ್ರಿಯಿಸಿದ್ದಾರೆ.

ಶಿಕ್ಷಣ ವಿಚಾರಗಳ ಕುರಿತು ಶಿಕ್ಷಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು, ಎಸ್‌ಡಿಎಂಸಿ ಜತೆ ಚರ್ಚಿಸಬೇಕು. ಬಿಜೆಪಿ ಸರ್ಕಾರ ಪ್ರತಿ ಹಂತದಲ್ಲೂ ವಿವಾದಾತ್ಮಕ, ಸಂವಿಧಾನ ವಿರೋಧಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. 'ಮೌಲ್ಯ ಶಿಕ್ಷಣ' ಎಂದರೆ ಏನು ಎಂದು ಪ್ರಶ್ನಿಸುವ ಅವರು, ಆರ್‌ಎಸ್‌ಎಸ್‌ನ ಚಾತುರ್ವರ್ಣ ಸಿದ್ಧಾಂತ, ಪ್ರಾಚೀನ ಗುರುಕುಲ ಪದ್ಧತಿ, ಬ್ರಾಹ್ಮಣೀಕರಣದ ವ್ಯವಸ್ಥೆಯನ್ನು ಮೌಲ್ಯವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಸಂವಿಧಾನ ವಿರೋಧಿ ಎಂದು ಹೇಳಿದ್ದಾರೆ.

ಶೇ 90ರಷ್ಟು ಜನರು ಸೇವಿಸುವ ಮಾಂಸಾಹಾರದ ಕುರಿತು ಸ್ವಾಮಿಗಳ ಕೀಳು ಮಾತು ಖಂಡನೀಯ. ಮಕ್ಕಳು ಸೇವಿಸುವ ಆಹಾರವನ್ನು ಸ್ವಾಮಿಗಳು ನಿರ್ಧರಿಸಲು ಸಾಧ್ಯವಿಲ್ಲ. ಪುನರ್ಜನ್ಮದ ಕುರಿತು ಶಿಕ್ಷಕರಿಗೆ ಬೋಧಿಸಬೇಕು ಎನ್ನುವುದು ಅವೈಜ್ಞಾನಿಕ. ಈ ಸಲಹೆಗಳನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸಿದ್ದಾರೆ.

ಶಬರಿಮಲೆ ಯಾತ್ರಿಗಳ ವಾಹನ ಅಪಘಾತ

ಇಡುಕ್ಕಿ (ಕೇರಳ): ಶಬರಿಮಲೆಗೆ ಕರ್ನಾಟಕದಿಂದ ಯಾತ್ರಾರ್ಥಿಗಳನ್ನು ಕರೆದೊಯ್ಯುತ್ತಿದ್ದ ವಾಹನ ಮಂಗಳವಾರ ಸಂಜೆ ಇಡುಕ್ಕಿ ಜಿಲ್ಲೆಯ ಪೆರುವಂತನಂ ಗ್ರಾಮದ ಬಳಿ ಅಪಘಾತಕ್ಕೀಡಾಗಿದೆ. ಮಗು ಸೇರಿದಂತೆ 10 ಮಂದಿ ಗಾಯಗೊಂಡಿದ್ದಾರೆ.

ವಾಹನದಲ್ಲಿ 13 ಯಾತ್ರಾರ್ಥಿಗಳಿದ್ದರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವೃದ್ಧೆ ಕೈ- ಕಾಲು ಕಟ್ಟಿ ದರೋಡೆ

ಒಡಿಶಾದ ಆರೋಪಿಗಳ ಬಂಧನ • ನಗದು, ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ವೃದ್ಧೆ ಶ್ರೀಲಕ್ಷ್ಮಿ ಅವರ ಕೈ-ಕಾಲು ಕಟ್ಟಿ ದರೋಡೆ ಮಾಡಿದ್ದ ಆರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಒಡಿಶಾದ ಸುಧಂಶು ಬೆಹೆರ್ (21), ಜ್ಞಾನರಂಜನ್ (36), ಶ್ರೀಕಾಂತ್ ದಾಸ್ (40), ಸುಭಾಷ್ ಬಿಸ್ವಾಲ್ (41), ಬಿಷು ಮೋಹನ್ ಖಾಟೊ (35), ಬಿಷು ಚರಣ್ ಬೆಹೆರ್ (61) ಬಂಧಿತರು. ಇವರಿಂದ ₹ 3.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 1.50 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವೃದ್ಧೆ ಶ್ರೀಲಕ್ಷ್ಮಿ, ವೈದ್ಯರಾಗಿರುವ ಮಗಳ ಜೊತೆ ನೆಲೆಸಿದ್ದರು. ಆರೋಪಿ ಸುಧಂಶುನ ಅಕ್ಕ, ವೃದ್ಧೆ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲ ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು. ಮಗಳು ಕ್ಲಿನಿಕ್‌ಗೆ ಹೋದಾಗ ವೃದ್ಧೆಯೊಬ್ಬರೇ ಮನೆಯಲ್ಲಿರುತ್ತಾರೆಂಬ ಮಾಹಿತಿ ಆರೋಪಿಗೆ ಗೊತ್ತಿತ್ತು. ಹೀಗಾಗಿ, ಮನೆಗೆ ನುಗ್ಗಿ ದರೋಡೆ ಮಾಡಲು ಆರೋಪಿ ಸಂಚು ರೂಪಿಸಿದ್ದ. ಇದಕ್ಕಾಗಿ ಒಡಿಶಾದಲ್ಲಿರುವ ಸ್ನೇಹಿತರ ಸಹಾಯ ಪಡೆದಿದ್ದ. ಜ. 3ರಂದು ಮಗಳು ಕ್ಲಿನಿಕ್‌ಗೆ ಹೋಗಿದ್ದರು. ಅಂದು ಸಂಜೆ ಮನೆಗೆ ನುಗ್ಗಿದ್ದ ಆರೋಪಿಗಳು, ಶ್ರೀಲಕ್ಷ್ಮಿ ಮೇಲೆ ಹಲ್ಲೆ ಮಾಡಿದ್ದರು. ಕೈ-ಕಾಲು ಕಟ್ಟಿ ಬಾಯಿಗೆ ಪ್ಲಾಸ್ಟರ್ ಹಾಕಿದ್ದರು. ನಂತರ, ಚಿನ್ನಾಭರಣ ಹಾಗೂ ಮೊಬೈಲ್ ದೋಚಿಕೊಂಡು ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಕೃತ್ಯದ ಬಗ್ಗೆ ಮಗಳು ದೂರು ನೀಡಿದ್ದಾರೆ. ತನಿಖೆಯಲ್ಲಿ ಮನೆ ಕೆಲಸದ ಮಹಿಳೆಯ ತಮ್ಮ ಆರೋಪಿ ಎಂಬುದು ತಿಳಿಯಿತು. ಆತನನ್ನು ವಶಕ್ಕೆ ಪಡೆದು, ವಿಚಾರಿಸಿದಾಗ ಉಳಿದರ ಹೆಸರು ಪತ್ತೆಯಾಯಿತು. ಒಡಿಶಾಗೆ ಹೋಗಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ಹೇಳಿದರು.

ಪೊಲೀಸ್ ಸೋಗಿನಲ್ಲಿ ಭಜ್ಜಿ, ಬೋಂಡಾ ತಿನ್ನುತ್ತಿದ್ದ ಮಹಿಳೆ ಸೆರೆ

ಬೆಂಗಳೂರು: 'ಕೊಡಿಗೇಹಳ್ಳಿ ಠಾಣೆ ಪೊಲೀಸ್' ಎಂದು ಹೇಳಿಕೊಂಡು ವ್ಯಾಪಾರಿಗೆ ಬೆದರಿಸಿ ಭಜ್ಜಿ-ಬೋಂಡಾ ತಿಂದು ಪಾರ್ಸೆಲ್ ಒಯ್ಯುತ್ತಿದ್ದ ಆರೋಪಿ ನೇತ್ರಾವತಿ (50) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಬ್ಯಾಟರಾಯನಪುರ ನಿವಾಸಿ ನೇತ್ರಾವತಿ (50), ಹಲವು ದಿನಗಳಿಂದ ಕೃತ್ಯ ಎಸಗುತ್ತಿದ್ದರು. ಬೋಂಡಾ ವ್ಯಾಪಾರಿ ಶೇಖ್ ಸಲಾಂ ನೀಡಿದ್ದ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಬ್ಯಾಟರಾಯಪುರದ ಅಯ್ಯಪ್ಪಸ್ವಾಮಿ ದೇವಸ್ಥಾನ ಬಳಿ ಶೇಖ್ ಸಲಾಂ ಅವರು ಭಜ್ಜಿ-ಬೋಂಡಾ ಅಂಗಡಿ ಇಟ್ಟಿದ್ದಾರೆ. ನಿತ್ಯ ಅಲ್ಲಿ ಭಜ್ಜಿ-ಬೊಂಡಾ ತಿಂದು ₹50 ಮೌಲ್ಯದ ಭಜ್ಜಿ-ಬೋಂಡಾ ಪಾರ್ಸೆಲ್ ಸಹ ಕಟ್ಟಿಸಿಕೊಳ್ಳುತ್ತಿದ್ದರು. ಹಣ ಕೇಳಿದಾಗ, 'ನಾನು ಕೊಡಿಗೇಹಳ್ಳಿ ಪೊಲೀಸ್. ನೀನು ಇಲ್ಲಿ ಅಂಗಡಿ ನಡೆಸಬೇಕಾದರೆ, ನಾನು ಬಂದಾಗಲೆಲ್ಲ ಭಜ್ಜಿ-ಬೋಂಡಾ ನೀಡಬೇಕು' ಎಂದು ಬೆದರಿಸಿದ್ದರು' ಎಂದರು.

ಅಪರಾಧ ಸುದ್ದಿ

ಜನಾರ್ದನ ರೆಡ್ಡಿ ಆಸ್ತಿ ಮುಟ್ಟುಗೋಲಿಗೆ ವಿಳಂಬ ಏಕೆ: ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಗಣಿಗಾರಿಕೆ ಆರೋಪದಲ್ಲಿ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿಗೆ ಸೇರಿದ ₹ 19 ಕೋಟಿ ಮೌಲ್ಯದ ಆಸ್ತಿ ಜಪ್ತಿ ಪ್ರಕ್ರಿಯೆಗೆ ಅನುಮತಿ ನೀಡಲು ಏಕಿಷ್ಟು ವಿಳಂಬ ಮಾಡುತ್ತಿದ್ದೀರಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರವನ್ನು ಖಾರವಾಗಿ ಪ್ರಶ್ನಿಸಿದೆ.

'ಜನಾರ್ದನ ರೆಡ್ಡಿ ಮತ್ತು ಅವರ ಕುಟುಂಬದವರಿಗೆ ಸೇರಿದ ಹೆಚ್ಚುವರಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ಆರಂಭಿಸಲು ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಮನವಿ ಸಲ್ಲಿಸಲಾಗಿದ್ದು, ಈ ಮನವಿಯನ್ನು ತುರ್ತಾಗಿ ಪರಿಗಣಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಸಿಬಿಐ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ. ಪ್ರಸನ್ನ ಕುಮಾರ್, 'ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆಯನ್ನು ಸಿಬಿಐ, ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ನಡೆಸುತ್ತಿದೆ. ಹೆಚ್ಚುವರಿ ತನಿಖೆ ನಡೆಸಿ ₹ 19 ಕೋಟಿ ಮೌಲ್ಯದ 219 ಹೆಚ್ಚುವರಿ ಆಸ್ತಿಗಳನ್ನು ಜಪ್ತಿಗೆ ಗುರುತಿಸಲಾಗಿದೆ. ಜಪ್ತಿ ಪ್ರಕ್ರಿಯೆ ಆರಂಭಿಸಲು ಸರ್ಕಾರದ ಮುಖ್ಯ ಕಾಯದರ್ಶಿಗೆ 2022ರ ಆಗಸ್ಟ್‌ನಲ್ಲಿ ಮನವಿ ಸಲ್ಲಿಸಲಾಗಿದೆ. ಆದರೆ, ಈವರೆಗೂ ಈ ಮನವಿಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ಕ್ರಮ ಜರುಗಿಸಿಲ್ಲ. ಏತನ್ಮಧ್ಯೆ, ಈ ಆಸ್ತಿಗಳನ್ನು ಮಾರಾಟ ಮಾಡಲು ಜನಾರ್ದನ ರೆಡ್ಡಿ ಸರ್ವಪ್ರಯತ್ನ ನಡೆಸುತ್ತಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, 'ಸಿಬಿಐ ಮನವಿ ಪರಿಗಣಿಸಲು ಯಾವ ಕಾರಣಕ್ಕೆ ವಿಳಂಬವಾಗಿದೆ ಎಂಬ ಬಗ್ಗೆ ಸರ್ಕಾರದಿಂದ ಮಾಹಿತಿ ಪಡೆಯಲು ಒಂದಷ್ಟು ಕಾಲಾವಕಾಶ ಬೇಕು' ಎಂದು ಅವರು ಮನವಿ ಮಾಡಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ನ್ಯಾಯಪೀಠ, 'ಸಿಬಿಐ ಇಂತಹದೊಂದು ಮನವಿಯೊಂದಿಗೆ ಹೈಕೋರ್ಟ್‌ಗೆ ಮೆಟ್ಟಿಲೇರಿರುವುದು ಆಘಾತಕಾರಿ ವಿಚಾರ. ಮನವಿ ಸಲ್ಲಿಸಿ ಐದು ತಿಂಗಳು ಕಳೆದರೂ ಅದನ್ನು ಇನ್ನೂ ಏಕೆ ಪರಿಗಣಿಸಿಲ್ಲ. ಆರೋಪಿ ಪ್ರಭಾವಿ ಎಂದ ಮಾತ್ರಕ್ಕೆ ವಿಳಂಬ ಮಾಡುವುದು ಸರಿಯಲ್ಲ. ಈ ನಡೆಯನ್ನು ನ್ಯಾಯಾಲಯ ಒಪ್ಪುವುದಿಲ್ಲ. ಸಿಬಿಐ ಅರ್ಜಿಗೆ ಶೀಘ್ರವೇ ಪ್ರತಿಕ್ರಿಯಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದೆ.

ಆಸ್ತಿ ವಿವರ ಸಲ್ಲಿಸದ 58 ಶಾಸಕರು

ಬೆಂಗಳೂರು: ಸಚಿವರಾದ ಜೆ.ಸಿ. ಮಾಧುಸ್ವಾಮಿ, ಬಿ. ಶ್ರೀರಾಮುಲು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ 58 ಶಾಸಕರು ಗಡುವು ಮುಗಿದು ಆರು ತಿಂಗಳು ಕಳೆದರೂ ಲೋಕಾಯುಕ್ತರಿಗೆ 2021–22ನೇ ಸಾಲಿನ ಆಸ್ತಿ ಮತ್ತು ಬಾಧ್ಯತೆಯ ವಿವರಗಳನ್ನು ಸಲ್ಲಿಸಿಲ್ಲ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಪ್ರಕಾರ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಎಲ್ಲ ಸದಸ್ಯರು ಜೂನ್ 30ರೊಳಗೆ ಪ್ರತಿ ವರ್ಷದ ತಮ್ಮ ಆಸ್ತಿ ಹಾಗೂ ಸಾಲದ ವಿವರಗಳ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ, ಹಿಂದಿನ ವರ್ಷ 179 ಸದಸ್ಯರು ಗಡುವಿನೊಳಗೆ ಆಸ್ತಿ ವಿವರ ಸಲ್ಲಿಸಿರಲಿಲ್ಲ. ಜೂನ್ 30ರ ನಂತರ 121 ಮಂದಿ ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಗಡುವು ಮುಗಿದರೂ 2021–22ರ ಅವಧಿಯ ಆಸ್ತಿ ವಿವರ ಸಲ್ಲಿಸದ ಶಾಸಕರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಆ ಬಳಿಕ ವಿಧಾನಸಭೆಯ 93 ಮತ್ತು ವಿಧಾನ ಪರಿಷತ್‌ನ 28 ಸದಸ್ಯರು ಆಸ್ತಿ ವಿವರ ಸಲ್ಲಿಸಿದ್ದಾರೆ. ವಿಧಾನಸಭೆಯ 34 ಮತ್ತು ವಿಧಾನ ಪರಿಷತ್‌ನ 24 ಸದಸ್ಯರು ಈವರೆಗೂ ಆಸ್ತಿ ವಿವರ ಸಲ್ಲಿಸಿಲ್ಲ' ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 22ರ ಪ್ರಕಾರ, 'ಪ್ರತಿಯೊಬ್ಬ ಸಾರ್ವಜನಿಕ ಸೇವಕನು ಪ್ರತಿ ವರ್ಷದ ಜೂನ್ 30ರೊಳಗೆ ಆಸ್ತಿ ಮತ್ತು ಬಾಧ್ಯತೆಯ ವಿವರಗಳನ್ನು ಸಲ್ಲಿಸಬೇಕು. ಪ್ರಮಾಣಪತ್ರ ಸಲ್ಲಿಸಲು ವಿಫಲರಾದ ಸಾರ್ವಜನಿಕ ಸೇವಕರಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸಕ್ಷಮ ಪ್ರಾಧಿಕಾರಕ್ಕೆ (ರಾಜ್ಯಪಾಲರು) ವರದಿ ಸಲ್ಲಿಸಬೇಕು. ಅಂತಹ ಶಾಸಕರ ಹೆಸರುಗಳನ್ನು ರಾಜ್ಯದಾದ್ಯಂತ ಪ್ರಸರಣ ಹೊಂದಿರುವ ಮೂರು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು' ಎಂದು ಹೇಳಲಾಗಿದೆ.

ಶೀಘ್ರದಲ್ಲಿ ವರದಿ: ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, 'ಆಸ್ತಿ ವಿವರ ಸಲ್ಲಿಸದ ಶಾಸಕರ ವಿವರಗಳ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸುವುದು ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕೆ ಮಾತ್ರ ಕಾಯ್ದೆಯಲ್ಲಿ ಅವಕಾಶವಿದೆ. ಶೀಘ್ರದಲ್ಲಿ ರಾಜ್ಯಪಾಲರಿಗೆ ವರದಿ ಸಲ್ಲಿಸಲಾಗುವುದು' ಎಂದರು.

ಈ ಕುರಿತು ಲೋಕಾಯುಕ್ತರಿಗೆ ದೂರು ನೀಡಿರುವ ನೈಜ ಹೋರಾಟಗಾರರ ವೇದಿಕೆಯ ಎಚ್.ಎಂ. ವೆಂಕಟೇಶ್, 58 ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದ್ದಾರೆ.

ಕಳೆದ ವರ್ಷದ್ದೂ ಬಾಕಿ: ವಿಧಾನಸಭೆಯ 12 ಮತ್ತು ವಿಧಾನ ಪರಿಷತ್‌ನ 13 ಸದಸ್ಯರು 2020–21ನೇ ಸಾಲಿನ ಆಸ್ತಿ ವಿವರವನ್ನು ಈವರೆಗೂ ಲೋಕಾಯುಕ್ತಕ್ಕೆ ಸಲ್ಲಿಸಿಲ್ಲ. ರಾಜ್ಯಪಾಲರಿಗೆ ವರದಿ ಸಲ್ಲಿಸಿ, ಪತ್ರಿಕೆಗಳಲ್ಲಿ ಪ್ರಕಟಿಸಿದ ಬಳಿಕವೂ ಎರಡೂ ಸದನಗಳ 25 ಸದಸ್ಯರು ಪ್ರಮಾಣಪತ್ರ ಸಲ್ಲಿಸಿಲ್ಲ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

'ಪಿಂಚಣಿದಾರರ ಹಿತಾಸಕ್ತಿಗೆ ಧಕ್ಕೆ'

ಬೆಂಗಳೂರು: ಇಪಿಎಫ್‌ಒ ಹೊರಡಿಸಿದ ಸುತ್ತೋಲೆಯಿಂದ ಪಿಂಚಣಿದಾರರ ಹಿತಾಸಕ್ತಿಗೆ ಧಕ್ಕೆಯಾಗಿದೆ ಎಂದು ಆರೋಪಿಸಿ ಇಪಿಎಸ್-95 ಪಿಂಚಣಿದಾರರ ರಾಷ್ಟ್ರೀಯ ಸಂಘರ್ಷ ಸಮಿತಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಒಕ್ಕೂಟದ ನೂರಾರು ನಿವೃತ್ತ ನೌಕರರು ರಿಚ್ಮಂಡ್ ವೃತ್ತದ ಪ್ರಾದೇಶಿಕ ಕಮಿಷನರ್ ಕಚೇರಿ ಎದುರು ಸುತ್ತೋಲೆ ವಿರೋಧಿಸಿ ಬೆಂಕಿಹಚ್ಚಿ ಆಕ್ರೋಶ ಹೊರಹಾಕಿದರು.

ಎಲ್ಲ ಪಿಂಚಣಿದಾರರಿಗೂ ಅನ್ವಯ ಆಗುವಂತೆ ಪರಿಷ್ಕೃತ ಸುತ್ತೋಲೆಯನ್ನು ಕನ್ನಡದಲ್ಲೇ ಸೂಕ್ತ ವಿವರಣೆ ಜತೆಗೆ ಹೊರಡಿಸಬೇಕು. ತಪ್ಪಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಸಿದರು. ಅಧಿಕಾರಿಗಳ ಭರವಸೆ ಮೇರೆಗೆ ಪ್ರತಿಭಟನೆ ಕೈಬಿಡಲಾಯಿತು.

ಒಕ್ಕೂಟದ ಅಧ್ಯಕ್ಷ ಶ್ರೀಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಉಪಾಧ್ಯಕ್ಷ ಸುಬ್ಬಣ್ಣ, ರಮಾಕಾಂತ ನರಗುಂದ, ಸ್ವಾಮಿ ಇದ್ದರು.

ರಾಜ್ಯದಾದ್ಯಂತ ವಿಸ್ತರಿಸಲಿ: ಸಚಿವ ಎಸ್‌.ಟಿ. ಸೋಮಶೇಖರ್ ಆಶಯ

ಮಕ್ಕಳ ವಚನ ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ವಚನ ಮೇಳ ರಾಜಧಾನಿಗಷ್ಟೇ ಮೀಸಲಾಗದೆ, ರಾಜ್ಯದಾದ್ಯಂತ ವಿಸ್ತರಿಸಬೇಕು ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಹೇಳಿದರು.

ವಚನಜ್ಯೋತಿ ಬಳಗದ 25ನೇ ವರ್ಷದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಮೂರು ದಿನ ಆಯೋಜಿಸಲಾಗಿರುವ ಮಕ್ಕಳ ವಚನ ಮೇಳವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮಕ್ಕಳ ವಚನ ಮೇಳವನ್ನು ನೋಡುತ್ತಿದ್ದರೆ ಮನಸ್ಸಿಗೆ ಆನಂದವಾಗುತ್ತದೆ. ರಾಜಕೀಯ ಜಂಜಾಟಗಳ ನಡುವೆ ಮಕ್ಕಳ ಕಲರವವೇ ಬಹು ಚೆಂದ' ಎಂದರು.

ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅವರು, 'ವಚನಗಳೆಂದರೆ ಪ್ರಮಾಣಪೂರ್ವಕ ನಡೆ. ಅವುಗಳನ್ನು ಬದುಕಿನಲ್ಲೂ ಅಳವಡಿಸಿಕೊಳ್ಳಬೇಕು. ಕನ್ನಡದ ಸಾಂಸ್ಕೃತಿಕ ಸಂಪತ್ತಾದ ವಚನಗಳನ್ನು ಮಕ್ಕಳಿಗೆ ಮುಟ್ಟಿಸುವ ಕೆಲಸ ಅಗತ್ಯವಾಗಿ ಆಗಬೇಕಿದೆ. ವಚನಜ್ಯೋತಿ ಬಳಗ 25 ವರ್ಷಗಳಿಂದ ಈ ಕೆಲಸ ಮಾಡಿಕೊಂಡು ಬರುತ್ತಿದೆ' ಎಂದರು.

'ವಚನಗಳನ್ನು ಎಳೆಯ ಮನಸ್ಸುಗಳಿಗೆ ತಲುಪಿಸುವ ಕೆಲಸ ಇದಾಗಿದ್ದು, ಮೇಳದಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಪ್ರತಿಭೆಗಳು ಭಾಗವಹಿಸಿವೆ. ವಚನಗಾಸೆ, ವಚನ ಡೊಳ್ಳು, ವಚನ ಕಂಸಾಳೆಗಳನ್ನು ರೂಪಿಸಲಾಗುತ್ತಿದೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಹೇಳಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ ಆಶೀರ್ವಚನ ನೀಡಿದರು. ಉದ್ಯಮಿ ಎಸ್.ಷಡಕ್ಷರಿ ಅವರನ್ನು ಅಭಿನಂದಿಸಲಾಯಿತು.

ವಿಶ್ವಬಂಧು ಪ್ರತಿಷ್ಠಾನದ ಡಾ. ಸಿದ್ದಯ್ಯ ಗುರೂಜಿ, ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಬಳಗದ ಗೌರವಾಧ್ಯಕ್ಷ ಮಹೇಶ ಬೆಲ್ಲದ, ಮುಖ್ಯ ಕಾರ್ಯನಿರ್ವಾಹಕ ರಾಜಾ ಗುರುಪ್ರಸಾದ್, ಕಾರ್ಯಾಧ್ಯಕ್ಷ ಗುರುಪ್ರಸಾದ ಕುಚ್ಚಂಗಿ, ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಉಪಾಧ್ಯಕ್ಷ ರು.ಫ. ದೇಸಾಯಿ ಪಾಲ್ಗೊಂಡಿದ್ದರು.

ವಚನ ಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ವಿಶ್ವಬಂಧು ಪ್ರತಿಷ್ಠಾನದ ಸಿದ್ದಯ್ಯ ಗುರೂಜಿ, ಉದ್ಯಮಿ ಎಸ್.ಷಡಕ್ಷರಿ, ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಮತ್ತು ಬೇಲಿಮಠದ ಶಿವರುದ್ರ ಸ್ವಾಮೀಜಿ ಬಸವಣ್ಣ ಪ್ರತಿಮೆಗೆ ಹೂ ಹಾಕುವ ಮೂಲಕ 'ಮಕ್ಕಳ ವಚನ ಮೇಳ'ಕ್ಕೆ ಮಂಗಳವಾರ ಚಾಲನೆ ನೀಡಿದರು –ಪ್ರಜಾವಾಣಿ ಚಿತ್ರ



ದೇಹದ ವಿದ್ಯುತ್‌ನಿಂದಲೇ ಇಂಟರ್‌ನೆಟ್!

ನೇಸರ ಕಾಡನಕುಪ್ಪೆ

ಬ್ರೇಸ್‌ಲೆಟ್ ಪ್ಲಸ್ – ಉಂಗುರ, ಬಳೆಯಂತೆ ಧರಿಸಬಹುದಾದ ಸಾಧನದ ಮೂಲಸ್ವರೂಪ

ವಿಶ್ವದೆಲ್ಲೆಡೆ ಈಗ 5ಜಿ ಮೊಬೈಲ್ ಜಾಲ ಸದ್ದು ಮಾಡುತ್ತಿದೆ. 5ಜಿ ತಂತ್ರಜ್ಞಾನವು ನಿಸ್ತಂತು ತಂತ್ರಜ್ಞಾನವಾದರೂ ದತ್ತಾಂಶ ರವಾನೆ ಅತಿ ವೇಗವಾಗಿ ಆಗುವುದು ಆಪ್ಟಿಕಲ್ ಫೈಬರ್ ಕೇಬಲ್ ಜಾಲದ ಮೂಲಕವೇ. 5ಜಿ ಜಾಲವನ್ನು ಇನ್ನಷ್ಟು ವೇಗಗೊಳಿಸುವ ಉದ್ದೇಶದಿಂದ 2023ರ ಅಂತ್ಯದ ವೇಳೆಗೆ ಆಪ್ಟಿಕಲ್ ಫೈಬರ್ ಕೇಬಲ್ ಅನ್ನು ಬದಲಾಯಿಸಿ, ಎಷ್ಟೇ ದೊಡ್ಡ ದತ್ತಾಂಶವನ್ನೂ ನಿಸ್ತಂತುವಾಗೇ ರವಾನೆ ಮಾಡಬಲ್ಲ ಹೊಸ ತಂತ್ರಜ್ಞಾನವೊಂದನ್ನು ಜಾರಿಗೆ ತರಲಾಗುತ್ತಿದೆ.

ಹೌದು, ಈ ತಂತ್ರಜ್ಞಾನವನ್ನು 'ವಿಎಲ್‌ಸಿ' ಎಂದು ಕರೆಯಲಾಗಿದೆ; ಎಂದರೆ, 'ವಿಸಿಬಲ್ ಲೈಟ್ ಕಮ್ಯುನಿಕೇಷನ್'. ಇದು ಗೋಚರಿಸುವ ಬೆಳಕಿನ ಸಂವಹನ. 'ಆಪ್ಟಿಕಲ್ ಫೈಬರ್ ಕೇಬಲ್' (ಒಎಫ್‌ಸಿ) ಜಾಲದಲ್ಲೂ ದತ್ತಾಂಶವು ಬೆಳಕಿನ ರೂಪದಲ್ಲೇ ಸಂಚರಿಸುವುದು. ಆದರೆ, ಆಪ್ಟಿಕಲ್ ಫೈಬರ್ ಕೇಬಲ್‌ಗೆ ಹಲವು ಮಿತಿಗಳಿವೆ. ಪ್ರಮುಖ ಮಿತಿಯೆಂದರೆ, ಬೆಳಕು ಸಂಚರಿಸುವುದು ದೈಹಿಕ ಇತಿಮಿತಿಯುಳ್ಳ 'ದೃಗ್ನಾರು' ಎಂದು ಕರೆಯಲ್ಪಡುವ ತಂತಿಯ ರೂಪದ ಸಾಧನದಲ್ಲಿ. ಈ ಆಪ್ಟಿಕಲ್ ಫೈಬರ್ ಕೇಬಲ್ ಕೆಲವೊಮ್ಮೆ ತುಂಡಾಗಬಹುದು, ಕೆಲವೊಮ್ಮೆ ದತ್ತಾಂಶ ರವಾನೆಯಲ್ಲಿ ಅಡೆತಡೆಗಳು ಉಂಟಾಗಬಹುದು. ಈ ಮಿತಿಯನ್ನು ಅಂತ್ಯಗೊಳಿಸಲು ಕೇಬಲ್ ಮೂಲಕ ಇಂಟರ್‌ನೆಟ್ ಅನ್ನು ಕೈಬಿಟ್ಟು ಸಂಪೂರ್ಣ ನಿಸ್ತಂತುವಾಗಿ ಇಂಟರ್‌ನೆಟ್ ಸೇವೆಯನ್ನು ನೀಡುವ ಸಿದ್ಧತೆ ಈಗ ನಡೆದಿದೆ.

ಅಮೆರಿಕದ ಮಸಾಚುಸೆಟ್ಸ್ ವಿಶ್ವವಿದ್ಯಾನಿಲಯದ 'ಯೂಮಾಸ್ ಆರ್ಮ್‌ರೆಸ್ಟ್ ಸಂಶೋಧನಾ ಸಂಸ್ಥೆ'ಯ ವಿಜ್ಞಾನಿ ಜೇ ಶಿಯಾಂಗ್ ಅವರ ತಂಡವು ಹೊಸ ಸಂಶೋಧನೆಯೊಂದನ್ನು ಮಾಡಿದೆ. ಈ ಸಂಶೋಧನೆ ಪರಿಪೂರ್ಣ ಹೊಸ ಸಂಶೋಧನೆಯೇನಲ್ಲ. ಈಗಾಗಲೇ ಇಂಟರ್‌ನೆಟ್ ಸೇವೆಯನ್ನು ಸುಧಾರಿಸಿ, ಸರಳೀಕೃತಗೊಳಿಸಿ ಹೊಸ ಮಾಧ್ಯಮವೊಂದರ ಮೂಲಕ ರವಾನೆ ಮಾಡುವ ವಿಧಾನವನ್ನು ಶಿಯಾಂಗ್ ಕಂಡುಹಿಡಿದಿದ್ದಾರೆ. ಸದ್ಯಕ್ಕೆ 5ಜಿ ಮೊಬೈಲ್ ಜಾಲವು ರೇಡಿಯೊ ಅಲೆಗಳನ್ನು ಬಳಸಿಕೊಂಡೇ ಸೇವೆಯನ್ನು ಸಲ್ಲಿಸುತ್ತಿದೆ. ಆದರೆ, ಶಿಯಾಂಗ್ ಶೋಧಿಸಿರುವ ವಿಧಾನದಲ್ಲಿ ರೇಡಿಯೊ ಅಲೆಗಳ ಬದಲಿಗೆ ಲೈಟ್ ಎಮಿಟಿಂಗ್ ಡಯಾಡ್ (ಎಲ್‌ಇಡಿ) ಬಲ್ಬ್‌ಗಳನ್ನು ಬಳಸಿಕೊಂಡು ಬೆಳಕಿನ ಮೂಲಕ ದತ್ತಾಂಶ ರವಾನೆಯಾಗುತ್ತದೆ.

'ಎಲ್‌ಇಡಿ ಬಲ್ಬ್‌ಗಳು ಈಗ ಯಾರಿಗೆ ತಾನೇ ಗೊತ್ತಿಲ್ಲ. ನಾವು ಕಂಡುಹಿಡಿದಿರುವ ಟ್ರಾನ್ಸ್‌ಮಿಟರ್‌ನಲ್ಲಿ ಲಕ್ಷಾಂತರ ಎಲ್‌ಇಡಿ ಬಲ್ಬ್‌ಗಳು ಇರುತ್ತವೆ. ಇವನ್ನು ಸೆಕೆಂಡ್ ಒಂದಕ್ಕೆ ಲಕ್ಷಾಂತರ ಸಲ ಆರಿಸಿ ಉರಿಸುವ ಮೂಲಕ ಸಂಜ್ಞೆಗಳನ್ನು ಸೃಷ್ಟಿಸುತ್ತೇವೆ. ಈ ವಿಧಾನದಲ್ಲಿ ದತ್ತಾಂಶವು ಸೃಷ್ಟಿಯಾಗುತ್ತದೆ. ಇದನ್ನು ಬಳಸಿಕೊಂಡು ದತ್ತಾಂಶ ರವಾನೆಯಾಗುತ್ತದೆ. ಈ ಬೆಳಕನ್ನು ಗ್ರಹಿಸುವ ಯಾವುದೇ ಸಾಧನವೂ ದತ್ತಾಂಶವನ್ನು ಗ್ರಹಿಸಿ ಓದಬಲ್ಲದು. ನಮ್ಮ ಬಳಿ ಇರುವ ಮೊಬೈಲ್ ಫೋನ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ನ ಕ್ಯಾಮೆರಾ ದತ್ತಾಂಶವನ್ನು ಸ್ವೀಕರಿಸಿ ಬಳಕೆದಾರನಿಗೆ ಕೊಡುತ್ತದೆ' ಎಂದು ಶಿಯಾಂಗ್ ವ್ಯಾಖ್ಯಾನಿಸುತ್ತಾರೆ.

ದೇಹದ ವಿದ್ಯುತ್ ಸಾಕು!

ಇಲ್ಲಿನ ಚಮತ್ಕಾರ ಕೇವಲ ನಿಸ್ತಂತು ಇಂಟರ್‌ನೆಟ್‌ದ್ದಲ್ಲ. ಈ ತಂತ್ರಜ್ಞಾನವು ದತ್ತಾಂಶ ರವಾನೆ ಅಥವಾ ಸ್ವೀಕರಿಸಲು ಮಾನದ ದೇಹದಲ್ಲಿನ ವಿದ್ಯುತ್ತನ್ನೇ ಬಳಸಿಕೊಳ್ಳುವುದು. 'ಬ್ರೇಸ್‌ಲೆಟ್ ಪ್ಲಸ್' ಎಂಬ ತಾಮ್ರದಿಂದ ನಿರ್ಮಿಸಿರುವ ಸಾಧನವೊಂದನ್ನೂ ಇವರನ್ನು ಸಂಶೋಧಿಸಿದ್ದಾರೆ. ಇದನ್ನು ದೇಹದಲ್ಲಿ ಧರಿಸಬೇಕಷ್ಟೇ. ಉಂಗುರ, ಬೆಲ್ಟ್, ಬಳೆ ಇತ್ಯಾದಿ ರೂಪಗಳನ್ನು ಇದಕ್ಕೆ ಕೊಡಬಹುದು. ಈ ಸಾಧನವು ನಿಸ್ತಂತುವಾಗಿ ಮೊಬೈಲ್, ಲ್ಯಾಪ್‌ಟಾಪ್ ಇತ್ಯಾದಿ ಸಾಧನಕ್ಕೆ ಸಂಪರ್ಕ ಹೊಂದಿರುತ್ತದೆ. 'ಬ್ರೇಸ್‌ಲೆಟ್ ಪ್ಲಸ್' ಈ ಸಾಧನಗಳಿಗೆ ದೇಹದಿಂದ ವಿದ್ಯುತ್ ಪೂರೈಕೆ ಮಾಡುತ್ತದೆ. ಹಾಗಾಗಿ, ಮೊಬೈಲ್ ಫೋನ್ ಇತ್ಯಾದಿ ಸಾಧನಗಳನ್ನು ಚಾರ್ಜ್ ಮಾಡುವ ಅಗತ್ಯವೂ ಇರುವುದಿಲ್ಲ ಎಂದು ಶಿಯಾಂಗ್ ತಂಡ ಹೇಳಿದೆ.

ಜೊತೆಗೆ, ಮೊಬೈಲ್ ಫೋನ್ ಅನ್ನು ವಿಶ್ವದಾದ್ಯಂತ ಕೋಟ್ಯಂತರ ಬಳಕೆದಾರರು ಬಳಸುವ ಕಾರಣ, ಸಮೂಹ ವಿದ್ಯುತ್ ಉತ್ಪಾದನೆಯೂ ಆಗುತ್ತದೆ ಎನ್ನುವುದು ವಿಜ್ಞಾನಿಗಳ ವಾದ. ಎಲ್ಲ ಬಳಕೆದಾರರು 'ಬ್ರೇಸ್‌ಲೆಟ್ ಪ್ಲಸ್'ಅನ್ನು ಧರಿಸಿದರೆ ಇಂಟರ್‌ನೆಟ್ ಅನ್ನು ಸಹ ನಿಸ್ತಂತುವಾಗಿ ವಿಶ್ವದ ಬೇರೆಡೆಗೆ ರವಾನೆ ಮಾಡಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ಜೊತೆಗೆ, ನಮ್ಮ ಸಂಶೋಧನೆಯು ಅತಿ ಅಗ್ಗವಾಗಿರಲಿದೆ' ಎಂದು ಶಿಯಾಂಗ್ ಹೇಳಿದ್ದಾರೆ. 'ಬ್ರೇಸ್‌ಲೆಟ್ ಪ್ಲಸ್' ಸಾಧನವೊಂದು ಕೇವಲ 50 ಅಮೆರಿಕನ್ ಸೆಂಟ್ ಗಳಿಗೆ (ಎರಡೂವರೆ ರೂಪಾಯಿ) ಗ್ರಾಹಕರಿಗೆ ಸಿಗಲಿದೆಯಂತೆ. ಮೊಬೈಲ್ ಸೇವಾ ಸಂಸ್ಥೆಗಳು ತಮ್ಮ ಬ್ರ್ಯಾಂಡ್‌ಗೆ ಪ್ರಚಾರ ನೀಡಲು ಈ ಸಾಧನಗಳನ್ನು ಅತಿ ಕಡಿಮೆ ಬೆಲೆಗೆ ಮಾರಬಹುದು. ಒಟ್ಟಿನಲ್ಲಿ ಇದು ಗ್ರಾಹಕರಿಗೆ ವರದಾನವಾಗಲಿದೆ ಎಂದು ವಿಜ್ಞಾನಿಗಳು ವಾದ ಮಂಡಿಸಿದ್ದಾರೆ.

ದೇಹದಲ್ಲಿನ ವಿದ್ಯುತ್ ಈಗ ವ್ಯರ್ಥವಾಗುತ್ತಿದೆ. ಅದನ್ನು ಉಚಿತವಾಗಿ ಬಳಸಿಕೊಳ್ಳಬಹುದು. ಈ ಸಾಧನ ಬಳಕೆಯಿಂದ ಆರೋಗ್ಯದ ಮೇಲೆ ಯಾವ ಪರಿಣಾಮವೂ ಬೀರದು. ಈಗಾಗಲೇ ತಾಮ್ರದ ಆಭರಣಗಳನ್ನು ಜನರು ಬಳಸುತ್ತಿದ್ದಾರೆ. ತಾಮ್ರ ಮೂಲ ಲೋಹವಾಗಿರುವ ಕಾರಣ ಅದರಿಂದ ಯಾವ ಅಡ್ಡ ಪರಿಣಾಮವೂ ಆಗದು. ಶ್ರೀಮಂತರು ಈ ಸಾಧನವನ್ನು ಚಿನ್ನದಲ್ಲೂ ಮಾಡಿಸಿಕೊಳ್ಳಬಹುದಂತೆ! ❖

ಒಂದೇ ಫೋನ್ ಎರಡು ವಾಟ್ಸ್‌ಆ್ಯಪ್

ಅವಿನಾಶ್ ಬಿ.

ಡ್ಯುಯಲ್ ಅಥವಾ ಅವಳಿ (ಎರಡೆರಡು) ಸಿಮ್ ಕಾರ್ಡ್‌ಗಳನ್ನು ಅಳವಡಿಸುವ ಸ್ಮಾರ್ಟ್‌ಫೋನ್ ಬಂದ ಬಳಿಕ, ಈ ಎರಡೂ ಸಿಮ್ ಕಾರ್ಡ್‌ಗಳ ಪೂರ್ಣ ಪ್ರಯೋಜನ ಪಡೆಯುವ ನಿಟ್ಟಿನಲ್ಲಿ ತಂತ್ರಜ್ಞಾನದ ತುರ್ತು ಅಭಿವೃದ್ಧಿಯ ಫಲವೆಂದರೆ, ಅವಳಿ ಮೆಸೆಂಜರ್‌ಗಳು, ಅವಳಿ ಫೇಸ್‌ಬುಕ್ ಖಾತೆಗಳು, ಅವಳಿ ವಾಟ್ಸ್‌ಆ್ಯಪ್ ಖಾತೆಗಳನ್ನು ಒಂದೇ ಫೋನ್‌ನಲ್ಲಿ ನಿಭಾಯಿಸುವುದು. ಅಧಿಕೃತವಾಗಿ ಎರಡು ಫೇಸ್‌ಬುಕ್ ಖಾತೆಗಳಿಗೆ, ಎರಡು ವಾಟ್ಸ್‌ಆ್ಯಪ್ ಖಾತೆಗಳಿಗೆ ಒಂದೇ ಸ್ಮಾರ್ಟ್‌ಫೋನ್‌ನಿಂದ ಏಕಕಾಲಕ್ಕೆ ಲಾಗಿನ್ ಆಗುವುದು ಸಾಧ್ಯವಿಲ್ಲ. ಒಂದು ಫೋನ್‌ನಲ್ಲಿ, ಒಂದು ಸಂಖ್ಯೆಯ ಮೂಲಕವಷ್ಟೇ ಯಾವುದೇ ಖಾತೆಯನ್ನು ದೃಢೀಕರಿಸಬಹುದಾಗಿದೆ. ಹೀಗಾಗಿ ಈ ತಂತ್ರವನ್ನು ಬಳಸಿದರೆ, ಏಕಕಾಲದಲ್ಲಿ ಎರಡು ಖಾತೆಗಳನ್ನು ಒಂದೇ ಫೋನ್‌ನಲ್ಲಿ ಬಳಸಬಹುದಾಗಿದೆ. ಕೆಲವು ಫೋನ್ ತಯಾರಕರು ಈ ವೈಶಿಷ್ಟ್ಯವನ್ನು ಅಳವಡಿಸಿಯೇ ವಿತರಿಸುತ್ತಿದ್ದರೆ, ಇನ್ನು ಕೆಲವು ಆ್ಯಪ್‌ಗಳನ್ನು ಬಳಸಿ ಎರಡೆರಡು ಖಾತೆಗಳನ್ನು ಒಂದೇ ಫೋನ್‌ನಲ್ಲಿ ನಿಭಾಯಿಸಬಹುದು. ಪ್ರತ್ಯೇಕ ಆ್ಯಪ್ ಬಳಸುವುದು ಅಷ್ಟೇನೂ ಸುರಕ್ಷಿತವಲ್ಲದ ಕಾರಣ ಅದರ ಬಗ್ಗೆ ಇಲ್ಲಿ ವಿವರಣೆ ನೀಡಲಾಗಿಲ್ಲ.

ಅಂತರ್‌ನಿರ್ಮಿತವಾಗಿಯೇ ಬಂದಿರುವ ಡ್ಯುಯಲ್ ಆ್ಯಪ್ ಬಳಕೆಯ ವೈಶಿಷ್ಟ್ಯವು ಹೆಚ್ಚು ಉಪಯೋಗಕ್ಕೆ ಬರುವುದು ವಾಟ್ಸ್‌ಆ್ಯಪ್ ಬಳಕೆಯಲ್ಲಿ. ಒಂದು ಸ್ವಂತ ಅಥವಾ ಖಾಸಗಿ ಸಂಪರ್ಕಗಳಿಗಾಗಿ ಖಾತೆ ಹಾಗೂ ಇನ್ನೊಂದು ಫೋನ್ ನಂಬರ್‌ಗೆ ಲಿಂಕ್ ಆಗಿರುವ ವಾಟ್ಸ್‌ಆ್ಯಪ್ ಖಾತೆಯನ್ನು ಬಿಸಿನೆಸ್ ಅಥವಾ ವ್ಯಾವಹಾರಿಕ ಖಾತೆಯಾಗಿ, ಉತ್ಪನ್ನಗಳು ಇಲ್ಲವೇ ಸೇವೆಗಳ ಪ್ರಚಾರಕ್ಕಾಗಿ ಬಳಸಬಹುದು.

ಒಂದೇ ಫೋನ್‌ನಲ್ಲಿ ಎರಡು ವಾಟ್ಸ್‌ಆ್ಯಪ್, ಫೇಸ್‌ಬುಕ್ ಬಳಕೆ. ಚಿತ್ರ: AFP

> ಒಂದು ಸ್ವಂತ ಅಥವಾ ಖಾಸಗಿ ಸಂಪರ್ಕಗಳಿಗಾಗಿ ಖಾತೆ ಹಾಗೂ ಇನ್ನೊಂದು ಫೋನ್ ನಂಬರ್‌ಗೆ ಲಿಂಕ್ ಆಗಿರುವ ವಾಟ್ಸ್‌ಆ್ಯಪ್ ಖಾತೆಯನ್ನು ಬಿಸಿನೆಸ್ ಅಥವಾ ವ್ಯಾವಹಾರಿಕ ಖಾತೆಯಾಗಿ, ಉತ್ಪನ್ನಗಳು, ಇಲ್ಲವೇ ಸೇವೆಗಳ ಪ್ರಚಾರಕ್ಕಾಗಿ ಬಳಸಬಹುದು.

ಮೂಲತಃ ಒಂದು ಫೋನ್ ನಂಬರ್‌ನಿಂದ ಒಂದು ವಾಟ್ಸ್‌ಆ್ಯಪ್ ಖಾತೆಯನ್ನು ಮಾತ್ರವೇ ನಿಭಾಯಿಸಬಹುದು. ತಯಾರಕರು ನೀಡುವ ವೈಶಿಷ್ಟ್ಯದ ಮೂಲಕ, ಡ್ಯುಯಲ್ (ಎರಡು) ಸಿಮ್ ಕಾರ್ಡ್ ಇರುವವರು ಅವಳಿ ಖಾತೆಗಳನ್ನು ರಚಿಸಲು ಆಂಡ್ರಾಯ್ಡ್ ಫೋನ್‌ಗಳಲ್ಲಿ ಅವಕಾಶವಿದೆ. ಸ್ಯಾಮ್‌ಸಂಗ್, ಒನ್‌ಪ್ಲಸ್, ಒಪ್ಪೊ, ಶಓಮಿ, ಹುವಾವೆ, ವಿವೋ ಹಾಗೂ ರಿಯಲ್‌ಮಿ ಮುಂತಾದ ಇತ್ತೀಚಿನ ಸ್ಮಾರ್ಟ್‌ಫೋನ್‌ಗಳಲ್ಲಿ ಅಂತರ್-ನಿರ್ಮಿತ ವ್ಯವಸ್ಥೆಯಿದೆ. ಸೆಟ್ಟಿಂಗ್ಸ್ ಆ್ಯಪ್‌ನಲ್ಲಿ 'ಅಡ್ವಾನ್ಸ್‌ಡ್ ಫೀಚರ್ಸ್'' ಎಂಬಲ್ಲಿ ಹೋದರೆ, 'ಡ್ಯುಯಲ್ ಮೆಸೆಂಜರ್'' ಎಂಬ ಆಯ್ಕೆ ಇದೆ. ಅದನ್ನು ತೆರೆದರೆ, ಫೇಸ್‌ಬುಕ್, ವಾಟ್ಸ್‌ಆ್ಯಪ್, ಸ್ನ್ಯಾಪ್‌ಚಾಟ್, ಟೆಲಿಗ್ರಾಂ ಹಾಗೂ ಮೆಸೆಂಜರ್ - ಇವುಗಳನ್ನು ಅವಳಿ ಖಾತೆ ಬಳಸುವಂತೆ ಹೊಂದಿಸುವ ಆಯ್ಕೆ ದೊರೆಯುತ್ತದೆ. ಆಯಾ ಆ್ಯಪ್ ಹೆಸರಿನ ಮುಂದಿರುವ ಸ್ಲೈಡರ್ ಅನ್ನು ಬಲಕ್ಕೆ ಸರಿಸಿದರೆ ಅದರ ಎರಡನೇ ಆ್ಯಪ್ ಕ್ರಿಯೇಟ್ ಆಗುತ್ತದೆ. ಮೇಲಿನದು ಸ್ಯಾಮ್‌ಸಂಗ್ ಫೋನ್‌ನ ಸೆಟ್ಟಿಂಗ್ ಆಗಿದ್ದರೆ, ಬೇರೆ ಕೆಲವು ಕಂಪನಿಗಳ ಫೋನ್‌ಗಳಲ್ಲಿ ಇದಕ್ಕೆ ಕ್ಲೋನ್ ಆ್ಯಪ್, ಡ್ಯುಯಲ್ ಆ್ಯಪ್ಸ್ ಅಥವಾ ಬೇರೆ ಸಂಬಂಧಿತ ಹೆಸರು ಇರಬಹುದು ಎಂಬುದು ಗಮನದಲ್ಲಿರಲಿ.

ಹೀಗೆ ಕ್ರಿಯೇಟ್ ಆಗುವ ಎರಡನೇ ಆ್ಯಪ್ ಅನ್ನು ಪ್ರಧಾನ ಆ್ಯಪ್‌ನಿಂದ ಪ್ರತ್ಯೇಕವಾಗಿ ಕಾಣುವಂತೆ ಮಾಡಲು ಆ್ಯಪ್ ಐಕಾನ್ ತುದಿಗೊಂದು ಬೇರೆ ಬಣ್ಣದ ಸೂಚಕವಿರುತ್ತದೆ. ಹೀಗೆ ರಚನೆಯಾದ ಎರಡನೇ ಆ್ಯಪ್‌ಗೆ ಎಂದಿನಂತೆಯೇ ಫೋನ್ ನಂಬರ್ ಬಳಸಿ ಅಥವಾ ಫೇಸ್‌ಬುಕ್ ಬಳಕೆದಾರ ಹೆಸರು - ಪಾಸ್‌ವರ್ಡ್ ಬಳಸಿ ಲಾಗಿನ್ ಆಗಬಹುದು.

ಆದರೆ ಗಮನಿಸಬೇಕಾದ ಅಂಶವೆಂದರೆ, ಇದು ಪ್ರತ್ಯೇಕ ಆ್ಯಪ್ ಇನ್‌ಸ್ಟಾಲ್ ಮಾಡುವುದಲ್ಲ. ಬದಲಾಗಿ ಒಂದು ಆ್ಯಪ್‌ನ ಕ್ಲೋನ್ ಅಥವಾ ತದ್ರೂಪಿಯನ್ನು ಸೃಷ್ಟಿಸುವುದು. ನೀವು ಆ ಆ್ಯಪ್ ಅನ್‌ಇನ್‌ಸ್ಟಾಲ್ ಮಾಡಿದರೆ ಎರಡೂ ಖಾತೆಗಳು ಫೋನ್‌ನಿಂದ ಡಿಲೀಟ್ ಆಗುತ್ತವೆ ಎಂಬುದು ನೆನಪಿಡಬೇಕಾದ ವಿಚಾರ.

ಇನ್‌ಸ್ಟಾಗ್ರಾಂ, ಟೆಲಿಗ್ರಾಂ, ಟ್ವಿಟರ್ ಮುಂತಾದ ಆ್ಯಪ್‌ಗಳಲ್ಲಿ, ಇನ್ನೊಂದು ಖಾತೆಗೆ ಲಾಗಿನ್ ಆಗುವ ಆಯ್ಕೆ ನೀಡಲಾಗಿದೆ. ಆಯಾ ಖಾತೆಗಳನ್ನು ನೋಡಲು ಪ್ರೊಫೈಲ್ ಬದಲಿಸುವ ಆಯ್ಕೆಯ ಮೇಲೆ ಕ್ಲಿಕ್ ಮಾಡಿದರೆ ಸಾಕಾಗುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

12) ಭಾರತದಲ್ಲಿರುವ ಮೆಕ್ಕಲು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:- ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿದೆ.. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ

13) ಸಾರ್ವಜನಿಕ ಹಣಕಾಸಿ ಮಹತ್ವ ತಿಳಿಸಿ

ಉತ್ತರ : ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದಸರ್ಕಾರವು ತನ್ನ ಆದಾಯ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ ಅಥವಾ ವಿತ್ತೀಯ ನೀತಿ (Fiscal policy)) ಎನ್ನುತ್ತಾರೆ. ಸರ್ಕಾರವು ಕೋಶೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸನ್ನು ನಿರ್ವಹಿಸುತ್ತದೆ. ಸಾರ್ವಜನಿಕ ಹಣಕಾಸು ದೇಶದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ವಹಿಸಲ್ಪಡುತ್ತದೆ. ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ದೇಶದಲ್ಲಿರುವ ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸಮರ್ಪಕವಾಗಿ ಹಂಚಿಕೆಯಾಗುವಂತೆ ಹಾಗೂ ಉತ್ಪಾದನೆಯು ಗರಿಷ್ಠ ಮಟ್ಟಕ್ಕೆ ಹೆಚ್ಚುವಂತೆ ತಂತ್ರಗಳನ್ನು ರೂಪಿಸುತ್ತದೆ. ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯವು ಎಲ್ಲ ಪ್ರಜೆಗಳಲ್ಲಿ ಆದಷ್ಟು ಸಮನಾಗಿ ಹಂಚಿಕೆಯಾಗುವಂತೆ ನೋಡಿಕೊಂಡು, ಸಮಾಜದ ಎಲ್ಲ ವರ್ಗದ ಜನರು ಶಾಂತಿ, ನೆಮ್ಮದಿಯಿಂದ ಬದುಕುವಂತೆ ಮಾಡಲು ಪ್ರಯತ್ನಿಸುತ್ತದೆ. ಇದರಿಂದ ಪ್ರಜೆಗಳ ಕಲ್ಯಾಣ ಹೆಚ್ಚಳವಾಗಿ, ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.
ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ, ಕೃಷಿ, ಸಣ್ಣ ಕೈಗಾರಿಕೆ, ಮೂಲಸೌಕರ್ಯ ಮೊದಲಾದ ಆದ್ಯತಾ ವಲಯಗಳಲ್ಲಿ ಬಂಡವಾಳ ಹೂಡಿಕೆಯು ಹೆಚ್ಚುವಂತೆ ಮಾಡುತ್ತದೆ. ಆ ಮೂಲಕ ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳು ಸಮತೋಲನವಾಗಿ ಅಭಿವೃದ್ಧಿಹೊಂದುವಂತೆ ಕ್ರಮ ಕೈಗೊಳ್ಳುತ್ತದೆ.
ಭಾರತದಂತಹ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಹಾಗೂ ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಹಾಗೂ ನಿಯಂತ್ರಣ ಮಾಡಿ, ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾರ್ವಜನಿಕ ಹಣಕಾಸು ನೀತಿಯನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ.

ಅಥವಾ

ಉದ್ಯಮಿಯ ಪಾತ್ರ ಮತ್ತು ಪ್ರಾಮುಖ್ಯತೆ

ಉತ್ತರ: ಉದ್ಯಮಿಗಳು ವ್ಯಾಪಾರದ ಧುರೀಣರಾಗಿದ್ದು ವಿವಿಧ ಅನಿಸಿಕೆಗಳನ್ನು ಗಮನಿಸಿ ಅವುಗಳನ್ನು ಕಾರ್ಯರೂಪಕ್ಕೆ ತಂದು ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುತ್ತಾರೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ಬಹುಮುಖ್ಯವಾಗಿದೆ. ಇವರು ಕೈಗಾರಿಕಾ ಕ್ಷೇತ್ರದ ಪರಿವರ್ತನೆಯೇ ಅಲ್ಲದೆ ವ್ಯವಸಾಯ ಮತ್ತು ಸೇವಾಕ್ಷೇತ್ರಗಳ ಅಭಿವೃದ್ಧಿಯಲ್ಲೂ ಮುಖ್ಯ ಪಾತ್ರ ವಹಿಸುತ್ತಾರೆ. ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಈ ಕೆಳಗಿನಂತೆ ಪಾತ್ರವಹಿಸುತ್ತಾರೆ.

1) ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ನಿರ್ಮಾಣ ಮಾಡುತ್ತಾರೆ. ಅವರು ಸಂಪನ್ಮೂಲಗಳನ್ನು ಉದ್ದಿಮೆಗಳನ್ನು ಪ್ರಾರಂಭಿಸಲು ಉಪಯೋಗಿಸುತ್ತಾರೆ.
2) ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
3) ಉದ್ಯಮಿಗಳು ಒಂದು ದೇಶದ ನಿವ್ವಳದೇಶಿಯ ಉತ್ಪನ್ನ ((GDP) ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
4) ಉದ್ಯಮಿಗಳು ಬಂಡವಾಳ ಮತ್ತು ಕೌಶಲವನ್ನು ಪ್ರಯೋಜನಕಾರಿಯಾಗಿ ಒಟ್ಟುಗೂಡಿಸಿ ಹೊಸವಸ್ತುಗಳನ್ನು ಮತ್ತು ಸೇವೆಗಳನ್ನು ರೂಢಿಸಿ ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
5) ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
6) ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ. ಅವರು ಪ್ರಾಂತೀಯ ತಾರತಮ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ನಿವಾರಿಸುತ್ತಾರೆ.
7) ಉದ್ಯಮಿಗಳು ಆದಾಯ ಮತ್ತು ಸಂಪತ್ತು ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.
8) ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.
9) ಉದ್ಯಮಿಗಳು ಹೊಸ ಬದಲಾವಣೆಗಳನ್ನು ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.

14) ``ಗ್ರಾಹಕ ಕಾಯ್ದೆಯು ಭಾರತದ ಎಲ್ಲಾ ಗ್ರಾಹಕರ ಹಿತವನ್ನು ಕಾಯುವ ಸಾಧನವಾಗಿದೆ'' ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:- ಗ್ರಾಹಕ ಸಂರಕ್ಷಣಾ ಕಾಯಿದೆಯು ಭಾರತದ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಮತ್ತು ಗ್ರಾಹಕ ಹಿತಾಸಕ್ತಿಗಳನ್ನು ಸಶಕ್ತವಾಗಿ ಕಾಪಾಡಲು ಈ ಕೆಳಗೆ ಹೇಳಿದ ರೀತಿಯಲ್ಲಿ ಸಹಾಯ ಮಾಡುತ್ತದೆ.

- ಈ ಕಾಯ್ದೆಯು ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕನ್ನು ನೀಡುತ್ತದೆ.
- ಸರಕುಗಳ ಮತ್ತು ಸೇವೆಗಳ ಗುಣಮಟ್ಟ, ಪ್ರಮಾಣ, ಶಕ್ತಿ ಸಾಮರ್ಥ್ಯ, ಪರಿಶುದ್ಧತೆ ಮತ್ತು ಬೆಲೆಗಳ ವಿರುದ್ಧ ಮಾಹಿತಿ ಪಡೆಯುವ ಹಕ್ಕನ್ನು ಈ ಕಾಯ್ದೆ ನೀಡುತ್ತದೆ.
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು ಈ ಈ ಕಾಯ್ದೆ ನೀಡುತ್ತದೆ ಗ್ರಾಹಕ ಹಕ್ಕು ನ್ಯಾಯಾಲಯಗಳಿಗೆ ಪರಿಹಾರ ಕೇಳಿ ಗ್ರಾಹಕರು ಹೋಗಲು ಅವಕಾಶ ನೀಡುತ್ತದೆ.
- ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಸರಿಯಾದ ತಿಳುವಳಿಕೆ ಪಡೆಯುವ ಗ್ರಾಹಕ ಶಿಕ್ಷಣದ ಹಕ್ಕಿನ ಇದು ಅವಕಾಶ ನೀಡುತ್ತದೆ
- ಗ್ರಾಹಕರಿಗೆ ಉತ್ತಮ ಆರೋಗ್ಯಕರ ಮತ್ತು ಭೌತಿಕ ಪರಿಸರಗಳನ್ನುಉಂಟುಮಾಡಿ ಅವರ ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕನ್ನು ಇದು ನೀಡುತ್ತದೆ.

ಹೀಗಾಗಿ ``ಗ್ರಾಹಕ ಕಾಯ್ದೆಯು ಭಾರತದ ಎಲ್ಲಾ ಗ್ರಾಹಕರ ಹಿತವನ್ನು ಕಾಯುವ ಸಾಧನವಾಗಿದೆ''

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿಯ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ರಸಾಯನವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ದ್ವಿತೀಯ ಪಿಯುಸಿ : ಗಣಿತ ಶಾಸ್ತ್ರ

ಮಾದರಿ ಪ್ರಶ್ನೆಗಳು

ಪಿಯುಸಿ

29) $\int_0^\pi \frac{x\,dx}{a^2\cos^2 x+b^2\sin^2 x}$ ನ್ನು ಕಂಡುಹಿಡಿಯಿರಿ.

ಉತ್ತರ:–

$$I=\int_0^\pi \frac{x\,dx}{a^2\cos^2 x+b^2\sin^2 x}=\int_0^\pi \frac{(\pi-x)dx}{a^2\cos^2(\pi-x)+b^2\sin^2(\pi-x)}$$

$$=\pi\int_0^\pi \frac{dx}{a^2\cos^2 x+b^2\sin^2 x}-\int_0^\pi \frac{x\,dx}{a^2\cos^2 x+b^2\sin^2 x}$$

$$=\pi\int_0^\pi \frac{dx}{a^2\cos^2 x+b^2\sin^2 x}-1$$

$$\therefore\quad 2I=\pi\int_0^\pi \frac{dx}{a^2\cos^2 x+b^2\sin^2 x}$$

ಅಥವಾ $$I=\frac{\pi}{2}\int_0^\pi \frac{dx}{a^2\cos^2 x+b^2\sin^2 x}=\frac{\pi}{2}\cdot 2\int_0^{\pi/2} \frac{dx}{a^2\cos^2 x+b^2\sin^2 x}$$

$$=\pi\left[\int_0^{\frac{\pi}{4}} \frac{dx}{a^2\cos^2 x+b^2\sin^2 x}+\int_{\frac{\pi}{4}}^{\frac{\pi}{2}} \frac{dx}{a^2\cos^2 x+b^2\sin^2 x}\right]$$

$$=\pi\left[\int_0^{\frac{\pi}{4}} \frac{\sec^2 x}{a^2+b^2\tan^2 x}dx+\int_{\frac{\pi}{4}}^{\frac{\pi}{2}} \frac{\operatorname{cosec}^2 x\,dx}{a^2\cot^2 x+b^2}\right]$$

$$=\pi\left[\int_0^1 \frac{dt}{a^2+b^2t^2}-\int_1^0 \frac{du}{a^2u^2+b^2}\right]$$ ($\tan x = t$ ಮತ್ತು $\cot x = u$ ಆದಾಗ)

$$I=\frac{\pi}{ab}\left[\tan^{-1}\frac{bt}{a}\right]_0^1-\frac{\pi}{ab}\left[\tan^{-1}\frac{au}{b}\right]_1^0$$

$$=\frac{\pi}{ab}\left[\tan^{-1}\frac{b}{a}+\tan^{-1}\frac{a}{b}\right]=\frac{\pi}{ab}\left(\frac{\pi}{2}\right)=\frac{\pi^2}{2ab}$$

30) $\mathbf{p^2+q^2+r^2=1}$, ಎಂಬ ಸಮೀಕರಣವನ್ನು $\mathbf{p, q, r}$ ಗಳು ತೃಪ್ತಿಪಡಿಸುತ್ತವೆಯಾದರೆ

$$\mathbf{A}=\begin{bmatrix}0 & r & q\\ -r & 0 & p\\ -q & -p & 0\end{bmatrix}$$ ಎಂಬುದು

ಸಮೀಕರಣವಾದ $\mathbf{A^3+A=0}$ ತೃಪ್ತಿಪಡಿಸಬಲ್ಲುದೆಂದು ತೋರಿಸಿ

ಪರಿಹಾರ:–

$$A^2=A.A=\begin{bmatrix}0 & r & q\\ -r & 0 & p\\ -q & -p & 0\end{bmatrix}\begin{bmatrix}0 & r & q\\ -r & 0 & p\\ -q & -p & 0\end{bmatrix}$$

$$=\begin{bmatrix}-r^2-q^2 & -pq & pr\\ -pq & -r^2-p^2 & -qr\\ pr & -qr & -q^2-p^2\end{bmatrix}$$

$$\left(\begin{matrix}\text{as } p^2+q^2+r^2=1;\ -r^2-q^2=p^2-1;\ -r^2-p^2=q^2-1\\ \text{and } -q^2-p^2=r^2-1\end{matrix}\right)$$

$$A^3=\begin{bmatrix}p^2-1 & -pq & pr\\ -pq & q^2-1 & -qr\\ pr & -qr & r^2-1\end{bmatrix}\begin{bmatrix}0 & r & q\\ -r & 0 & p\\ -q & -p & 0\end{bmatrix}$$

$$\begin{bmatrix}pqr-pqr & (p^2-1)r-p^2r & (p^2-1)q-p^2q\\ -r(q^2-1)+q^2r & -pqr+pqr & -p^2q+p(q^2-1)\\ qr^2-q(r^2-1) & pr^2-p(r^2-1) & pqr-pqr\end{bmatrix}$$

$$\Rightarrow\begin{bmatrix}0 & -r & -q\\ r & 0 & -p\\ q & p & 0\end{bmatrix}-\begin{bmatrix}0 & r & q\\ -r & 0 & p\\ -q & -p & 0\end{bmatrix}=-A$$

$$\Rightarrow\therefore A^3+A=0$$

ನೆನಪಿಡಿ

ಮಾತೃಕೆಗಳ ಗುಣಾಕಾರದ ಗುಣಲಕ್ಷಣಗಳು (Properties of multiplication of matrices):

ಮಾತೃಕೆಗಳ ಗುಣಾಕಾರವು ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳನ್ನು ನಾವು ಸಾಧನಾರಹಿತವಾಗಿ ನಿರೂಪಿಸುತ್ತೇವೆ.

1. **ಸಹವರ್ತನೀಯ ನಿಯಮ** (Associative Law) :- A, B ಮತ್ತು C ಎಂಬ ಮೂರು ಮಾತೃಕೆಗಳಿಗೆ ಸಮೀಕರಣದ ಎರಡೂ ಬದಿ ಇರುವ ಮಾತೃಕೆಗಳನ್ನು ಕಂಡುಹಿಡಿಯಲು ಸಾಧ್ಯವಾದಲ್ಲಿ (AB) C = A (BC), ಆಗುತ್ತದೆ.

2. **ವಿಭಾಜಕ ನಿಯಮ** (Distributive law) :– A, B ಮತ್ತು C ಎಂಬ ಮಾತೃಕೆಗಳಿಗೆ, ಸಮೀಕರಣದ ಎರಡೂ ಬದಿಗಳನ್ನು ಕಂಡುಹಿಡಿದರೆ,
(i) A (B+C) = AB + AC (ii) (A+B) C = AC + BC, ಆಗುವುದು.

3. **ಗುಣಾಕಾರದ ಅನನ್ಯತಾಂಶ (identity)ದ ಅಸ್ತಿತ್ವ** :– A ಎಂಬ ಪ್ರತಿಯೊಂದು ವರ್ಗ ಮಾತೃಕೆಗೂ, IA = AI = A ಆಗುವಂತೆ, ಅದೇ ದರ್ಜೆಯ ಅನನ್ಯತಾ ಮಾತೃಕೆಯೊಂದು ಅಸ್ಥಿತ್ವದಲ್ಲಿರುತ್ತದೆ.

‘ಚಂದ್ರಗಿರಿಯ ತೀರ’ದ ಸ್ತ್ರೀ–ಸ್ವಾತಂತ್ರ್ಯವಾದಿ ಸಾರಾ

• ಚಂದ್ರಕಲಾ ನಂದಾವರ

‘ಚಂದ್ರಗಿರಿಯ ತೀರದಲ್ಲಿ’ ಕಾದಂಬರಿ ‘ಲಂಕೇಶ್ ಪತ್ರಿಕೆ’ಯಲ್ಲಿ 1984ರಲ್ಲಿ ಧಾರಾವಾಹಿಯಾಗಿ ಬಂದಾಗ ಸಾರಾ ಅಬೂಬಕ್ಕರ್ ಎಂಬ ಹೆಣ್ಣುಮಗಳ ಹೆಸರು ಕನ್ನಡ ಸಾಹಿತ್ಯ ಲೋಕದಲ್ಲಿ ಅಪೂರ್ವವಾಗಿ ಕಾಣಿಸಿತು. ಮಹಿಳಾ ಕಾದಂಬರಿಗಳ ಹುಲುಸಾದ ಬೆಳೆಯ ಆ ದಿನಗಳಲ್ಲಿ ಒಂದು ವೈಚಾರಿಕವಾದ ಸಾಮಾಜಿಕ ಕೃತಿಯಾಗಿ ಅದರ ಓದು ಕೊಟ್ಟ ಖುಷಿ ಅವಿಸ್ಮರಣೀಯ. ಅದುವರೆಗೆ ಮುಸ್ಲಿಂ ಜನಾಂಗದ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲಕ್ಕೆ ಅದಾಗಲೇ ಫಕೀರ್ ಮಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ ಅವರ ಕತೆಗಳು ಒಂದಷ್ಟು ಉತ್ತರಗಳನ್ನು ನೀಡುತ್ತಿದ್ದವಾದರೂ, ಮುಸ್ಲಿಂ ಜನಾಂಗದ ಕುರಿತು ಹೊಸ ತಿಳಿವಳಿಕೆಯನ್ನು ಅದಕ್ಕಿಂತಲೂ ಹೆಚ್ಚು ಆರ್ದ್ರವಾಗಿ, ವಾಸ್ತವವಾಗಿ, ಕಟ್ಟಿಕೊಟ್ಟದ್ದು ‘ಚಂದ್ರಗಿರಿಯ ತೀರದಲ್ಲಿ’ ಕಾದಂಬರಿ. ಮಹಿಳಾ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿತು.

‘ಶೀಲವೇ ಶೈಲಿ’ ಎಂಬ ಕಾವ್ಯ ಸಿದ್ಧಾಂತವು ಸಾರಾ ಅವರ ಬರಹ- ಬದುಕು ಎರಡಕ್ಕೂ ಸಮಾನವಾದುದು. ಸರಳ, ಸಹಜವಾದ ನೇರ ಮಾತುಗಳ ಅತ್ಯಂತ ಆಪ್ತವಾದ ಶೈಲಿಯಿಂದಾಗಿ ಅವರ ಬರಹಗಳು ಆಪ್ತವಾಗುತ್ತವೆ. ಮುಸ್ಲಿಂ ಮಹಿಳೆಯರು ಬರೆಯುವುದು ಬಿಡಿ, ವಿದ್ಯಾಭ್ಯಾಸ ಪಡೆಯುವುದಕ್ಕೂ ನಿರ್ಬಂಧಗಳಿದ್ದ ಕಾಲದಲ್ಲಿ ಬರಹದ ಮೂಲಕ ಕ್ರಾಂತಿಗೆ ಮುಂದಡಿ ಇಟ್ಟವರು ಅವರು. ಸಮಾಜದ, ಸಮುದಾಯದ ಆಚರಣೆ, ಮೌಢ್ಯಗಳ ಕುರಿತು ಧ್ವನಿ ಎತ್ತಲು ಯಾವತ್ತೂ ಹಿಂಜರಿದವರಲ್ಲ. ಬರಹ, ಭಾಷಣಗಳ ಪ್ರಾರಂಭದ ದಿನಗಳಲ್ಲಿ ತಮ್ಮ ಸಮುದಾಯದ ಜನರಿಂದಲೇ ಅವಮಾನ, ಆಕ್ರೋಶಗಳಿಗೆ ಒಳಗಾದ ಸಾರಾ, ಧೈರ್ಯಗೆಡದೆ ತಮ್ಮ ನ್ಯಾಯಯುತವಾದ ಸತ್ಯದ ದಾರಿಯಲ್ಲಿ ಮುಂದುವರಿದವರು. ತಮ್ಮ ಕೃತಿಗಳ ಪ್ರಕಟಣೆಗಾಗಿ ‘ಚಂದ್ರಗಿರಿ ಪ್ರಕಾಶನ’ ಸಂಸ್ಥೆ ಹುಟ್ಟುಹಾಕಿ, ಸ್ವತಃ ನಿರ್ವಹಿಸುವ ಛಾತಿ ತೋರಿದ ಗಟ್ಟಿಗಿತ್ತಿ. ಅವರು ತೋರಿದ ಆತ್ಮಸ್ಥೈರ್ಯ ಮಹಿಳೆಯರಿಗೆ ಮಾದರಿ.

ಸಾರಾ, ಬರಹವನ್ನೇ ವ್ಯಕ್ತಿತ್ವವಾಗಿಸಿಕೊಂಡ ತಾಯಿ. ಸಾಕಷ್ಟು ಹೆಸರು ಮಾಡಿದ ಬಳಿಕವೂ ತಾನೊಬ್ಬ ದೊಡ್ಡ ಲೇಖಕಿಯೆಂಬ ಜಂಭ ಅವರನ್ನು ಎಂದಿಗೂ ಕಾಡಲಿಲ್ಲ. ಕರಾವಳಿಯ ಮೂಲೆ ಮೂಲೆಗೂ ತೆರಳಿ ಮಹಿಳಾಪರ, ಹೋರಾಟದ ದನಿಯಾದವರು. ಮುಸ್ಲಿಮರಷ್ಟೇ ಅಲ್ಲ, ಎಲ್ಲ ಧರ್ಮಗಳ ಮಹಿಳೆಯರ ಜಾಗೃತಿಗೆ ಬೆಳಕಾದವರು. ಬದುಕನ್ನು ವಾಸ್ತವದ ನಿಟ್ಟಿನಲ್ಲಿ ಸ್ವೀಕರಿಸಿದ ಅವರು ಜಾತಿ- ಮತಗಳ ಸಂಕುಚಿತತೆಯನ್ನು ಮೀರಿ ಎಲ್ಲಾ ಧರ್ಮಗಳ ಕುರಿತೂ ತಿಳಿದುಕೊಳ್ಳಬೇಕೆನ್ನುವ ಕುತೂಹಲ ಹೊಂದಿದ್ದರು.

ಕರಾವಳಿ ಲೇಖಕಿಯರ- ವಾಚಕಿಯರ ಸಂಘದ ಸ್ಥಾಪಕ ಉಪಾಧ್ಯಕ್ಷೆಯಾಗಿದ್ದರು. ಸಂಘಕ್ಕೆ ಕಟ್ಟಡ ಇಲ್ಲದ ದಿನಗಳಲ್ಲಿ ನಮ್ಮ ಕಾರ್ಯಕಾರಿ ಸಭೆಗಳು ಪದಾಧಿಕಾರಿಗಳ ಮನೆಗಳಲ್ಲಿ, ಸದಸ್ಯೆಯರ ಮನೆಗಳಲ್ಲಿ ನಡೆಯುತ್ತಿದ್ದವು. ಸಾರಾ ಅವರ ಮನೆಯಲ್ಲಿ ಸಭೆ ನಡೆದಾಗ, ಅವರ ಕೈರುಚಿಯಲ್ಲಿ ಕೇರಳದ ಸ್ವಾದಿಷ್ಟ ತಿನಿಸುಗಳ ಸ್ವಾದವನ್ನು ಸವಿದಿದ್ದೇವೆ. ಮನೆ, ಕುಟುಂಬ ನಿರ್ವಹಣೆ ಅವರಿಗೆ ಕರತಲಾಮಲಕ. ಇವೆಲ್ಲಾ ಸಾತ್ವಿಕ ಕಾರ್ಯಕ್ರಮ ಬರಹಗಳ ಎಡೆಯಲ್ಲೂ ಹಬ್ಬ ಉಪವಾಸ, ನೆಂಟರಿಷ್ಟರ ಮದುವೆ, ಸೀಮಂತಗಳಲ್ಲಿ ಭಾಗಿಯಾಗುತ್ತಿದ್ದ ಅವುಗಳ ಗುಣದೋಷಗಳನ್ನು ತನ್ನ ಬರಹಕ್ಕೆ ವಸ್ತುಗಳನ್ನಾರಿಸಿದ ಜಾಣ್ಮೆ ಅವರದು.

ಲೇಖಕಿ: ಸಾರಾ ಅಬೂಬಕ್ಕರ್ ಅವರ ಒಡನಾಡಿ

ಹಾಲುಮತ ಸಂಸ್ಕೃತಿ ವೈಭವ ಮೂವರಿಗೆ ಪುರಸ್ಕಾರ

ಬೆಂಗಳೂರು: ರಾಯಚೂರು ಜಿಲ್ಲೆಯ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶಾಖಾಮಠ ತಿಂಥಣಿಬ್ರಿಜ್ ಶ್ರೀಮಠದಲ್ಲಿ ಜ.12ರಿಂದ 14ರ ತನಕ 16ನೇ ಹಾಲುಮತ ಸಂಸ್ಕೃತಿ ವೈಭವ ಹಮ್ಮಿಕೊಳ್ಳಲಾಗಿದೆ ಎಂದು ಕುರುಬ ಸಮಾಜದ ಮುಖಂಡ ಎಚ್.ಎಂ.ರೇವಣ್ಣ ತಿಳಿಸಿದರು.

ಅಡಿವೆಪ್ಪ ಮಹಾರಾಜ

ಚಿನ್ನಮ್ಮ ಮುದ್ದುಮಗುಡ್ಡಿ

ಸಿದ್ದಣ್ಣ ಫಕೀರಪ್ಪ ಜಕಬಾಳ

ಸಿದ್ಧರಾಮಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಸಂಸ್ಕೃತಿ ವೈಭವದಲ್ಲಿ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ ಹಾಗೂ ಶಿವಾನಂದಪುರಿ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಹಾಲುಮತ ಭಾಸ್ಕರ ಪ್ರಶಸ್ತಿ’ಗೆ ಅಡಿವೆಪ್ಪ ಮಹಾರಾಜ, ‘ಕನಕ ರತ್ನ ಪ್ರಶಸ್ತಿ’ಗೆ ಸಿದ್ದಣ್ಣ ಫಕೀರಪ್ಪ ಜಕಬಾಳ, ‘ಸಿದ್ಧಶ್ರೀ ಪ್ರಶಸ್ತಿ’ಗೆ ಚಿನ್ನಮ್ಮ ಮುದ್ದುಮಗುಡ್ಡಿ ಆಯ್ಕೆಯಾಗಿದ್ದಾರೆ. ಜ.14ರಂದು ಕಾರ್ಯಕ್ರಮದಲ್ಲಿ ಪ್ರಶಸ್ತಿ, ತಲಾ ₹ 50 ಸಾವಿರ ನೀಡಲಾಗುವುದು’ ಎಂದರು.

ಸಾರಾ ಅಬೂಬಕ್ಕರ್ ಇನ್ನಿಲ್ಲ

ಒಂದನೇ ಪುಟದಿಂದ...

ಅನೇಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿತ್ತು. ‘ಹೊತ್ತು ಕಂತುವ ಮುನ್ನ’ ಅವರ ಆತ್ಮಕತೆ.

ಹಲವು ಕಾದಂಬರಿ, ಐದು ಕಥಾ ಸಂಕಲನ, ನಾಟಕ, ಪ್ರವಾಸ ಕೃತಿಗಳು, ಪ್ರಬಂಧ ಸಂಕಲನಗಳನ್ನು ಹೊರತಂದಿದ್ದಾರೆ. ಮಲಯಾಳ ಭಾಷೆಯಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದಿಸಿದ್ದರು.

ಸಾಂಪ್ರದಾಯಿಕ ಮುಸ್ಲಿಂ ಕುಟುಂಬದಲ್ಲಿ ಜನಿಸಿದ್ದ ಅವರು 10ನೇ ತರಗತಿ ವರೆಗೆ ಶಿಕ್ಷಣ ಪಡೆದಿದ್ದರು. ವಕೀಲರಾಗಿದ್ದ ಅವರ ತಂದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿದ್ದರು. ಕಾಸರಗೋಡು ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿವರೆಗೆ ಶಿಕ್ಷಣ ಪಡೆದ ಮೊದಲ ಮುಸ್ಲಿಂ ಬಾಲಕಿ ಅವರು.

ಸದಾ ಧಾರ್ಮಿಕ ಮೂಲಭೂತವಾದದ ವಿರುದ್ಧ ಧ್ವನಿ ಎತ್ತುತ್ತಿದ್ದ ಸಾರಾ, ಸ್ತ್ರೀ ಸಬಲೀಕರಣ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು. ಹೆಣ್ಣುಮಕ್ಕಳು ವಿದ್ಯಾಭ್ಯಾಸ ಪಡೆದು ಸಬಲರಾಗಬೇಕು ಎಂಬ ಆಶಯ ಹೊಂದಿದ್ದ ಅವರು, ತಮ್ಮ ಕೃತಿಗಳಲ್ಲೂ ಇದನ್ನು ಬಲವಾಗಿ ಪ್ರತಿಪಾದಿಸಿದ್ದರು.

ಪಂಚಮಸಾಲಿ 2ಡಿ ಮೀಸಲಾತಿ ನಿರ್ಣಯ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸುವರ್ಣ ವಿಧಾನಸೌಧದಲ್ಲಿ ಡಿ.29ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪಂಚಮಸಾಲಿ ಸಮುದಾಯಕ್ಕೆ ಸರ್ಕಾರ ಘೋಷಿಸಿದ್ದ 2ಡಿ ಮೀಸಲಾತಿಗೆ ಇಂದಿಗೂ ಅಧಿಸೂಚನೆ ಹೊರಡಿಸದ್ದರಿಂದ ಆ ನಿರ್ಣಯ ತಿರಸ್ಕರಿಸಿದ್ದೇವೆ’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಂಗಳವಾರ ತಿಳಿಸಿದ್ದಾರೆ.

ಅಲ್ಲದೇ, ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ ‘2ಎ’ಗೆ ಸಮನಾದ ಮೀಸಲಾತಿ ಕಲ್ಪಿಸಲು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಎರಡು ದಿನಗಳ ಗಡುವನ್ನೂ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಾಲ್ಮೀಕಿ ಸಮುದಾಯದ ಬೇಡಿಕೆ ಈಡೇರಿಸಲು ವಾರದಲ್ಲೇ ಅಧಿಸೂಚನೆ ಹೊರಡಿಸಿದ ಸರ್ಕಾರ, ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕೊಡಲು ವಿಳಂಬ ನೀತಿ ಅನುಸರಿಸುತ್ತಿದೆ’ ಎಂದು ದೂರಿದರು.

‘ನಮ್ಮ ಬೇಡಿಕೆ ಕುರಿತು ಜ.12ರೊಳಗೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕು. ತಪ್ಪಿದಲ್ಲಿ 13ರಂದು ಶಿಗ್ಗಾವಿಯಲ್ಲಿರುವ ಬೊಮ್ಮಾಯಿ ನಿವಾಸದ ಎದುರು ಸತ್ಯಾಗ್ರಹ ನಡೆಸಿ, ಅಲ್ಲಿಯೇ ಸಂಕ್ರಾಂತಿ ಆಚರಿಸುತ್ತೇವೆ. ನ್ಯಾಯ ಸಿಕ್ಕರಷ್ಟೇ ಹಬ್ಬ ಆಚರಿಸುತ್ತೇವೆ’ ಎಂದರು.

‘ಕಾನೂನು ಚೌಕಟ್ಟಿನಲ್ಲಿ ಮೀಸಲಾತಿ’

ಹುಬ್ಬಳ್ಳಿ: ‘ಸರ್ಕಾರ ಕಾನೂನು ಚೌಕಟ್ಟಿನಲ್ಲೇ ಮೀಸಲಾತಿ ನೀಡಲಿದೆ. ಪ್ರವರ್ಗ–2 ಬೇಡಿಕೆ ವಿಷಯದಲ್ಲಿ ಮೊದಲ ಹಂತದ ನಿರ್ಣಯ ಕೈಗೊಳ್ಳಲಾಗಿದೆ. ಎರಡನೇ ಹಂತದ ನಿರ್ಣಯ ಬಾಕಿ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಪಂಚಮಸಾಲಿ ಸಮಾಜಕ್ಕೆ 2ಡಿ ಮೀಸಲಾತಿ ಬದಲು, 2ಎ ಮೀಸಲಾತಿಯೇ ಬೇಕು’ ಎಂಬ ಜಯ ಮೃತ್ಯುಂಜಯ ಸ್ವಾಮೀಜಿ ಅವರ ಆಗ್ರಹ ಕುರಿತು, ನಗರದಲ್ಲಿ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

ಸ್ಯಾಂಟ್ರೊ ರವಿ ಶೀಘ್ರ ಬಂಧನ ಭರವಸೆ; ಸಮಗ್ರ ದಾಖಲೆಗಳ ಸಲ್ಲಿಕೆ

ಎಡಿಜಿಪಿಯಿಂದ ವಿಚಾರಣೆ

ಪ್ರಜಾವಾಣಿ ವಾರ್ತೆ

> ಸ್ಯಾಂಟ್ರೊ ರವಿಯ ಒಡನಾಟದಿಂದ ಕಳಂಕಿತರಾದ ಪೊಲೀಸ್ ಅಧಿಕಾರಿಗಳನ್ನೂ ತನಿಖೆಗೆ ಒಳಪಡಿಸಬೇಕು
> **ಸ್ಟ್ಯಾನ್ಲಿ, ಎಂ.ಎಲ್.ಪರಶುರಾಮ್,** ‘ಒಡನಾಡಿ’ ನಿರ್ದೇಶಕರು

> ವಕೀಲರ ಸಂಪರ್ಕಕ್ಕೆ ಸಿಗುವ ಆರೋಪಿಯು ಪೊಲೀಸರ ಕೈಗೆ ಸಿಗುತ್ತಿಲ್ಲ. ಎಲ್ಲಿಯೇ ಇದ್ದರೂ ಆತನನ್ನು ಬಂಧಿಸಿ ಜೈಲಿಗಟ್ಟಬೇಕು
> **ಸಂತ್ರಸ್ತೆ**

> ಸ್ಯಾಂಟ್ರೊ ರವಿ ವಿಧಾನಸೌಧ ಹಾಗೂ ಕುಮಾರಕೃಪಾಕ್ಕೆ ಅನೇಕ ವರ್ಷಗಳಿಂದ ಬಂದು ಹೋಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆಯೂ ಸಚಿವರ ಸಂಪರ್ಕ ಅವರಿಗೆ ಇತ್ತು. ಎಲ್ಲ ರೀತಿಯಿಂದಲೂ ತನಿಖೆ ನಡೆಯುತ್ತಿದೆ. ತಪ್ಪಿತಸ್ಥರನ್ನು ಸರ್ಕಾರ ರಕ್ಷಿಸುವುದಿಲ್ಲ
> **ಬಿ.ಸಿ.ನಾಗೇಶ್,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಮೈಸೂರು: ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಪ್ರಕರಣದ ಹೆಚ್ಚಿನ ವಿಚಾರಣೆ ಸಂಬಂಧ, ಕಾನೂನು ಮತ್ತು ಸುವ್ಯವಸ್ಥೆಯ ಹೆಚ್ಚುವರಿ ಮಹಾನಿರ್ದೇಶಕ ಅಲೋಕ್ ಕುಮಾರ್ ಅವರು ಮಂಗಳವಾರ ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಒಡನಾಡಿ ಸಂಸ್ಥೆಯ ಕಾರ್ಯದರ್ಶಿಗಳಾದ ಸ್ಟ್ಯಾನ್ಲಿ ಮತ್ತು ಎಂ.ಎಲ್. ಪರಶುರಾಮ್, ಸಂತ್ರಸ್ತ ಮಹಿಳೆ ಹಾಗೂ ಕುಟುಂಬದ ಸದಸ್ಯರಿಂದ ದಾಖಲೆಗಳ ಸಮೇತ ಮಾಹಿತಿ ಪಡೆದುಕೊಂಡರು.

ಎರಡೂವರೆ ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿದ ಅವರಿಗೆ, ಸ್ಯಾಂಟ್ರೊ ರವಿ ವಿರುದ್ಧ 1986ರಿಂದ 2023ರ ಜ.2ರವರೆಗೆ ದಾಖಲಾದ ಪ್ರಕರಣಗಳ ಮಾಹಿತಿ, ಹಣಕಾಸು ಸಂಸ್ಥೆಗಳ ಮಾಹಿತಿ, ಆಸ್ತಿ ದಾಖಲೆ, ಪ್ರಭಾವಿಗಳೊಂದಿಗೆ ಆತನ ಭಾವಚಿತ್ರಗಳು, ಪೊಲೀಸರ ವರ್ಗಾವಣೆಯಲ್ಲಿ ಆತನ ಪಾತ್ರದ ಕುರಿತಂತೆ 140 ಪುಟಗಳ ದಾಖಲೆಗಳನ್ನು ಸ್ಟ್ಯಾನ್ಲಿ, ಪರಶುರಾಮ್ ಸಲ್ಲಿಸಿದರು.

‘ರವಿ ವಿರುದ್ಧ ದಾಖಲಾಗಿರುವ ಪ್ರಕರಣ, ಹಣಕಾಸು ವ್ಯವಹಾರ, ಅತ್ಯಾಚಾರ ಪ್ರಕರಣಗಳ ಕುರಿತು ಸಮಗ್ರವಾಗಿ ತನಿಖೆ ನಡೆಸಬೇಕು’ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ಅಲೋಕ್ ಕುಮಾರ್ ಸಭೆಯಲ್ಲಿಯೇ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಡಿಸಿಪಿಗಳಾದ ಗೀತಾ, ಮುತ್ತುರಾಜ್, ವಿಜಯನಗರ ಎಸಿಪಿ ಶಿವಶಂಕರ್, ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ ಇದ್ದರು.

ಮೈಸೂರು ಪೊಲೀಸ್ ಆಯುಕ್ತರ ಕಚೇರಿಗೆ ಮಂಗಳವಾರ ತೆರಳಿದ ಸಂತ್ರಸ್ತೆಯರು ಹೇಳಿಕೆ ದಾಖಲಿಸಿದರು – ಪ್ರಜಾವಾಣಿ ಚಿತ್ರ

‘ಏಕೆ ಬಂಧಿಸಿಲ್ಲ’

ಮೈಸೂರು: ‘ಆರೋಪಿಯನ್ನು ಇದುವರೆಗೂ ಏಕೆ ಬಂಧಿಸಿಲ್ಲ? ನನಗೆ ದೊಡ್ಡಮಟ್ಟದ ಅನ್ಯಾಯವಾಗಿದೆ’ ಎಂದು ಸಂತ್ರಸ್ತೆ ಎಡಿಜಿಪಿ ಮುಂದೆ ಅಳಲು ತೋಡಿಕೊಂಡರು.

ಸಂಚು ರೂಪಿಸಿ, ಸುಳ್ಳುಪಾತ್ರ ಹಾಗೂ ಸಾಕ್ಷ್ಯಗಳನ್ನು ಸೃಷ್ಟಿಸಿ ಸಂತ್ರಸ್ತೆ, ಆಕೆಯ ಸಹೋದರಿಯನ್ನು ಬಂಧಿಸಿದ್ದಕ್ಕೆ ಪ್ರತಿಯಾಗಿ ಆರೋಪಿಯು ಪೊಲೀಸ್ ಅಧಿಕಾರಿಗಳಿಗೆ ‘ಗೂಗಲ್ ಪೇ’ ಮೂಲಕ ಹಣ ಪಾವತಿಸಿದರೆನ್ನಲಾದ ದಾಖಲೆಗಳನ್ನು ಸಲ್ಲಿಸಿದರು.

ಆಸ್ತಿ ಮುಟ್ಟುಗೋಲು: ಬೊಮ್ಮಾಯಿ

ಹುಬ್ಬಳ್ಳಿ: ‘ಸ್ಯಾಂಟ್ರೊ ರವಿ ಅವ್ಯವಹಾರಗಳಿಗೆ 20 ವರ್ಷಗಳ ಇತಿಹಾಸವಿದ್ದು, ಆತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಕ್ರಮಕೈಗೊಳ್ಳುತ್ತಿದೆ. ಯಾವ ಸರ್ಕಾರದಲ್ಲಿ ಏನೇನು ಅವ್ಯವಹಾರ ಮಾಡಿದ್ದ, ಯಾರೊಂದಿಗೆ ಸಂಬಂಧ ಹೊಂದಿದ್ದ ಸೇರಿದಂತೆ, ಆತನ ಕುರಿತು ಸಮಗ್ರ ತನಿಖೆಗೆ ಆದೇಶಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಆದರ್ಶ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರವಿ ವಿಷಯಕ್ಕೆ ಸಂಬಂಧಿಸಿದಂತೆ ಕೆಲವರು ಸರ್ಕಾರದ ವಿರುದ್ಧ ಟೀಕಿಸುತ್ತಿದ್ದಾರೆ. ಆದರೆ, ಆತ ಟೀಕಿಸುವವರ ಕಾಲದಲ್ಲೇ ಅವ್ಯವಹಾರ ಮಾಡಿದ್ದ. ಜೈಲು ಸೇರಿ, ಬಿಡುಗಡೆ ಕೂಡ ಆಗಿದ್ದ. ಇದಕ್ಕೆ ಅವರೇ ಉತ್ತರ ಕೊಡಬೇಕಿದೆ’ ಎಂದು ತಿರುಗೇಟು ನೀಡಿದರು.

‘ಲುಕ್ ಔಟ್ ನೋಟಿಸ್ ಜಾರಿ’

ಮೈಸೂರು: ‘ಸ್ಯಾಂಟ್ರೊ ರವಿ ವಿರುದ್ಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿ 8 ದಿನಗಳಾಗಿವೆ. ಆರೋಪಿ ಪತ್ತೆಗಾಗಿ 4 ತಂಡಗಳನ್ನು ರಚಿಸಲಾಗಿದೆ. ಆತ ಹೊರದೇಶಕ್ಕೆ ಪರಾರಿಯಾಗುವ ಸಾಧ್ಯತೆಯಿರುವುದರಿಂದ ಲುಕ್ ಔಟ್ ನೋಟಿಸ್ ಕೂಡ ನೀಡಲಾಗಿದೆ’ ಎಂದು ಎಡಿಜಿಪಿ ಅಲೋಕ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

‘ಮಂಡ್ಯ, ರಾಮನಗರ, ಮೈಸೂರು, ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಯಲ್ಲಿ ಶೋಧ ನಡೆದಿದೆ. ಬೆಂಗಳೂರಿನ ರಾಜರಾಜೇಶ್ವರಿ ನಗರದ ಮನೆಯಲ್ಲೂ ಶೋಧ ನಡೆಸಲಾಗಿದೆ. ಬ್ಯಾಂಕ್ ಖಾತೆ, ಲಾಕರ್ ಮಾಹಿತಿ ಸಂಗ್ರಹಿಸಿದ್ದು, ಖಾತೆ ಮುಟ್ಟುಗೋಲಿಗೆ ಕ್ರಮ ವಹಿಸಲಾಗುವುದು. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲೂ ವಿಚಾರಣೆ ನಡೆಸಲಾಗುವುದು’ ಎಂದರು.

ಇನ್‌ಸ್ಪೆಕ್ಟರ್ ಅಮಾನತು

ಪ್ರವೀಣ್

ಬೆಂಗಳೂರು: ಅತ್ಯಾಚಾರ, ಹಲ್ಲೆ ಹಾಗೂ ಕೊಲೆ ಬೆದರಿಕೆ ಪ್ರಕರಣದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಸಂಚಿನಲ್ಲಿ ಭಾಗಿಯಾಗಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಪೊಲೀಸ್ ಇನ್‌ಸ್ಪೆಕ್ಟರ್ ಪ್ರವೀಣ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಸ್ಯಾಂಟ್ರೊ ರವಿ ವಿರುದ್ಧ ಮೈಸೂರು ವಿಜಯನಗರ ಠಾಣೆಯಲ್ಲಿ ಜ. 2ರಂದು ಪ್ರಕರಣ ದಾಖಲಾಗಿತ್ತು.

‘ಸ್ಯಾಂಟ್ರೊ ರವಿ ಸಂಚಿನಲ್ಲಿ ಭಾಗಿಯಾಗಿದ್ದ ಪ್ರವೀಣ್, ನನ್ನ ಹಾಗೂ ನನ್ನ ಸಹೋದರಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಬಂಧಿಸಿದ್ದರು’ ಎಂದು ಸಂತ್ರಸ್ತೆ ದೂರಿದ್ದರು. ಈ ಬಗ್ಗೆ ತನಿಖೆ ನಡೆಸಿದ್ದ ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ, ವರದಿ ಸಿದ್ಧಪಡಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಸಲ್ಲಿಸಿದ್ದರು.

ಅದೇ ವರದಿ ಆಧರಿಸಿ ಗುಪ್ತದಳದ ಇನ್‌ಸ್ಪೆಕ್ಟರ್ ಆಗಿರುವ ಪ್ರವೀಣ್ ಅವರನ್ನು ಅಮಾನತು ಮಾಡಿ ಪ್ರವೀಣ್ ಸೂದ್ ಮಂಗಳವಾರ ಆದೇಶ ಹೊರಡಿಸಿದ್ದಾರೆ.

‘2022ರ ನ. 23ರಂದು ಮೆಜೆಸ್ಟಿಕ್ ಖೋಡೆ ವೃತ್ತ ಸಮೀಪದ ರೈಲ್ವೆ ಕೆಳಸೇತುವೆ ಬಳಿ ಪ್ರಕಾಶ್, ಸ್ಯಾಂಟ್ರೊ ರವಿ ಸಹಚರ ಶೇಖ್ ಸಲ್ಲಾವುದ್ದೀನ್ ನಡುವೆ ಗಲಾಟೆ ಆಗಿತ್ತು. ರವಿ ಅಣತಿಯಂತೆ ಕೆಲಸ ಮಾಡಿದ್ದ ಪ್ರವೀಣ್, ಸುಳ್ಳು ಪುರಾವೆಗಳನ್ನು ಸೃಷ್ಟಿಸಿ ಅಮಾಯಕ ಸಂತ್ರಸ್ತೆ ಹಾಗೂ ಅವರ ಸಹೋದರಿ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಿದ್ದರು’ ಎಂಬ ಮಾಹಿತಿ ತನಿಖಾ ವರದಿಯಲ್ಲಿತ್ತು.

ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಮಂಗಳವಾರ ಪ್ರತಿಭಟನಾ ರ‍್ಯಾಲಿ ನಡೆಯಿತು – ಪ್ರಜಾವಾಣಿ ಚಿತ್ರ

ಒಳಮೀಸಲಾತಿ ವಿರೋಧಿಸಿ ಹೋರಾಟ

ಒಂದನೇ ಪುಟದಿಂದ...

‘ಈ ಪ್ರತಿಭಟನೆಯು ಆರಂಭಿಕ ಪ್ರತಿರೋಧವಷ್ಟೆ. ಸರ್ಕಾರಕ್ಕೆ ಕಾಲಾವಕಾಶ ನೀಡುತ್ತೇವೆ. ಅಷ್ಟರಲ್ಲಿ ಒಳ್ಳೆಯ ತೀರ್ಮಾನಕ್ಕೆ ಬರಬೇಕು. ಸದಾಶಿವ ಆಯೋಗದ ವರದಿಯನ್ನು ಏಕಪಕ್ಷೀಯವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬಾರದು’ ಎಂದು ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಎಚ್ಚರಿಸಿದರು.

‘ಭೋವಿ, ಲಂಬಾಣಿ, ಕೊರಚ, ಕೊರಮ ಜನಾಂಗವು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರಲು ಅರ್ಹವಾಗಿದೆ. ಕಳ್ಳಮಾರ್ಗದಿಂದ ಈ ಪಟ್ಟಿಯಲ್ಲಿ ಸ್ಥಾನ ಪಡೆಯಲಾಗಿದೆ ಎಂದು ಆರೋಪಿಸಲಾಗುತ್ತಿದೆ. ಅಂಬೇಡ್ಕರ್ ನೀಡಿದ್ದ ಮೀಸಲಾತಿ ಸೌಲಭ್ಯದಂತೆ ರಾಜಮಾರ್ಗದಲ್ಲೇ ಮೀಸಲಾತಿ ಪಡೆದಿದ್ದೇವೆ. ಸಾಮಾಜಿಕ ನ್ಯಾಯದಂತೆ ಮೀಸಲಾತಿ ದೊರೆಯದಿದ್ದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಈ ಸಮುದಾಯದ ಜನರೇ ಬುದ್ಧಿ ಕಲಿಸಲಿದ್ದಾರೆ’ ಎಂದು ಎಚ್ಚರಿಸಿದರು.

‘ನೆರಳು ನೀಡಬೇಕಾದ ಸರ್ಕಾರವೇ ಜನರನ್ನು ಬಿಸಿಲಿನಲ್ಲಿ ಕೂರಿಸುತ್ತಿದೆ. ಜೇನುಗೂಡಿಗೆ ಕೈಹಾಕಲು ಸರ್ಕಾರ ಮುಂದಾಗಿದೆ. ಯಾರಿಗೂ ಅನ್ಯಾಯವಾಗದಂತೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಸಾಹಿತಿ ಬಿ.ಟಿ. ಲಲಿತಾನಾಯಕ್ ಹೇಳಿದರು.

> ಇದು ಪಕ್ಷಾತೀತ ಹೋರಾಟ. 12 ವರ್ಷಗಳಿಂದ ಈ ಸಮುದಾಯಗಳು ಅತಂತ್ರದಲ್ಲಿವೆ. ಮುಂದಿನ ದಿನಗಳಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ
> **ಉಮೇಶ್ ಜಾಧವ್,** ಬಿಜೆಪಿ ಸಂಸದ

> ಜನಸಂಖ್ಯೆ ಆಧರಿಸಿಯೇ ಒಳಮೀಸಲಾತಿ ಆಗಬೇಕೇ ಹೊರತು ಸದಾಶಿವ ಆಯೋಗದ ವರದಿ ಪ್ರಕಾರ ಅಲ್ಲ. ‘ಸುಪ್ರೀಂ’ಗೆ ಅರ್ಜಿ ಸಲ್ಲಿಸಲಿ. ಕೋರ್ಟ್ ಆದೇಶ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳಲಿ
> **ಅರವಿಂದ ಲಿಂಬಾವಳಿ,** ಬಿಜೆಪಿ ಶಾಸಕ

ಅಖಿಲ ಕರ್ನಾಟಕ ಕುಳುವ ಮಹಾಸಂಘ ರಾಜ್ಯ ಅಧ್ಯಕ್ಷ ಶಿವಾನಂದ ಎಂ. ಭಜಂತ್ರಿ, ‘ಆಯೋಗದ ವರದಿಯಿಂದ ಶೋಷಿತ ಸಮುದಾಯಗಳು ಸಂಕಷ್ಟಕ್ಕೆ ಸಿಲುಕಲಿವೆ. ಸರ್ಕಾರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಬಲಾಢ್ಯರ ಓಲೈಸಲು ಮುಂದಾಗಿದೆ. ನಿಜವಾಗಿ ದೊರೆಯಬೇಕಾದ ಸಮುದಾಯಗಳಿಗೆ ಮೀಸಲಾತಿ ವಂಚಿಸುತ್ತಿದೆ’ ಎಂದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಶಾಸಕ ಭೀಮಾ ನಾಯಕ್, ಮುಖಂಡ ರೇವೂ ನಾಯಕ್ ಬೆಳಮಗಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್, ನಾಗಭೂಷಣ್ ಸ್ವಾಮೀಜಿ ಇದ್ದರು.

ಭಾವನಾತ್ಮಕ ವಿಷಯಗಳಿಂದ ಹೊಟ್ಟೆ ತುಂಬದು: ಮಧು ಬಂಗಾರಪ್ಪ

ಕಲಬುರಗಿ: ‘ರಸ್ತೆ, ಚರಂಡಿಯಂತಹ ಸಣ್ಣ ವಿಷಯಗಳ ಬದಲು ಲವ್ ಜಿಹಾದ್ ಬಗ್ಗೆ ಮಾತನಾಡಲು ಮತ್ತು ಮತ ಕೇಳಲು ಹೇಳುತ್ತಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಒಬ್ಬ ನಾಲಾಯಕ್’ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ ಟೀಕಿಸಿದರು.

‘2018 ರಲ್ಲಿದ್ದ ಬಿಜೆಪಿಯ ಹಿಂದುತ್ವ ಮತ್ತು ಭಾವನಾತ್ಮಕ ವಿಷಯಗಳ ಅಜೆಂಡಾ ಮುಂದಿನ ಚುನಾವಣೆಯಲ್ಲಿ ಫಲಿಸದು. ಭಾವನಾತ್ಮಕ ವಿಷಯಗಳಿಂದ ಜನರ ಹೊಟ್ಟೆ ತುಂಬುವುದಿಲ್ಲ’ ಎಂದು ಮಂಗಳವಾರ ಹೇಳಿದರು.

‘ಬಿಜೆಪಿಯು ಬ್ರಿಟಿಷ್ ಜನತಾ ಪಾರ್ಟಿ ಇದ್ದಂತೆ. ಬಿಜೆಪಿಯವರು ಸಹ ಬ್ರಿಟಿಷರಂತೆ ವ್ಯವಹಾರ ಮಾಡಿ ಅಧಿಕಾರಕ್ಕೆ ಬಂದಿದ್ದಾರೆ. ಇಂಥ ಪಕ್ಷದಿಂದ ಎಂತಹ ಆಡಳಿತ ನಿರೀಕ್ಷಿಸಲು ಸಾಧ್ಯ’ ಎಂದು ಪ್ರಶ್ನಿಸಿದರು.

ಉರುಳಿದ ಪಿಲ್ಲರ್ ಚೌಕಟ್ಟು ತಾಯಿ– ಮಗು ಸಾವು

ಒಂದನೇ ಪುಟದಿಂದ...

‘ಕೆಲಸದ ಗುತ್ತಿಗೆಯನ್ನು ನಾಗಾರ್ಜುನ್ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಪಡೆದಿತ್ತು. ಗಾಯಾಳು ಲೋಹಿತ್ ನೀಡಿರುವ ದೂರು ಆಧರಿಸಿ ಸೈಟ್ ಎಂಜಿನಿಯರ್, ಉಸ್ತುವಾರಿ ಅಧಿಕಾರಿಗಳು, ಕಾಮಗಾರಿ ಗುತ್ತಿಗೆದಾರ, ಬಿಎಂಆರ್‌ಸಿಎಲ್ ಅಧಿಕಾರಿಗಳು ಹಾಗೂ ಇತರರ ವಿರುದ್ಧ ಗೋವಿಂದಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಐದು ವರ್ಷಗಳ ಹಿಂದೆ ಮದುವೆ: ‘ಗದಗಿನ ನಿವೃತ್ತ ಸರ್ಕಾರಿ ಅಧಿಕಾರಿ ವಿಜಯ್‌ಕುಮಾರ್ ಅವರ ಪುತ್ರ ಲೋಹಿತ್, ಸಿವಿಲ್ ಎಂಜಿನಿಯರ್. ದಾವಣಗೆರೆ ಬಸವೇಶ್ವರ ನಗರದ ತೇಜಸ್ವಿನಿ ಅವರನ್ನು ಐದು ವರ್ಷಗಳ ಹಿಂದೆ ಲೋಹಿತ್ ಮದುವೆಯಾಗಿದ್ದರು. ದಂಪತಿಗೆ ವಿಸ್ಮಿತಾ–ವಿಹಾನ್ ಅವಳಿ ಮಕ್ಕಳು. ದಂಪತಿ ಹಲವು ವರ್ಷಗಳಿಂದ ಹೊರಮಾವು ಬಳಿಯ ಕಲ್ಕೆರೆಯಲ್ಲಿ ವಾಸವಿದ್ದರು’ ಎಂದು ತಿಳಿಸಿದರು.

‘ವಿಜಯನಗರದ ಕಂಪನಿಯಲ್ಲಿ ಲೋಹಿತ್ ಕೆಲಸ ಮಾಡುತ್ತಿದ್ದರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ತೇಜಸ್ವಿನಿ ಮಾನ್ಯತಾ ಟೆಕ್‌ಪಾರ್ಕ್‌ನಲ್ಲಿರುವ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಹೀಗಾಗಿ, ತಮ್ಮಿಬ್ಬರು ಮಕ್ಕಳನ್ನು ಮಾನ್ಯತಾ ಟೆಕ್‌ಪಾರ್ಕ್ ಬಳಿ ಇರುವ ಬೇಬಿ ಸಿಟ್ಟಿಂಗ್‌ಗೆ ಎರಡು ವಾರಗಳ ಹಿಂದೆಯಷ್ಟೇ ಸೇರಿಸಿದ್ದರು’ ಎಂದು ಹೇಳಿದರು.

ಪಿಲ್ಲರ್ ಚೌಕಟ್ಟನ್ನು ಬಿಎಂಆರ್‌ಸಿಎಲ್ ಸಿಬ್ಬಂದಿ ತೆರವು ಮಾಡಿದರು – ಪ್ರಜಾವಾಣಿ ಚಿತ್ರ

ನರ್ಸರಿಗೆ ಬಿಡಲು ಹೊರಟಿದ್ದರು: ‘ಲೋಹಿತ್ ಅವರು ನಿತ್ಯವೂ ಮಕ್ಕಳನ್ನು ನರ್ಸರಿಗೆ ಹಾಗೂ ಪತ್ನಿಯನ್ನು ಮಾನ್ಯತಾ ಟೆಕ್‌ಪಾರ್ಕ್‌ಗೆ ಬಿಟ್ಟು ವಿಜಯನಗರದಲ್ಲಿರುವ ತಮ್ಮ ಕಚೇರಿಗೆ ಹೋಗುತ್ತಿದ್ದರು. ಮಂಗಳವಾರವೂ ಪತ್ನಿ ಹಾಗೂ ಮಕ್ಕಳನ್ನು ಬೈಕ್‌ನಲ್ಲಿ ಹತ್ತಿಸಿಕೊಂಡು ಮನೆಯಿಂದ ಹೊರಟಿದ್ದರು’ ಎಂದು ಪೊಲೀಸರು ಹೇಳಿದರು.

‘ರಸ್ತೆಯಲ್ಲಿ ಹೋಗುತ್ತಿದ್ದಾಗ ಕಬ್ಬಿಣದ ರಾಡ್‌ಗಳಿಂದ ಸಿದ್ಧಪಡಿಸಿದ್ದ ಚೌಕಟ್ಟು ಬೈಕ್ ಮೇಲೆ ಬಿದ್ದಿದ್ದವು. ಬೈಕ್ ಭಾಗಶಃ ಜಖಂಗೊಂಡಿತ್ತು. ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ತೇಜಸ್ವಿನಿ, ವಿಹಾನ್ ತಲೆ ಹಾಗೂ ಎದೆಗೆ ತೀವ್ರ ಪೆಟ್ಟು ಬಿದ್ದಿತ್ತು. ಲೋಹಿತ್ ಅವರ ಬೆನ್ನು ಹಾಗೂ ಸೊಂಟಕ್ಕೆ ರಾಡ್‌ಗಳು ಬಡಿದಿದ್ದವು. ರಕ್ಷಣೆಗೆ ಹೋಗಿದ್ದ ಸ್ಥಳೀಯರು, ನಾಲ್ವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ತಾಯಿ–ಮಗು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು’ ಎಂದರು.

ಉರುಳುವ ಮಾಹಿತಿಯಿದ್ದರೂ ಅಧಿಕಾರಿ ನಿರ್ಲಕ್ಷ್ಯ: ಸ್ಥಳೀಯರು

‘ಮೆಟ್ರೊ ಪಿಲ್ಲರ್ ಅಳವಡಿಕೆಗಾಗಿ ಸ್ಥಳದಲ್ಲಿ ಗುಂಡಿ ಅಗೆದು, ಕಬ್ಬಿಣದ ಚೌಕಟ್ಟು ನಿಲ್ಲಿಸಲಾಗಿತ್ತು. ನೆಲದಡಿ ಮಾತ್ರ ಸಿಮೆಂಟ್ ಕಾಂಕ್ರೀಟ್ ಹಾಕಲಾಗಿತ್ತು. ಮೇಲ್ಭಾಗದಲ್ಲಿ ಸಿಮೆಂಟ್ ಕಾಂಕ್ರೀಟ್ ಹಾಕುವ ಕೆಲಸ ಬಾಕಿ ಇತ್ತು. ವಾರದ ಹಿಂದೆಯಷ್ಟೇ ಕಬ್ಬಿಣದ ಚೌಕಟ್ಟು ಸಡಿಲಗೊಂಡಿತ್ತು’ ಎಂದು ಸ್ಥಳೀಯರು ದೂರಿದರು.

‘ಸಡಿಲಗೊಂಡಿದ್ದ ಕಬ್ಬಿಣದ ಚೌಕಟ್ಟು ನೋಡಿದ್ದ ಕಾರ್ಮಿಕರು, ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಜೊತೆಗೆ, ಸಾರ್ವಜನಿಕರ ಜೊತೆಯಲ್ಲೂ ಮಾಹಿತಿ ಹಂಚಿಕೊಂಡಿದ್ದರು. ಕಬ್ಬಿಣದ ಚೌಕಟ್ಟು ಮುಖ್ಯರಸ್ತೆಯಲ್ಲಿ ಉರುಳಿ ಬಿದ್ದರೆ ಅನಾಹುತ ಸಂಭವಿಸಹುದೆಂದು ವಾರದ ಹಿಂದೆಯೇ ಬಿಎಂಆರ್‌ಸಿಎಲ್ ಅಧಿಕಾರಿಗೆ ವಿಷಯ ತಿಳಿಸಲಾಗಿತ್ತು’ ಎಂದು ಹೇಳಿದರು.

‘ಚೌಕಟ್ಟು ವಾಲುತ್ತಿರುವ ಬಗ್ಗೆ ಅಧಿಕಾರಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಅವರ ನಿರ್ಲಕ್ಷ್ಯದಿಂದಲೇ ತಾಯಿ–ಮಗು ಮೃತಪಟ್ಟಿದ್ದಾರೆ’ ಎಂದೂ ಸ್ಥಳೀಯರು ದೂರಿದರು.

‘ಮೆಟ್ರೊ ಕಾಮಗಾರಿ ಅವೈಜ್ಞಾನಿಕ’

‘ಸೈಟ್ ಎಂಜಿನಿಯರ್, ಉಸ್ತುವಾರಿ ಅಧಿಕಾರಿಗಳು, ಕಾಮಗಾರಿ ಗುತ್ತಿಗೆದಾರ, ಬಿಎಂಆರ್‌ಸಿಎಲ್ ಅಧಿಕಾರಿಗಳು ಹಾಗೂ ಇತರರು ಸೂಕ್ತ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯದಿಂದ ಕಾಮಗಾರಿ ನಡೆಸುತ್ತಿದ್ದರು’ ಎಂದು ಸಿವಿಲ್ ಎಂಜಿನಿಯರ್ ಆಗಿರುವ ಲೋಹಿತ್ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ಮೆಟ್ರೊ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ಕೈಗೊಳ್ಳಲಾಗಿತ್ತು. ಇದರಿಂದಾಗಿ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್‌ನ ಕಬ್ಬಣದ ಚೌಕಟ್ಟು ಉರುಳಿಬಿದ್ದಿದ್ದು, ನನ್ನ ಪತ್ನಿ ಹಾಗೂ ಮಗು ಮೃತಪಟ್ಟಿದ್ದಾರೆ. ಘಟನೆಗೆ ಕಾರಣವಾಗಿರುವ ಇವರೆಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ಅವರು ಆಗ್ರಹಿಸಿದ್ದಾರೆ.

ಉದ್ಯೋಗ ವಾಣಿ

WANTED
Teachers for ICSE curriculum from KG to X
Male and Female Wardens, Accounts, Receptionists for
KUNIGAL VALLEY INTERNATIONAL RESIDENTIAL SCHOOL
B.M. Road, Kunigal - 572130
kunigalvalleyschool@gmail.com
CONTACT: 9448315592, 9108601699

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ ಬೆಂಗಳೂರು ಶೋರೂಮ್‌ಗಳಿಗೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರಿ ಸಂಸ್ಥೆಯಾದ ಜಿ ಆರ್ ಟಿ ಜ್ಯುವೆಲ್ಲರ್ಸ್‌ನ ಬೆಂಗಳೂರಿನ ಶೋರೂಮ್‌ಗಳಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ. ಫ್ರೆಶರ್ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು

ಹುದ್ದೆ	ಕನಿಷ್ಠ ಅರ್ಹತೆ	ವಯೋಮಿತಿ
ಸೇಲ್ಸ್‌ಮನ್	10ನೇ ತರಗತಿ, ಪಿಯುಸಿ ಅಥವಾ ಪದವಿ	18 ರಿಂದ 35
ಸೇಲ್ಸ್‌ಗರ್ಲ್ಸ್	10ನೇ ತರಗತಿ, ಪಿಯುಸಿ ಅಥವಾ ಪದವಿ	18 ರಿಂದ 35
ಸೇಲ್ಸ್ ಅಸಿಸ್ಟೆಂಟ್ಸ್	10ನೇ ತರಗತಿ, ಅಥವಾ ಪಿಯುಸಿ (ಉತ್ತೀರ್ಣ ಅಥವಾ ಫೇಲ್)	18 ರಿಂದ 22

ದಿನಾಂಕ ಮತ್ತು ಸಮಯ:
12 ಜನವರಿ - 2023 (ಗುರುವಾರ) (10.00 ರಿಂದ ಸಂಜೆ 5.00 ರವರೆಗೆ)
ಸಂದರ್ಶನ ಸ್ಥಳ:
GRT Jewellers India (P) Limited-Malleswaram
ಹಳೆಯ ನಂ. 1794, ಹೊಸ ನಂ. 530, 2ನೇ ಮುಖ್ಯ ಸಂಪಿಗೆ ರಸ್ತೆ, ಸಂಪಿಗೆ ಥಿಯೇಟರ್ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು - 560 003
ದಿನಾಂಕ ಮತ್ತು ಸಮಯ:
13 ಜನವರಿ - 2023 (ಶುಕ್ರವಾರ) (10.00 ರಿಂದ ಸಂಜೆ 5.00 ರವರೆಗೆ)
ಸಂದರ್ಶನ ಸ್ಥಳ:
ಹೋಟೆಲ್ ಚಾಂಪಿಯನ್ ಗೇಟ್ ವೇ ಎಂ.ಎಂ.ಪಾರ್ಟಿ ಮತ್ತು ಬ್ಯಾಂಕ್ವೆಟ್ ಹಾಲ್
ನಂ.430/363, MVM ಪ್ಲಾಜಾ, 1ನೇ ಮಹಡಿ, ಸಂತೆ ಸರ್ಕಲ್, B.B. ರಸ್ತೆ, ಯಲಹಂಕ ಓಲ್ಡ್ ಟೌನ್, ಬೆಂಗಳೂರು-64.
ಸಂಪರ್ಕ ಸಂಖ್ಯೆಗಳು: 9686905786, 9686799888
ಇಮೇಲ್: recruitment@grtjewels.com

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560011
ದೂರವಾಣಿ ಸಂಖ್ಯೆ: 26632783, 26633566
ಮರು ನೇಮಕಾತಿ ಪ್ರಕಟಣೆ
ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಜಯನಗರ, ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ 22 ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ : 11.01.2023 ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ವಿವರ	ವೇತನ ಶ್ರೇಣಿ ರೂ.	ಹುದ್ದೆಗಳ ಸಂಖ್ಯೆ
1.	ಮುಖ್ಯ ಕಾರ್ಯನಿರ್ವಹಣಾಧಿಕಾರಿ	40050 – 56550	1
2.	ಹಿರಿಯ ವ್ಯವಸ್ಥಾಪಕರು	36300 – 53850	1
3.	ಕಂಪ್ಯೂಟರ್ ಮ್ಯಾನೇಜರ್ (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮುಖ್ಯಸ್ಥ)	28100 – 50100	1
4.	ವ್ಯವಸ್ಥಾಪಕರು	28100 – 50100	3
5.	ಅಕೌಂಟೆಂಟ್	24000 – 45300	2
6.	ಅಸಿಸ್ಟೆಂಟ್ ಅಕೌಂಟೆಂಟ್	21600 – 40050	2
7.	ದ್ವಿತೀಯ ದರ್ಜೆ ಸಹಾಯಕರು	17650 – 32000	2
8.	ಅಟೆಂಡರ್	12500 – 24000	10
		ಒಟ್ಟು	22

ಅರ್ಜಿ ನಮೂನೆ/ಮೀಸಲಾತಿ/ವಿದ್ಯಾರ್ಹತೆ/ವಯೋಮಿತಿ/ಅರ್ಜಿ ಶುಲ್ಕ/ ಆಯ್ಕೆ ವಿಧಾನ/ ಲಗತ್ತಿಸಬೇಕಾದ ಪ್ರಮಾಣ ಪತ್ರಗಳು, ನಿಬಂಧನೆಗಳು ಮತ್ತು ಸೂಚನೆಗಳು ಇತ್ಯಾದಿ ವಿವರಗಳು ಬ್ಯಾಂಕಿನ website : www.bcbbank.co ರಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 27–01–2023 ಸಂಜೆ 5.00 ಘಂಟೆಯೊಳಗೆ ಖುದ್ದಾಗಿ/ ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.
ವಿ.ಸೂ : ದಿನಾಂಕ 25.05.2022ರ ನೇಮಕಾತಿ ಪ್ರಕಟಣೆಯನುಸಾರ ಮೇಲ್ಕಂಡ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
ಸ್ಥಳ: ಬೆಂಗಳೂರು
ದಿನಾಂಕ: 10.01.2023
ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA
We are a leading newspaper and magazine publishing group in Karnataka. We invite applications for the following position in our organization.
PRODUCTION -TRAINEE
Job Profile:
- Fresher with good technical knowledge and understanding on Machines, Engineering Drawings related to factory environment.
- Post training period, the candidates should be willing to work across any of our plant/factory locations in Karnataka.
- Should have good communication skills both in English and Kannada.
- Prefer Immediate joiners.

Qualification: Diploma in Mechanical/Electrical
Location: Belur Plant (Dharwad) and Bangalore – Kumbalgodu
Experience: Fresher's 2021 / 2022 pass outs
Interested candidates please send your updated Resume/CV with Photograph within 7 days to following Email ID.
Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: careers@deccanherald.co.in

ನಳಿನ್‌ಕುಮಾರ್ ಕಟೀಲ್ ಹೇಳಿಕೆಗೆ ಆಪ್ತರ ಅಸಮಾಧಾನ

‘ಬಿಎಸ್‌ವೈ ಕಡೆಗಣಿಸಿದರೆ ನಷ್ಟ’

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ಬೆಂಗಳೂರು: ‘ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಸದ್ಯದಲ್ಲೇ ಮೂಲೆಗುಂಪು ಮಾಡಲಾಗುತ್ತಿದೆ. ಇದಕ್ಕೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಬೆಲೆ ತೆರಬೇಕಾಗಿ ಬರುತ್ತದೆ’ ಎಂಬ ಚರ್ಚೆ ಯಡಿಯೂರಪ್ಪ ಅವರ ಆಪ್ತ ವಲಯದಲ್ಲಿ ನಡೆದಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಇತ್ತೀಚೆಗೆ ಸಭೆಯೊಂದರಲ್ಲಿ ಮಾತ ನಾಡುವಾಗ, ‘ಪಕ್ಷ ಕಾರ್ಯಕರ್ತರಿಂದಲೇ ಬೆಳೆದಿದೆ, ಹೀಗಾಗಿ ಯಡಿಯೂರಪ್ಪ ಅಥವಾ ನಳಿನ್‌ಕುಮಾರ್ ಅವರು ಅನಿವಾರ್ಯವಲ್ಲ’ ಎಂದು ಹೇಳಿಕೆ ನೀಡಿರುವುದು ಯಡಿಯೂರಪ್ಪ ಅವರಲ್ಲಿ ಅಸಮಾಧಾನ ಮೂಡಿಸಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

‘ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಕಾರಣರಾದ ಮತ್ತು ಈಗಲೂ ಗೆಲುವಿನತ್ತ ಮುನ್ನಡೆಸುವ ಸಾಮರ್ಥ್ಯವನ್ನು ಉಳಿಸಿ ಕೊಂಡಿರುವ ಹಿರಿಯ ನಾಯಕರ ಬಗ್ಗೆ ಈ ರೀತಿ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ? ಈ ಬಾರಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಆದರೆ, ಚುನಾವಣೆಯಲ್ಲಿ ಪಕ್ಷದ ಪರವಾಗಿ ಸಕ್ರಿಯವಾಗಿ ಓಡಾಡಿ ಪ್ರಚಾರ ನಡೆಸಿ, ಅಧಿಕಾರಕ್ಕೆ ತರುವುದಾಗಿ ಹೇಳಿದ್ದಾರೆ. ಆದರೆ, ಸ್ವತಂತ್ರವಾಗಿ ಪಕ್ಷದ ಪರ ಪ್ರಚಾರ ನಡೆಸಲು ಅವಕಾಶ ನೀಡದೇ ಅವರನ್ನು ಕಟ್ಟಿ ಹಾಕಲಾಗಿದೆ’ ಎಂಬ ಬೇಸರ ಅವರ ಆಪ್ತರದು.

ಇತ್ತೀಚೆಗೆ ಪಕ್ಷದ ಹಲವು ಕಾರ್ಯಕ್ರಮಗಳಿಗೆ ಕರೆಯದೇ ‘ಇದ್ದಾಗ ಬೇಸರಗೊಂಡಿದ್ದ ಯಡಿಯೂರಪ್ಪ ಅವರ ಮನವೊಲಿಸಿ ಪುನಃ ಕಾರ್ಯಕ್ರಮಗಳಿಗೆ ಆಹ್ವಾನಿಸಲಾಯಿತು. ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆಂಗಳೂರು ಮತ್ತು ಮಂಡ್ಯಕ್ಕೆ ಬಂದಾಗ ಯಡಿಯೂರಪ್ಪ ಅವರು ಹಾಜರಾಗಲಿಲ್ಲ. ಬದಲಿಗೆ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಒಂದು ಕಾರ್ಯಕ್ರಮಕ್ಕೆ ಕಳುಹಿಸಿದ್ದರು. ಆದರೆ, ಯಡಿಯೂರಪ್ಪ ಪೂರ್ವ ನಿರ್ಧರಿತ ಪ್ರವಾಸಕ್ಕೆ ತೆರಳಿದ್ದ ಕಾರಣ ಶಾ ಕಾರ್ಯಕ್ರಮದಲ್ಲಿ ಹಾಜರಾಗಿರಲಿಲ್ಲ ಎಂದು ಆಪ್ತ ಮೂಲಗಳು ಹೇಳಿವೆ.

‘ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ದೊಡ್ಡ ಪ್ರಮಾಣದಲ್ಲಿ ಪ್ರವಾಸದಲ್ಲಿ ತೊಡಗಿದ್ದಾರೆ. ಇಬ್ಬರಿಗೂ ಸದ್ಯ ಹೊಡೆಯುವ ಸಾಮರ್ಥ್ಯ ಇರುವುದು ಯಡಿಯೂರಪ್ಪ ಅವರಿಗೆ. ಸದ್ಯಕ್ಕೆ ಸರ್ಕಾರ ಮತ್ತು ಪಕ್ಷದಲ್ಲಿ ಯಾವುದೇ ಜವಾಬ್ದಾರಿಗಳು ಇಲ್ಲದ ಕಾರಣ ಅವರನ್ನು ಬಳಸಿಕೊಳ್ಳಬಹುದಿತ್ತು. ಮುಖ್ಯಮಂತ್ರಿ ಹುದ್ದೆ ತೊರೆದ ದಿನದಿಂದಲೂ ರಾಜ್ಯ ವ್ಯಾಪಿ ಪ್ರವಾಸ ಮಾಡುವುದಾಗಿ ಹೇಳಿದರೂ ಯಾರೂ ಕಿವಿಗೂ ಹಾಕಿಕೊಳ್ಳಲಿಲ್ಲ ಮತ್ತು ಪ್ರವಾಸಕ್ಕೆ ಅವಕಾಶ ನೀಡಲಿಲ್ಲ’ ಎಂದು ಮೂಲಗಳು ತಿಳಿಸಿವೆ.

ಕರೆದರಷ್ಟೇ ಹೋಗಲು ತೀರ್ಮಾನ?

ಇನ್ನು ಮುಂದೆ ಪಕ್ಷ ಆಹ್ವಾನಿಸಿದರೆ ಮಾತ್ರ ಯಡಿಯೂರಪ್ಪ ಅವರು ಕಾರ್ಯಕ್ರಮ ಅಥವಾ ಪ್ರವಾಸಕ್ಕೆ ಹೋಗುತ್ತಾರೆ. ಕರೆಯದಿದ್ದರೆ ಅವರಾಗಿಯೇ ಮೇಲೆ ಬಿದ್ದು ಯಾವುದೇ ಕಾರ್ಯಕ್ರಮಗಳಿಗೂ ಹೋಗದಿರಲು ತೀರ್ಮಾನಿಸಿದ್ದಾರೆ.

‘2013 ರ ಚುನಾವಣೆಯಲ್ಲಿ ಯಡಿಯೂರಪ್ಪ, ಶ್ರೀರಾಮುಲು ಅವರು ಪಕ್ಷದಿಂದ ಹೊರ ಹೋದ ಕಾರಣ ರಾಜ್ಯದಲ್ಲಿ ಪಕ್ಷ ಹೀನಾಯವಾಗಿ ಸೋಲು ಅನುಭವಿಸಿತು. ಅದರಿಂದ ಪಾಠ ಕಲಿಯದೇ ಹೋದರೆ ಕಷ್ಟ. ಈಗಲೂ ಅಷ್ಟೇ ಯಡಿಯೂರಪ್ಪ ಅವರನ್ನು, ಜಗದೀಶ ಶೆಟ್ಟರ್, ಕೆ.ಎಸ್. ಈಶ್ವರಪ್ಪ, ಶ್ರೀರಾಮುಲು ಅವರಂತಹ ಸಾಮರ್ಥ್ಯವುಳ್ಳವರನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಪಕ್ಷವನ್ನು ಅಧಿಕಾರಕ್ಕೆ ತರಲು ಬಳಸಿಕೊಳ್ಳಬೇಕು. ಸಂಪೂರ್ಣ ನಿರ್ಲಕ್ಷಿಸುವುದು ಸರಿಯಲ್ಲ’ ಎಂಬುದು ಯಡಿಯೂರಪ್ಪ ಆಪ್ತ ವಲಯದ ಪ್ರತಿಪಾದನೆ.

ಕರ್ನಾಟಕ ಪ್ರಜಾ ಮತ 2023 ಜನತಂತ್ರದ ಹಬ್ಬ

‘ಸಾಂಬಶಿವ ಪ್ರಹಸನ’; ಬೃಹತ್ ಪ್ರತಿಭಟನೆ

ರಂಗಾಯಣಕ್ಕೆ ಮುತ್ತಿಗೆ ಯತ್ನಕ್ಕೆ ತಡೆ; ಅಡ್ಡಂಡ ಕಾರ್ಯಪ್ಪ ವಜಾಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಾಂಬಶಿವ ಪ್ರಹಸನ’ ನಾಟಕದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಲಾಗಿದೆ ಎಂದು ದೂರಿ ಸ್ವಾಭಿಮಾನಿ ಹೋರಾಟ ವೇದಿಕೆ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಪ್ಪ ಅವರ ಅಣಕು ಶವಪ್ರದರ್ಶನಕ್ಕೆ ಪೊಲೀಸರು ತಡೆಯೊಡ್ಡಿದರು. ಕ್ರಾಫರ್ಡ್ ಹಾಲ್ ಮುಂಭಾಗದಿಂದ ತೆರಳಿ ರಂಗಾಯಣಕ್ಕೆ ಮುತ್ತಿಗೆ ಹಾಕುವ ಯತ್ನವನ್ನೂ ತಡೆದರು.

ದಿಗಿ ಬಂದೋಬಸ್ತ್‌ನಲ್ಲಿದ್ದ ಐನೂರು ಪೊಲೀಸರು ಬ್ಯಾರಿಕೇಡ್‌ಗಳನ್ನು ಅಡ್ಡವಿಟ್ಟು, ಮೈಸೂರು–ಹುಣಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಜಿಲ್ಲಾಧಿಕಾರಿ ಕಚೇರಿಯ ಕಮಾನು ಗೇಟ್ ಬಳಿಯೇ ಸಾವಿರಾರು ಪ್ರತಿಭಟನಾಕಾರರನ್ನು ತಡೆದು ನಿಲ್ಲಿಸಿದರು.

‘ನಿಷೇಧಾಜ್ಞೆ ಇರುವುದರಿಂದ ಕಾನೂನು ಗೌರವಿಸಿ, ರಂಗಾಯಣಕ್ಕೆ ಮುತ್ತಿಗೆ ಹಾಕುವುದನ್ನು ಕೈಬಿಡಲಾಗಿದೆ. ಪದೇ ಪದೇ ಈ ರೀತಿ ಅವಹೇಳನ ಮುಂದುವರಿದರೆ ರಾಜ್ಯಮಟ್ಟದಲ್ಲಿ ಉಗ್ರ ಹೋರಾಟ ಮಾಡಲಾಗುವುದು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ಟಿ. ತಿಮ್ಮಯ್ಯ, ಕಾಂಗ್ರೆಸ್ ಮುಖಂಡ ಎಂ.ಕೆ. ಸೋಮಶೇಖರ್, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸುಬ್ರಹ್ಮಣ್ಯ, ರಂಗಕರ್ಮಿ ಕೃಷ್ಣಪ್ರಸಾದ್, ಪತ್ರಕರ್ತ ಟಿ.ಗುರುರಾಜ್ ಮಾತನಾಡಿದರು. ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಕೆ.ಎಸ್.ಶಿವರಾಮು ಪಾಲ್ಗೊಂಡಿದ್ದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಕಲಾಮಂದಿರದ 200 ಮೀಟರ್ ಸುತ್ತ ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೂ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಕ್ರಾಫರ್ಡ್ ಹಾಲು ಮುಂಭಾಗದಿಂದ ಮಹಾರಾಜ ಕಾಲೇಜಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಡೆಗೆ ವಾಹನ ಸಂಚಾರವನ್ನು ಬಂದ್ ಮಾಡಲಾಗಿತ್ತು.

ಸ್ವಾಭಿಮಾನಿ ಹೋರಾಟ ವೇದಿಕೆಯು ಮೈಸೂರಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರನ್ನು ಜಿಲ್ಲಾಧಿಕಾರಿ ಕಚೇರಿ ಕಮಾನ್ ಗೇಟ್ ಬಳಿಯೇ ಪೊಲೀಸರು ತಡೆದು ನಿಲ್ಲಿಸಿದರು –ಪ್ರಜಾವಾಣಿ ಚಿತ್ರ

ಇಂದಿನಿಂದ ಕಾಂಗ್ರೆಸ್ ‘ಪ್ರಜಾಧ್ವನಿ’ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ‘ಪಾಪದ ಪುರಾಣ’ ಹೆಸರಿನಲ್ಲಿ ಧ್ವನಿ ಎತ್ತಿ, ಚುನಾವಣೆ ಗೆದ್ದು ಅಧಿಕಾರದ ಗದ್ದುಗೆ ಏರುವ ತಯಾರಿಗಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ‘ಪ್ರಜಾಧ್ವನಿ’ ಯಾತ್ರೆಗೆ ಕೈಜೋಡಿಸಿದ್ದಾರೆ.

21 ಜಿಲ್ಲೆಗಳಲ್ಲಿ ಸಾಗಲಿರುವ ಈ ಯಾತ್ರೆಗೆ ಬೆಳಗಾವಿಯ ಗಾಂಧಿ ಬಾವಿಯಲ್ಲಿ ಇಬ್ಬರೂ ಜಂಟಿಯಾಗಿ ಬುಧವಾರ (ಜ.11) ಮುನ್ನುಡಿ ಬರೆಯಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಕಾಂಗ್ರೆಸ್ ಪಕ್ಷದ ವಿಜಯ ಪರ್ವ ಆರಂಭವಾಗಿದೆ. ಪ್ರಜಾಧ್ವನಿ ಪ್ರಜೆಗಳ ಧ್ವನಿ. ಮೂರೂವರೆ ವರ್ಷದ ಬಿಜೆಪಿ ಸರ್ಕಾರದ ವೈಫಲ್ಯ, ಜನರ ಬದುಕಿಗಾಗಿ ನಾವು (ಕಾಂಗ್ರೆಸ್) ಏನು ಮಾಡಲು ಸಿದ್ಧವಿದ್ದೇವೆ ಎಂದು ತಿಳಿಸಲು ಈ ಯಾತ್ರೆ’ ಎಂದರು.

‘ರಾಜ್ಯದಲ್ಲಿ 83,190 ಯುವಕರು ಉದ್ಯೋಗ ಕಳೆದುಕೊಂಡಿದ್ದಾರೆ. 1,258 ಕಂಪನಿಗಳು ಬಾಗಿಲು ಹಾಕುವ ಪರಿಸ್ಥಿತಿ ಬಂದಿದೆ. ಬಂಡವಾಳ ಹೂಡಿಕೆದಾರರು ನೆರೆ ರಾಜ್ಯಕ್ಕೆ ವಲಸೆ ಹೋಗುತ್ತಿದ್ದಾರೆ. ಇದು ರಾಜ್ಯಕ್ಕೆ ಅಪಮಾನಕರ ಸಂಗತಿ. ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಹಗರಣ ನಡೆದಿದೆ. ಐಪಿಎಸ್, ಐಎಎಸ್ ಅಧಿಕಾರಿಗಳು ಜೈಲು ಸೇರುವ ಇತಿಹಾಸವನ್ನು ಬಿಜೆಪಿ ಸೃಷ್ಟಿಸಿದೆ. ಭ್ರಷ್ಟಾಚಾರದ ಕಳಂಕದಿಂದ ರಾಜ್ಯವನ್ನು ದೂರ ಮಾಡಬೇಕಿದೆ’ ಎಂದರು.

‘ಕಳೆದ ಎರಡು ತಿಂಗಳಿಂದ ಪ್ರತಿನಿತ್ಯ ನಿಮ್ಮ ಹತ್ತಿರ ಉತ್ತರ ಇದೆಯಾ ಎಂದು ಕೇಳುತ್ತಿದ್ದೇವೆ. ಬಿಜೆಪಿಯವರಿಗೆ ಉತ್ತರ ನೀಡಲಾಗುತ್ತಿಲ್ಲ. ಕೈ ಜೋಡಿಸಿ ಕರುನಾಡಿಗಾಗಿ ಎಂಬ ಘೋಷಣೆಯೊಂದಿಗೆ ವೆಬ್‌ಸೈಟ್ (prajadhwani.com) ರೂಪಿಸಿದ್ದು, ಮೊಬೈಲ್ ಸಂಖ್ಯೆ 9537 224 224ಕ್ಕೂ ಕರೆ ಮಾಡಿ ಜನರು ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದು’ ಎಂದರು.

ಸಿದ್ದರಾಮಯ್ಯ ಮಾತನಾಡಿ, ‘ಮೊದಲ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಈ ಯಾತ್ರೆ ಆರಂಭಿಸುತ್ತಿದ್ದು, ನಂತರ ಶಿವಕುಮಾರ್ ಮತ್ತು ನನ್ನ ನೇತೃತ್ವದಲ್ಲಿ ಪಕ್ಷದ ಹಿರಿಯ ನಾಯಕರು ಎರಡು ಗುಂಪುಗಳಾಗಿ ಪ್ರವಾಸ ಮಾಡುತ್ತೇವೆ. ಮೊದಲು ನಮ್ಮ ತಂಡ ಉತ್ತರ ಕರ್ನಾಟಕ ಭಾಗದಲ್ಲಿ, ಶಿವಕುಮಾರ್ ಅವರ ತಂಡ ದಕ್ಷಿಣ ಕರ್ನಾಟಕದಲ್ಲಿ ಪ್ರವಾಸ ಮಾಡಿದರೆ, ನಂತರ ಅವರು ಉತ್ತರ ಕರ್ನಾಟಕ, ನಾನು ದಕ್ಷಿಣ ಕರ್ನಾಟಕ ಭಾಗದಲ್ಲಿ ಪ್ರವಾಸ ಮಾಡುತ್ತೇವೆ’ ಎಂದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭ್ರಷ್ಟ ಮಾತ್ರವಲ್ಲ, ಅತ್ಯಂತ ದುರ್ಬಲ ಮುಖ್ಯಮಂತ್ರಿ. ಈ ಸರ್ಕಾರ ಆಲಿಬಾಬಾ ಮತ್ತು 40 ಕಳ್ಳರಂತೆ’ ಎಂದು ಟೀಕಿಸಿದರು. ಅದಕ್ಕೂ ಮುನ್ನ ‘ಪ್ರಜಾಧ್ವನಿ’ ಯಾತ್ರೆಯ ವಿಶೇಷ ಬಸ್‌ಗೆ ಇಬ್ಬರೂ ಪೂಜೆ ಸಲ್ಲಿಸಿದರು.

ನ್ಯಾಯಮೂರ್ತಿ ಪದೋನ್ನತಿಗೆ ಶಿಫಾರಸು

ಬೆಂಗಳೂರು: ಸಿಟಿ ಸಿವಿಲ್ ಕೋರ್ಟ್ ಪ್ರಧಾನ ನ್ಯಾಯಾಧೀಶರಾದ ರಾಮಚಂದ್ರ ಡಿ ಹುದ್ದಾರ ಹಾಗೂ ಹಿರಿಯ ಸೆಷನ್ಸ್ ನ್ಯಾಯಾಧೀಶ ಟಿ.ವೆಂಕಟೇಶ ನಾಯಕ್ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿ ಮಾಡುವ ಪ್ರಸ್ತಾವಕ್ಕೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಒಪ್ಪಿಗೆ ಸೂಚಿಸಿದೆ.

ಮಂಗಳವಾರ ನಡೆದ ಸುಪ್ರೀಂ ಕೋರ್ಟ್ ಕೊಲಿಜಿಯಿಂ ಈ ಕುರಿತಂತೆ ನಿರ್ಣಯ ಕೈಗೊಂಡಿದೆ. ಇದೇ ವೇಳೆ ಈ ಹಿಂದೆ ಶಿಫಾರಸು ಮಾಡಲಾಗಿದ್ದ ಹೈಕೋರ್ಟ್ ವಕೀಲ ನಾಗೇಂದ್ರ ರಾಮಚಂದ್ರ ನಾಯಕ್ ಅವರ ಹೆಸರನ್ನು ಕೊಲಿಜಿಯಿಂ ಮರು ಶಿಫಾರಸು ಮಾಡಿದೆ.

ಸಿ.ಎ. ಅಂತಿಮ ಪರೀಕ್ಷೆ: ರಮ್ಯಶ್ರೀಗೆ ದ್ವಿತೀಯ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: 2022ರ ನವೆಂಬರ್‌ನಲ್ಲಿ ನಡೆದಿದ್ದ ಲೆಕ್ಕ ಪರಿಶೋಧಕರ (ಸಿ.ಎ) ಮುಖ್ಯ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಸುರತ್ಕಲ್ ಹೊಸಬೆಟ್ಟುವಿನ ರಮ್ಯಶ್ರೀ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ.

ಈ ಪರೀಕ್ಷೆಯಲ್ಲಿ ನವದೆಹಲಿಯ ಹರ್ಷ ಚೌಧರಿ (618 ಅಂಕ) ಮೊದಲ ರ್‍ಯಾಂಕ್ ಪಡೆದಿದ್ದು, ರಮ್ಯಶ್ರೀ (617 ಅಂಕ) ಮತ್ತು ಇಂದೋರ್‌ನ ಶಿಖಾ ಜೈನ್ ದ್ವಿತೀಯ ರ್‍ಯಾಂಕ್ ಹಂಚಿಕೊಂಡಿದ್ದಾರೆ.

ಈ ಸಾಧನೆ ಕುರಿತು ಸಂತಸ ಹಂಚಿಕೊಂಡ ರಮ್ಯಶ್ರೀ, ‘ಮೊದಲ ಪ್ರಯತ್ನದಲ್ಲೇ ಸಿ.ಎ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದು ಹರ್ಷ ತಂದಿದೆ. ನಿತ್ಯ 12 ಗಂಟೆಯಿಂದ 14 ಗಂಟೆ ಪರೀಕ್ಷಾ ತಯಾರಿ ನಡೆಸುತ್ತಿದ್ದೆ. ಅಗತ್ಯ ವಿಷಯಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಶಾಯರಿ ರಚನೆ ನನ್ನ ಹವ್ಯಾಸ. ಬಿಡುವಿರುವಾಗ ಪುಸ್ತಕ ಓದಲು, ಸಂಗೀತ ಆಲಿಸಲು ಇಷ್ಟಪಡುತ್ತೇನೆ’ ಎಂದರು.

ರಮ್ಯಶ್ರೀ ಅವರು ಸಿ.ಎ ಅಖಿಲ ಭಾರತ ಆಂತರಿಕ ಪರೀಕ್ಷೆಯಲ್ಲಿ 16ನೇ ರ್‍ಯಾಂಕ್ ಪಡೆದಿದ್ದರು.

ಕಳೆದ ವರ್ಷ ಸಿ.ಎ. ಪರೀಕ್ಷೆಯಲ್ಲಿ ಮಂಗಳೂರಿನ ರುತ್ ಕ್ಲೇರ್ ಡಿಸಿಲ್ವ ಮೊದಲ ರ್‍ಯಾಂಕ್ ಪಡೆದಿದ್ದರು.

ಆರ್‌.ಡಿ.ಪಾಟೀಲ ಜಾಮೀನು ರದ್ದು ಕೋರಿ ಸಿಐಡಿ ಅರ್ಜಿ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ ಅವರಿಗೆ ನೀಡಿದ ಷರತ್ತುಬದ್ಧ ಜಾಮೀನು ರದ್ದುಪಡಿಸುವಂತೆ ಕೋರಿ ಸಿಐಡಿ ಅಧಿಕಾರಿಗಳು ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಸಿಐಡಿ ಪೊಲೀಸರು ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರ ಮೂಲಕ ಜಾಮೀನು ರದ್ದತಿಗೆ ಅರ್ಜಿ ಸಲ್ಲಿಸಿದ್ದು, ಹೈಕೋರ್ಟ್‌ನ ಕಲಬುರಗಿ ಪೀಠವು ವಿಚಾರಣೆಗೆ ಅರ್ಜಿಯನ್ನು ಅಂಗೀಕರಿಸಿದೆ.

‘ಹೈಕೋರ್ಟ್‌ನ ಕಲಬುರಗಿ ಪೀಠದಿಂದ ಜಾಮೀನು ಪಡೆದು, ಬಿಡುಗಡೆಯಾದ ದಿನದಿಂದ ಆರ್‌.ಡಿ. ಪಾಟೀಲ ನಾಪತ್ತೆ ಆಗಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ಹಲವು ನೋಟಿಸ್ ಜಾರಿಗೊಳಿಸಿದರೂ ಪ್ರತಿಕ್ರಿಯಿಸಿಲ್ಲ. ಜಾಮೀನು ಷರತ್ತುಗಳನ್ನು ಉಲ್ಲಂಘಿಸಿದ್ದಾರೆ’ ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

ಹೊಸಪೇಟೆ: ಕಲುಷಿತ ನೀರು ಸೇವನೆ; ಮಹಿಳೆ ಸಾವು, 54 ಜನ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ನಗರದ ರಾಣಿಪೇಟೆಯಲ್ಲಿ ಕಲುಷಿತ ನೀರು ಸೇವಿಸಿ ಮಹಿಳೆಯೊಬ್ಬರು ಮಂಗಳವಾರ ಸಂಜೆ ಮೃತಪಟ್ಟಿದ್ದು, 54 ಜನ ಅಸ್ವಸ್ಥರಾಗಿದ್ದಾರೆ.

ರಾಣಿಪೇಟೆಯ 12ನೇ ಕ್ರಾಸ್ ನಿವಾಸಿ ಲಕ್ಷ್ಮೀದೇವಿ (50) ಮೃತ ಮಹಿಳೆ. ಅವರ ಮನೆಯ 11 ತಿಂಗಳ ಮಗು, ಇನ್ನೊಬ್ಬರು ಕೂಡ ಅಸ್ವಸ್ಥರಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

‘ಲಕ್ಷ್ಮೀದೇವಿ ಅವರು ಮಂಗಳವಾರ ಎಂಟರಿಂದ ಹತ್ತು ಸಲ ವಾಂತಿ ಭೇದಿ ಮಾಡಿಕೊಂಡಿದ್ದಾರೆ. ಆರೋಗ್ಯ ಕಾರ್ಯಕರ್ತೆಯರು ಆಸ್ಪತ್ರೆಗೆ ದಾಖಲಾಗುವಂತೆ ತಿಳಿಸಿದ್ದರು. ಆದರೆ, ಅವರು ಆರ್‌ಎಂಪಿ ವೈದ್ಯರ ಬಳಿ ಚಿಕಿತ್ಸೆ ಪಡೆದು, ಮನೆಯಲ್ಲೇ ಗ್ಲುಕೋಸ್ ಹಾಕಿಸಿಕೊಂಡಿದ್ದಾರೆ. ಸಂಜೆ ಮೃತಪಟ್ಟಿದ್ದಾರೆ’ ಎಂದು ಪ್ರಭಾರ ಡಿಎಚ್‌ಒ ಡಾ.ಶಂಕರ ನಾಯಕ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪಟ್ಟಣ ಪಂಚಾಯಿತಿ, ಹಾರೋಹಳ್ಳಿ

ನಂ.ಪಪಹಾ/ತಾಂ.ಶಾ/ಟೆಂ/07/2022–23 ದಿನಾಂಕ: 07/01/2023

ಟೆಂಡರ್ ಪ್ರಕಟಣೆ

ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರಂಗನಾಥ ಬಡಾವಣೆ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಘನತ್ಯಾಜ್ಯ ನಿರ್ವಹಣೆಯ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಲು 2022–23ನೇ ಸಾಲಿನ ಸ್ವಂತ ನಿಧಿಯಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ, ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸ ಲಾಗಿದೆ. ಕಾಮಗಾರಿ ವಿವರ ಹಾಗೂ ಟೆಂಡರ್ ಫಾರಂ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿ ವಿವರ ಹಾಗೂ ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
01	ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ರಂಗನಾಥ ಬಡಾವಣೆಯ ನರಸಿಂಹೇಗೌಡರ ಬೀದಿ, ಗುರುಪ್ರಸಾದ್ ಮನೆ ರಸ್ತೆ, ಶಂಕರ್ ಮನೆ, ನಂದಗೋಕುಲ ಮನೆ ರಸ್ತೆ, ಕುಮಾರ್ ಮನೆ ರಸ್ತೆ ನೀರಿನ ಪೈಪ್ ಲೈನ್, ಚರಂಡಿ ಹಾಗೂ ರಸ್ತೆ ನಿರ್ಮಾಣ ಕಾಮಗಾರಿ.DMA/2022-23/RD/WORK-INDENT138597/CALL-2	99.50	1,99,000/–
02	ಹಾರೋಹಳ್ಳಿ ಪಟ್ಟಣ ಪಂಚಾಯಿತಿಯ ಸಮಗ್ರ ಘನತ್ಯಾಜ್ಯ ನಿರ್ವಹಣೆಯ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸುವ ಸಂಬಂಧ ಕನ್ಸಲ್‌ಟೆನ್ಸಿ ಫರ್ಮ್ಸ್ ಸೇವಾ ಆಹ್ವಾನಿಸುವ ಬಗ್ಗೆ (TPH/TP/swm/dpr/cr/01/2022-23	3.00	7,500/–

ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ.
01. ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ: 10–01–2023 ರಿಂದ
02. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 23–01–2023 ಸಂಜೆ 5–30
03. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 25–01–2023 ಬೆಳಿಗ್ಗೆ 11–00

ಹೆಚ್ಚಿನ ವಿವರಗಳನ್ನು ಕಚೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದ್ದು ಹಾಗೂ ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯತಕ್ಕದ್ದು ಯಾವುದೇ ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ ಹಾರೋಹಳ್ಳಿ, ಕನಕಪುರ ತಾಲ್ಲೂಕು.
ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಹಾರೋಹಳ್ಳಿ, ಕನಕಪುರ ತಾಲ್ಲೂಕು.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ.

1	ಈ ಸಂಸ್ಥೆಯ ಅಧೀನದ ಆಸ್ಪತ್ರೆಯಾದ ವಿಕ್ಟೋರಿಯಾ ಆಸ್ಪತ್ರೆಯ IHBT ಮತ್ತು ಕಾರ್ಡಿಯಾಲಜಿ ವಿಭಾಗಗಳಲ್ಲಿ State Allied Health Science ಕೋರ್ಸುಗಳನ್ನು ಪ್ರಾರಂಭಿಸಲು ಅಗತ್ಯವಿರುವ ಉಪಕರಣಗಳ ಖರೀದಿಗೆ ಟೆಂಡರ್ ಆಹ್ವಾನಿಸಲಾಗಿದೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (2)/40/2019–20 ದಿನಾಂಕ: 09.01.2023
2	ಈ ಸಂಸ್ಥೆಯ Fetal Medicine ವಿಭಾಗಗಕ್ಕೆ ಅಗತ್ಯವಿರುವ ಉಪಕರಣಗಳು, ಜನರಲ್ ಸರ್ಜರಿ ವಿಭಾಗಕ್ಕೆ Laparoscopic Unit, ಡರ್ಮಟಾಲಜಿ ವಿಭಾಗಕ್ಕೆ Laser ಉಪಕರಣ ಮತ್ತು ಮಿಂಟೋ ಕಣ್ಣಾಸ್ಪತ್ರೆಗೆ Autoclave ಉಪಕರಣದ ಖರೀದಿಗೆ ಟೆಂಡರ್ ಆಹ್ವಾನಿಸಲಾಗಿದೆ.	ಟೆಂಡರ್ ಸಂಖ್ಯೆ: ಬೆಂವೈವಿಸಂಸಂ/ಸರಬ (1)/94/2022–23 ದಿನಾಂಕ: 09.01.2023

1) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ: 11–01–2023. 2) ಪೂರ್ವ ಭಾವಿ ಸಭೆ ದಿನಾಂಕ: 18–01–2023ರಂದು ಅಪರಾಹ್ನ 3.30 ಗಂಟೆಗೆ. 3) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: 25–01–2023ರಂದು ಅಪರಾಹ್ನ 4.30 ಕ್ಕೂ ಮುಂಚೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 27–01–2023ರಂದು ಪೂರ್ವಾಹ್ನ 11.30 ಗಂಟೆಗೆ.

ಟೆಂಡರ್ ವಿವರಗಳು, ಇ.ಎಂ.ಡಿ ವಿವರಗಳು ಹಾಗೂ ಸಂಬಂಧಿತ ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ನೋಡಬಹುದು. ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್: https://www.eproc.karnataka.gov.in ಆಸಕ್ತ ಟೆಂಡರುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳಬೇಕು. ಈ ಬಗ್ಗೆ ವಿವರಗಳನ್ನು ಸದರಿ ವೆಬ್‌ಸೈಟಿನಲ್ಲಿ ವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ಮಹಾವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.**

ಸಹಿ/– ನಿರ್ದೇಶಕರು ಹಾಗೂ ಡೀನ್, ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/4014/ಅಡ್ವರ್ಟೋರ್/2022–23

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002
ದೂರವಾಣಿ: 080-22213530 ಇ-ಮೇಲ್ : kanbhavblr@gmail.com

ಸಂಖ್ಯೆ: ಡಿಕೆಸಿ–17015/86/2022 ದಿನಾಂಕ : 09.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಂಗಳೂರಿನಲ್ಲಿರುವ ಕರ್ನಾಟಕ ಕಲಾಗ್ರಾಮವನ್ನು ಪೂರ್ಣ ಪ್ರಮಾಣದಲ್ಲಿ ಸಾಂಸ್ಕೃತಿಕವಾಗಿ ಸಜ್ಜುಗೊಳಿಸಿ ನಿರಂತರವಾಗಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಕುರಿತು Transaction Advisor ಅನ್ನು ನೇಮಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಫಾರಂ ಮತ್ತು ಇತರೆ ವಿವರಗಳು, ನಿಬಂಧನೆಗಳು ಮತ್ತು ಷರತ್ತುಗಳನ್ನು ವೆಬ್‌ಸೈಟ್ : **www.eproc.karnataka.gov.in**. ಮೂಲಕ ಪಡೆದು ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 13.01.2023, 12.30 ಗಂಟೆಗೆ.** ಪ್ರಶ್ನೆ/ಸ್ಪಷ್ಟೀಕರಣಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 13.01.2023, 17.00 ಗಂಟೆಗೆ.** ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 24.01.2023, 17.00 ಗಂಟೆಗೆ.** ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ **ದಿನಾಂಕ: 25.01.2023, 17.30 ಗಂಟೆಗೆ.** ತಾಂತ್ರಿಕ ಪ್ರಸ್ತಾವನೆಗಳನ್ನು ಮಂಡಿಸುವ ದಿನಾಂಕ: **ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.** ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವುದು: **ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.** ಇ.ಎಂ.ಡಿ ಮೊತ್ತ **ರೂ. 1,00,000/–.**

ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ (ಯಾವುದಾದರು ಇದ್ದಲ್ಲಿ), ತದನಂತರದ ಪ್ರಕಟಣೆ, ಮಾರ್ಪಾಡುಗಳು, ತಿದ್ದುಪಡಿಗಳು ಮತ್ತು ಪ್ರಸ್ತಾವನೆಗಳ ಅಂಗೀಕಾರ/ತಿರಸ್ಕಾರ ಕುರಿತು ಮಾಹಿತಿಯನ್ನು ಕೇವಲ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು, ಯಾವುದೇ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳನ್ನು ಟೆಂಡರ್ ಫಾರಂನೊಂದಿಗೆ ಲಗತ್ತಿಸಲಾದ ಷರತ್ತುಗಳು (TOR) ಅನುಸೂಚಿಯಲ್ಲಿ ಒದಗಿಸಲಾಗಿದೆ.

ಸಹಿ/– ನಿರ್ದೇಶಕರು
DIPR/CP/YC/4023/2022-23

ಪ್ರಧಾನ ಇಂಜಿನಿಯರ್ ರವರ ಕಛೇರಿ
ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ (PRAMC)
4ನೇ ಮಹಡಿ, ಪಿ.ಡಬ್ಲ್ಯೂ.ಡಿ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂ: ಲೋಇ/40/PRAMC/2022–23/1075 ದಿ. 10/01/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯ 02 ಮತ್ತು ತುಮಕೂರು ಜಿಲ್ಲೆಯ 01 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ ನಿಂದ (www.eproc.karnataka.gov.in) ದಿನಾಂಕ:11/01/2023 ಅಪರಾಹ್ನ 04:30 ರಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಯೋ.ರ.ಆ.ನಿ.ಕೇಂದ್ರ, ಲೋಇ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4013/ಆಕಾರ್/22–23

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಶಾಂತಿನಗರ, ಬೆಂಗಳೂರು–27.
ಇ–ಮೇಲ್: cosp@mybmtc.com ವೆಬ್‌ಸೈಟ್: www.bmtc.in
ಸಂ: ಬೆಮಸಾಸಂ/ಉ&ಖ/ಕೇಂ.ಉ/ಎಸ್.ಎಸ್.ಡಿ/578/22–23 ದಿನಾಂಕ: 10.01.2023

ಇ–ಹರಾಜು ಪ್ರಕಟಣೆ

ಬೆಂ.ಮ.ಸಾರಿಗೆ ಸಂಸ್ಥೆಯ ಸ್ಕ್ರ್ಯಾಪ್ ವಸ್ತುಗಳನ್ನು ಹಾಗೂ ಸ್ಕ್ರ್ಯಾಪ್ ವಾಹನಗಳನ್ನು ಮೆ॥ **ಎಂ.ಎಸ್.ಟಿ.ಸಿ (ಭಾರತ ಸರ್ಕಾರದ ಅಧೀನ ಸಂಸ್ಥೆ)** ಇವರು ನಡೆಸುವ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು. (1) **ಸ್ಕ್ರ್ಯಾಪ್ ವಸ್ತುಗಳ ಹಾಗೂ ಸ್ಕ್ರ್ಯಾಪ್ ವಾಹನಗಳ ಇ–ಹರಾಜು ಪ್ರಕ್ರಿಯೆ ಜರಗುವ ದಿನಾಂಕ: 19.01.2023 ಮತ್ತು 20.01.2023.** ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು. **ಕಛೇರಿ ವಿಳಾಸ:** ಮೆ॥ ಎಂ.ಎಸ್.ಟಿ.ಸಿ ಲಿಮಿಟೆಡ್, ನಂ. 19/5, 19/6 ಮೂರನೆ ಮಹಡಿ, ಕರೀಮ್‌ಟವರ್, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ.ಸಂ: 080–22260054/ 22266417/ 22287356, ಫ್ಯಾಕ್ಸ್ 080–22256365. ಬೆಂ.ಮ.ಸಾರಿಗೆ ಸಂಸ್ಥೆ ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ : + 91 7760991153 / 7760991157

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ.
ಸಂಖ್ಯೆ : ಗ್ರಾ.ಕು.ನೀ.ಮತ್ತು ನೈ.ವಿ./ಬಾಗಲಕೋಟ/ಪಿಬಿ–1,2,3 & 4/ ಟೆಂಡರ್/2022–23/2238 ದಿನಾಂಕ : 09–01–2023

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ **ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ** ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

Jamakhandi Taluka 1) Indent No-54283 **(Mouneshwar & Ganesh)** APT-53.82 Lakhs, **2)** Indent No-54282 **(Kadapatti)** APT-64.62 Lakhs, **3)** Indent No-54281 **(Alagur Vasti)** APT-26.42 Lakhs, **4)** Indent No-54280 **(Ashray Colony)** APT-81.90 Lakhs. **Bagalkot Dist** : **1)** Indent No-50663 **(AMC package : Providing Annual Maintenance of old and new instruments in Division Laboratory of Bagalkot Dist and Hungund Sub Division Lab and Jamakhandi Sub Division Lab)** APT-2.39 Lakhs Call-5, **Bagalkot Taluka : 1)** Indent No-49013 **(Rampur O&M)** APT-29.42 Lakhs Call-5, **Badami Taluka : 1)** Indent No-53312 **(Budangad)** APT-75.87 Lakhs Call-2, **Bilagi Taluka : 1)** Indent No-54369 **(Rolli Village of Bilagi taluk are applicants Shri Mahadevappa Sivalingappa Halli uraf Pattanashetti. at Rolli 06 people and others for a total of 16 acres 28 gunte land through pipeline Irrigation Scheme. (Gen))** APT-4.69, **Mudhol Taluka** : **1)** Indent No-54360 **(providing Lift Irrigation to Shri Vittal Budhihala and Other Farms in Mallapur PL Village Mudhol Taluk Bagalkot District)** APT-7.95.

1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಇ–ಪ್ರೊಕ್ಯೂರಮೆಂಟ್ ಪ್ರಕಾರ, 2) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 18–01–2023 ಸಾಯಂಕಾಲ 5.30 ಗಂಟೆಯ ವರೆಗೆ, 3) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡ ಬಹುದಾಗಿದೆ. ವಿಳಾಸ www.eproc.karnataka.gov.in. 4) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 16–01–2023 ಸಾಯಂಕಾಲ 5.30 ಗಂಟೆಯ ವರೆಗೆ Indent No: 53312 & 50663, 49013 ಕಾಮಗಾರಿಗೆ ಮಾತ್ರ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಗ್ರಾ.ಕು.ನೀ.&ನೈ. ವಿಭಾಗ, ಬಾಗಲಕೋಟ.
ಡಿಐಪಿಆರ್/ಬಾಗಲಕೋಟ/763/ಮಣಿಪಾಲ್/2022–23

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುಮ:ಕಿಇಂ–3:ಟೆಂಡರ್–49/2022–23(2ನೇ ಕರೆ) ದಿನಾಂಕ: 05.01.2023

ಟೆಂಡರ್ ಪ್ರಕಟಣೆ ಸಂ.49/2022–23 (2ನೇ ಕರೆ) ದಿನಾಂಕ: 05.01.2023

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 49/2022–23 (2ನೇ ಕರೆ) :ದಿನಾಂಕ 05–01–2023ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು–ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 31 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.75.40ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.4.91 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ. 1,50,900/–, ಇ.ಎಂ.ಡಿ ಕನಿಷ್ಠ ಮೊತ್ತ ರೂ.6,200/–, ಅರ್ಹ ಗುತ್ತಿಗೆದಾರರು : 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ:02 ರಿಂದ 03 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ 20–01–2023 ರ 16–00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 07–01–2023 ರಿಂದ 21–01–2023ರ 16–00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ 21–01–2023 ರ ಸಂಜೆ 16–00 ಗಂಟೆವರೆಗೆ, ರೂ.50.00 ಲಕ್ಷಗಳ ಮೇಲ್ಪಟ್ಟ ಅಂದಾಜು ಮೊತ್ತದ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ:23–01–2023 ರ ಸಂಜೆ 11–00 ಗಂಟೆಗೆ, ರೂ.50.00 ಲಕ್ಷಗಳ ಕಡಿಮೆ ಅಂದಾಜು ಮೊತ್ತದ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ 24–01–2023 ರ ಸಂಜೆ 16–30 ಗಂಟೆಗೆ, ರೂ.50.00 ಲಕ್ಷಗಳ ಮೇಲ್ಪಟ್ಟ ಅಂದಾಜು ಮೊತ್ತದ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ 25–01–2023 ರ ಸಂಜೆ 17–00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/843/KSMCA/2022-23

ಖಜಾನೆ ಇಲಾಖೆ
5ನೇ & 6ನೇ ಮಹಡಿ, ಕೆ.ಪಿ.ಸಿ.ಎಲ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–1.
ದೂರವಾಣಿ ಸಂ: 080–22028210 ಫ್ಯಾಕ್ಸ್: 080–22028209

ಖಜಾನೆ–2 ಯೋಜನೆಗೆ 60,000 ಸಂಖ್ಯೆಗಳ DSC provider ಅನ್ನು ಆಯ್ಕೆ ಮಾಡಲು ಆರ್.ಎಫ್.ಪಿ

ಖಜಾನೆ ಇಲಾಖೆಯು ಖಜಾನೆ–2 ಯೋಜನೆಗೆ DSC provider ಅನ್ನು ಆಯ್ಕೆ ಮಾಡಲು ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಸಬಹುದು.

ದಿನಾಂಕ: 05.01.2023 ವಾ.ಸಾ.ಸಂ.ಇ/ವಾಪ್ರ/4020/ಆಕಾರ್/22–23 ಸಹಿ/– ಖಜಾನೆ ಆಯುಕ್ತರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬಿಎಸ್‌ಟಿಎಪಿಸಿಎಂಎಸ್. ಕಟ್ಟಡ, 1ನೇ ಮಹಡಿ, ಎಸ್ ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–70. ದೂ.: 080–2671 3097. ಇ–ಮೇಲ್: icdsprijectsouth@gmail.com
ಸಂಖ್ಯೆ : ಶಿಅಯೋ/ಬೆಂದತಾ/ತೂ.ದುರಸ್ತಿ/ಸತ್ಯಾಪನೆ/22–23 ದಿನಾಂಕ : 06–01–2023

ಪತ್ರಿಕಾ ಪ್ರಕಟಣೆ

2022–23 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ 499 ಅಂಗನವಾಡಿ ಕೇಂದ್ರಗಳಲ್ಲಿರುವ ಎಲ್ಲಾ ಮಕ್ಕಳ ತೂಕದ ಯಂತ್ರಗಳು, ವಯಸ್ಕರ ತೂಕದ ಯಂತ್ರಗಳು ಹಾಗೂ ಗೋದಾಮಿನಲ್ಲಿರುವ ತೂಕದ ಯಂತ್ರಗಳನ್ನು ನಿಯಮಾನುಸಾರ ದುರಸ್ತಿ ಪಡಿಸಿ ಮತ್ತು ಸತ್ಯಾಪನೆಗೆ ಒಳಪಡಿಸಲು ಅರ್ಹರನ್ನು ಗುರುತಿಸಲು ಇ–ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಟೆಂಡರ್ ಬಿಡ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ದಿನಾಂಕ : 06–02–2023 ರ ಸಂಜೆ 5.00 ಗಂಟೆಯೊಳಗಾಗಿ ಇ–ಟೆಂಡರ್ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬಿಎಸ್‌ಟಿಎಪಿಸಿಎಂಎಸ್. ಕಟ್ಟಡ, 1ನೇ ಮಹಡಿ, ಎಸ್ ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560 070 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು.
ವಾಸಾಇ/ಬೆಂ.ನ./3980/ಮಣಿಪಾಲ್/2022–23

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2022–23/2693 ದಿನಾಂಕ:07.01.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022–23ನೇ ಸಾಲಿನ ವಿಷೇಶ ಅಭಿವೃದ್ಧಿ ಯೋಜನೆ ಅನುದಾನದಡಿಯಲ್ಲಿ ಒಟ್ಟು 84 ಅಂಗನವಾಡಿಗಳ ಟೆಂಡರನ್ನು ಈ ಕೆಳಗಿನಂತೆ ಕರೆಯಲಾಗಿದೆ.
ಸಾಮಾನ್ಯ ಗುತ್ತಿಗೆದಾರರಿಗೆ ಒಟ್ಟು 63 ಕಾಮಗಾರಿಗಳು ಪ್ರತಿಯೊಂದರ ಅಂದಾಜು ಮೊತ್ತ **15.00 ಲಕ್ಷಗಳು**
ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಒಟ್ಟು 15 ಕಾಮಗಾರಿಗಳು ಪ್ರತಿಯೊಂದರ ಅಂದಾಜು ಮೊತ್ತ **15.00 ಲಕ್ಷಗಳು**
ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಒಟ್ಟು 6 ಕಾಮಗಾರಿಗಳು ಪ್ರತಿಯೊಂದರ ಅಂದಾಜು ಮೊತ್ತ **15.00 ಲಕ್ಷಗಳು**
ಸದರಿ ಎಲ್ಲ ಟೆಂಡರಗಳನ್ನು ಇ–ಟೆಂಡರ್‌ನ್ನು ಅಹ್ವಾನಿಸಿದ್ದು. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in_ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/743/ಎಂಸಿಎ/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ&ನೈ/ವಿಕೊ/ಟೆಂಡರ್/2022–23/1627 ದಿನಾಂಕ:07.01.2023

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2021–22 ನೇ ಸಾಲಿನ **SBM (Rural)** ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: 09/01/2023 ರಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ : **ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : **90 ದಿನಗಳು (ಮಳೆಗಾಲ ಸೇರಿದಂತೆ.** ಟೆಂಡರ್ ಆಕ್ಷೇಪಣೆ/ ಸೃಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು **: 13/01/2023 ಸಮಯ 11:00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **17/01/2023 ಸಮಯ 16:00 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **: 18/01/2023 ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ.** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **: 20/01/2023 ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/556/ಎಂಸಿಎ/2022–23

ಜೋಶಿಮಠದ ಪರಿಸ್ಥಿತಿ ಅಧ್ಯಯನಕ್ಕೆ ಮುಂದಾದ ಕೇಂದ್ರ ಭೂವಿಜ್ಞಾನ ಸಚಿವಾಲಯ

ಭೂಕಂಪನ ವೀಕ್ಷಣಾ ವ್ಯವಸ್ಥೆ ಸ್ಥಾಪನೆ

ನವದೆಹಲಿ/ಡೆಹ್ರಾಡೂನ್ (ಪಿಟಿಐ): ಹಿಮಾಲಯ ಶ್ರೇಣಿಯ ಉತ್ತರಾಖಂಡದ ಮುಳುಗುತ್ತಿರುವ ಪಟ್ಟಣ ಜೋಶಿಮಠದಲ್ಲಿ ಸೂಕ್ಷ್ಮ ಭೂಕಂಪ ವೀಕ್ಷಣಾ ವ್ಯವಸ್ಥೆ ಅಳವಡಿಸುವುದಾಗಿ ಕೇಂದ್ರ ಸರ್ಕಾರ ಮಂಗಳವಾರ ಪ್ರಕಟಿಸಿದೆ.

ಭಾರತ- ಬ್ರಿಟನ್ ಜಿಯೋ ಸೈನ್ಸಸ್ ಕಾರ್ಯಾಗಾರದಲ್ಲಿ ಈ ವಿಷಯ ಪ್ರಕಟಿಸಿದ ಕೇಂದ್ರ ಭೂ ವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು, ವೀಕ್ಷಣಾ ವ್ಯವಸ್ಥೆಗಳನ್ನು ಬುಧವಾರದೊಳಗೆ ಅಳವಡಿಸಲಾಗುವುದು ಎಂದರು.

ಕಳೆದ ಎರಡು ವರ್ಷಗಳಲ್ಲಿ 37 ಹೊಸ ಭೂಕಂಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನೈಜ ಸಮಯದ ದತ್ತಾಂಶ ಸಂಗ್ರಹ ಮತ್ತು ನಿರ್ವಹಣೆಗೆ ದೇಶದಾದ್ಯಂತ 100ಕ್ಕೂ ಹೆಚ್ಚು ಭೂಕಂಪ ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಮಾನವ ನಿರ್ಮಿತ ವಿಕೋಪಗಳು ಕ್ಷಿಪ್ರವಾಗಿ ಏರುತ್ತಿವೆ. ಇವುಗಳನ್ನು ತಗ್ಗಿಸಲು ಸರಿಯಾದ ತಂತ್ರಗಳನ್ನು ರೂಪಿಸುವ ಅಗತ್ಯವಿದೆ. ಅಲ್ಲದೇ, ಭೂಮಿಯ ಹೊರ ಪದರ ಮತ್ತು ಒಳಗಿನ ಪದರಗಳ ದುರ್ಬಲತೆಗೆ ಕಾರಣವಾಗುವ ಭೌತಿಕ ಪ್ರಕ್ರಿಯೆಗಳ ಬಗ್ಗೆ ನಿರ್ಣಾಯಕ ಸಂಶೋಧನೆಯ ಅವಶ್ಯಕತೆಯೂ ಎಂದರು.

ಈ ಮಧ್ಯೆ ಜೋಶಿಮಠದ ಸಂತ್ರಸ್ತರ ಪುನರ್ವಸತಿಗಾಗಿ ಗುರುತಿಸಲಾದ ಪ್ರದೇಶಗಳ ಭೌಗೋಳಿಕ ಸಮೀಕ್ಷೆ ನಡೆಸಬೇಕು ಎಂದು ಕೇಂದ್ರ ಉನ್ನತ ಅಧಿಕಾರಿಗಳ ತಂಡ ಹೇಳಿದೆ.

ಜೋಶಿಮಠದ ಪರಿಸ್ಥಿತಿ ಅಂದಾಜಿಸಲು ಆಗಮಿಸಿರುವ ಕೇಂದ್ರ ಗೃಹ ಸಚಿವಾಲಯ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಡೆಹ್ರಾಡೂನ್‌ನಲ್ಲಿ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರನ್ನು ಭೇಟಿಯಾಗಿ, ಭೌಗೋಳಿಕ ಸಮೀಕ್ಷೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸಾಂಸ್ಕೃತಿಕ, ಧಾರ್ಮಿಕ ಮತ್ತು ಭದ್ರತಾ ಕಾರ್ಯತಂತ್ರದ ದೃಷ್ಟಿಕೋನಗಳಿಂದ ಜೋಶಿಮಠ ಪ್ರಮುಖ ಪಟ್ಟಣವಾಗಿದೆ. ಇದರ ಪುನರ್ ನಿರ್ಮಾಣಕ್ಕೆ ಸಮಗ್ರ ಪ್ರಯತ್ನಗಳ ಅಗತ್ಯವನ್ನು ಕೇಂದ್ರ ತಂಡಕ್ಕೆ ಮನವರಿಕೆ ಮಾಡಿಕೊಟ್ಟ ಮುಖ್ಯಮಂತ್ರಿ ಧಾಮಿ, ಪಟ್ಟಣ ಉಳಿಸಲು ಮತ್ತು ಸಂತ್ರಸ್ತರ ಸ್ಥಳಾಂತರಕ್ಕೆ ಯುದ್ಧೋಪಾದಿ ಪ್ರಯತ್ನ ನಡೆಯುತ್ತಿವೆ ಎಂದರು.

ಭೂಕುಸಿತದ ವಲಯದ ನೆಲದಡಿ ನೀರು ಸಂಗ್ರಹವಾಗಿರುವುದೇ ಕುಸಿತಕ್ಕೆ ಕಾರಣವೆಂದು ಪರಿಗಣಿಸಲಾಗಿದೆ. ಆದರೆ, ಈ ನೀರಿನ ಮೂಲ ಈವರೆಗೆ ಪತ್ತೆ ಆಗಿಲ್ಲ. ಇದಕ್ಕೆ ದೇಶದ ವಿಜ್ಞಾನಿಗಳ ನೆರವು ಪಡೆಯುವುದಾಗಿ ರಾಜ್ಯ ವಿಪತ್ತು ನಿರ್ವಹಣೆಯ (ಎಸ್‌ಡಿಎಂ) ಕಾರ್ಯದರ್ಶಿ ರಂಜಿತ್ ಸಿನ್ಹಾ ಹೇಳಿದರು. ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್ ರೂಪಿಸಲು ರಾಜ್ಯ ಸರ್ಕಾರ ಕಾರ್ಯೋನ್ಮುಖವಾಗಿದೆ. ಇದನ್ನು ಶೀಘ್ರವೇ ಕೇಂದ್ರಕ್ಕೆ ಸಲ್ಲಿಸಲಾಗುವುದು ಎಂದರು.

ಎರಡು ಹೋಟೆಲ್ ಕಟ್ಟಡಗಳ ನೆಲಸಮದ ಹೊಣೆಯನ್ನು ರೂರ್ಕೀಯ ಕೇಂದ್ರ ಕಟ್ಟಡ ಸಂಶೋಧನಾ ಸಂಸ್ಥೆಗೆ (ಸಿಬಿಆರ್‌ಐ) ವಹಿಸಲಾಗಿದೆ. ಸಿಬಿಆರ್‌ಐ ತಜ್ಞರು ಕಟ್ಟಡಗಳ ತೆರವಿಗೆ ಅಗತ್ಯವಿರುವ ಸಲಕರಣೆಗಳ ಪಟ್ಟಿ ನೀಡಿದ್ದಾರೆ ಎಂದೂ ಅವರು ಸುದ್ದಿಗಾರರಿಗೆ ತಿಳಿಸಿದರು.

ಜೋಶಿಮಠದ ಪರಿಸ್ಥಿತಿ ಕುರಿತು ಮಂಗಳವಾರ ಪರಿಶೀಲನಾ ಸಭೆ ನಡೆಸಿದ ರಾಷ್ಟ್ರೀಯ ಬಿಕ್ಕಟ್ಟು ನಿರ್ವಹಣಾ ಸಮಿತಿ (ಎನ್‌ಸಿಎಂಸಿ) ಕಟ್ಟಡಗಳು ಮತ್ತು ಮನೆಗಳಲ್ಲಿ ಭಾರಿ ಬಿರುಕು ಕಾಣಿಸಿರುವ ಅಪಾಯದ ಸ್ಥಳದಿಂದ ನಿವಾಸಿಗಳ ಸಂಪೂರ್ಣ ಮತ್ತು ಸುರಕ್ಷಿತ ಸ್ಥಳಾಂತರ ತಕ್ಷಣದ ಆದ್ಯತೆಯಾಗಬೇಕು ಎಂದು ಹೇಳಿದೆ.

ವಿಪತ್ತಿಗೆ ಕಳವಳ ವ್ಯಕ್ತಪಡಿಸಿರುವ ಪರಿಸರವಾದಿಗಳು, 'ಈ ವಿಪತ್ತು ಒಂದು ಪಾಠವಾಗಿದೆ. ಪರ್ವತಗಳಿಗೆ ಉಂಟುಮಾಡಿರುವ ವಿವೇಚನಾ ರಹಿತ ಹಾನಿ ಪತ್ತೆ ಮತ್ತು ತಡೆಗೆ ರಾಜ್ಯಗಳೊಂದಿಗೆ ಕರಾವಳಿ ನಿಯಂತ್ರಣ ವಲಯಗಳ ರೀತಿಯೇ ಕೇಂದ್ರ ಪರ್ವತ ನಿಯಂತ್ರಣ ಪ್ರಾಧಿಕಾರ ಸ್ಥಾಪಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಹೋಟೆಲ್ ನೆಲಸಮಗೊಳಿಸುವ ಸರ್ಕಾರದ ನಿರ್ಧಾರವನ್ನು ಖಂಡಿಸಿ ಸ್ಥಳೀಯರು ಮಂಗಳವಾರ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಹೋಟೆಲ್ ಮಾಲೀಕರ ಅಳಲು

'ಹೋಟೆಲ್ ನೆಲಸಮಗೊಳಿಸುವ ಮಾಹಿತಿ ಬೆಳಿಗ್ಗೆಯಷ್ಟೇ ಪತ್ರಿಕೆಗಳನ್ನು ಓದಿದಾಗ ತಿಳಿಯಿತು. ನನ್ನ ಹೋಟೆಲ್ ಕಟ್ಟಡ ಅಸುರಕ್ಷಿತವೆಂದು ಗುರುತಿಸಲ್ಪಟ್ಟಿದ್ದರೆ ಅದನ್ನು ನೆಲಸಮಗೊಳಿಸುವ ಮೊದಲು ಸೂಕ್ತ ಪರಿಹಾರ ಒಂದೇ ಕಂತಿನಲ್ಲಿ ಕೊಡಬೇಕು' ಎಂದು 'ಮಲಾರಿ ಇನ್' ಹೋಟೆಲ್ ಮಾಲೀಕ ಠಾಕೂರ್ ಸಿಂಗ್ ಮಂಗಳವಾರ ಒತ್ತಾಯಿಸಿದರು.

'ಬೆವರು ಮತ್ತು ರಕ್ತ ಬಸಿದು ಈ ಹೋಟೆಲ್ ಕಟ್ಟಿದ್ದೇನೆ. ಪರಿಹಾರ ನೀಡದೆ ಏಕಾಏಕಿ ನನ್ನ ಕಣ್ಣೆದುರೇ ಹೋಟೆಲ್ ಕೆಡವಿದರೆ ನನ್ನ ಪರಿಸ್ಥಿತಿ ಏನಾಗಬೇಕು?' ಎಂದು ಭೋಟಿಯಾ ಬುಡಕಟ್ಟು ಸಮುದಾಯದ ಸಿಂಗ್ ಅಳಲು ತೋಡಿಕೊಂಡರು.

ಇದೇ ಭಾವನೆ ವ್ಯಕ್ತಪಡಿಸಿದ 'ಮೌಂಟ್ ವ್ಯೂ' ಹೋಟೆಲ್ ಮಾಲೀಕ ಲಾಲ್‌ಮಣಿ ಸೆಮ್ವಾಲ್ 'ಕಟ್ಟಡ ಕೆಡವುತ್ತಿರುವುದು, ಪರಿಶ್ರಮದಿಂದ ಬೆಳೆಸಿದ ಮಗುವನ್ನು ಹೆತ್ತವರ ಎದುರೇ ಕೊಲ್ಲುತ್ತಿರುವಂತಿದೆ' ಎಂದರು.

ತುರ್ತು ವಿಚಾರಣೆಗೆ 'ಸುಪ್ರೀಂ' ನಕಾರ

ಜೋಶಿಮಠದ ಬಿಕ್ಕಟ್ಟನ್ನು 'ರಾಷ್ಟ್ರೀಯ ದುರಂತ'ವಾಗಿ ಘೋಷಿಸಲು ನ್ಯಾಯಾಂಗದ ಮಧ್ಯಪ್ರವೇಶಕ್ಕೆ ಕೋರಿರುವ ಮೇಲ್ಮನವಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿತು.

'ಇಂತಹ ಪರಿಸ್ಥಿತಿ ನಿಭಾಯಿಸಲು ಚುನಾಯಿತ ಸರ್ಕಾರಗಳು ಇವೆ. ಎಲ್ಲಾ ಪ್ರಮುಖ ವಿಷಯಗಳನ್ನು ನಮ್ಮ ಬಳಿಗೆ ತರಬಾರದು. ಈ ಅರ್ಜಿಯನ್ನು ಜ.16 ರಂದು ವಿಚಾರಣೆಗೆ ಪಟ್ಟಿ ಮಾಡಲಾಗುವುದು' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠ ಹೇಳಿತು.

ಇದಕ್ಕೂ ಮೊದಲು, ಸ್ವಾಮಿ ಅವಿಮುಕ್ತೇಶ್ವರನಂದ್ ಸರಸ್ವತಿ ಪರ ವಕೀಲ ಪರಮೇಶ್ವರ್ ನಾಥ್ ಮಿಶ್ರಾ ಅವರು ಅರ್ಜಿಯ ತುರ್ತು ವಿಚಾರಣೆಗೆ ಪಟ್ಟಿ ಮಾಡಿಸಲು ಸೋಮವಾರ ಕೋರಿದ್ದನ್ನು ಪ್ರಸ್ತಾಪಿಸಿ, ಬುಧವಾರ ತುರ್ತು ವಿಚಾರಣೆ ನಡೆಸಲು ಪೀಠಕ್ಕೆ ಮನವಿ ಮಾಡಿದರು.

ಅತ್ಯಂತ ಅಪಾಯದ ಭೂಕಂಪ ವಲಯ– 5ರಲ್ಲಿ ಜೋಶಿಮಠ

ನಿರಂತರ ಭೂಕಂಪನಕ್ಕೆ ತುತ್ತಾಗುತ್ತಿರುವ ಜೋಶಿಮಠವು ಅತ್ಯಂತ ಅಪಾಯದ ಭೂಕಂಪ ವಲಯ –5ರ ವ್ಯಾಪ್ತಿಯಲ್ಲಿದೆ ಎಂದು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

1999ರಲ್ಲಿ ಸಂಭವಿಸಿದ ಚಮೋಲಿ ಭೂಕಂಪದ ವಲಯದಲ್ಲಿ ಜೋಶಿಮಠ ಇದ್ದು, ಇಲ್ಲಿ ಆಗಾಗ ಸಂಭವಿಸುವ ಲಘು ಕಂಪನಗಳಿಂದಾಗಿ ಭೂಮಿಯ ಒಳಪದರದ ಬಂಡೆಗಳ ಬಿಗಿಬಂಧ ಸಡಿಲಗೊಂಡಿರುವ ಸಾಧ್ಯತೆ ಇದೆ. ಅಲ್ಲದೆ, ಭೂಮಿಯಲ್ಲಿ ಬಿರುಕು ಮತ್ತು ಕುಸಿತ ಹೆಚ್ಚಲು ವಿಪರೀತ ಮಳೆ, ಪರ್ವತಗಳಿಂದ ಭಾರಿ ಪ್ರಮಾಣದ ನೀರಿನ ಹರಿವು, ಪರ್ವತದ ಬಂಡೆಗಳ ಪದರಗಳಲ್ಲಿನ ಬೃಹತ್ ಬಿರುಕುಗಳಂತಹ ಅಂಶಗಳೂ ಕಾರಣ ಎಂದು ಅವರು ಹೇಳಿದ್ದಾರೆ.

ಈ ಪ್ರದೇಶದ ಭೂಕಂಪನ ಅಧ್ಯಯನವು, ಸುರಕ್ಷಿತ ವಾಸ ಸ್ಥಳಗಳು ಮತ್ತು ಮೂಲಸೌಕರ್ಯಗಳಿಗೆ ಎದುರಾಗುವ ಅಪಾಯ ಗುರುತಿಸಲು ಹೆಚ್ಚು ನೆರವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೊಂಗಲ್ ಆಹ್ವಾನ ಪತ್ರಿಕೆಯಿಂದ ರಾಜ್ಯ ಲಾಂಛನ ಕೈಬಿಟ್ಟ ರಾಜ್ಯಪಾಲ

ತಮಿಳುನಾಡು: ಮತ್ತೊಂದು ವಿವಾದ ಸೃಷ್ಟಿಸಿದ ಆರ್‌.ಎನ್‌.ರವಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ರಾಜ್ಯಪಾಲ ಆರ್‌.ಎನ್‌.ರವಿ ಅವರು ಇದೇ 12ರಂದು ರಾಜಭವನದಲ್ಲಿ ಪೊಂಗಲ್ ಸಂಭ್ರಮಾಚರಣೆ ನಡೆಸಲು ಉದ್ದೇಶಿಸಿದ್ದು, ಇದಕ್ಕಾಗಿ ಸಿದ್ಧಪಡಿಸಿರುವ ಆಹ್ವಾನ ಪತ್ರಿಕೆಯಿಂದ ರಾಜ್ಯ ಲಾಂಛನ ಕೈಬಿಟ್ಟಿರುವುದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ಅತಿ ಗಣ್ಯರು ಹಾಗೂ ಇತರರಿಗೆ ಈಗಾಗಲೇ ಆಹ್ವಾನ ಪತ್ರಿಕೆ ರವಾನಿಸಲಾಗಿದ್ದು, ಅದರಲ್ಲಿ ತಮ್ಮ ಹೆಸರಿನಡಿ ತಮಿಳುನಾಡು ರಾಜ್ಯಪಾಲ ಎನ್ನುವ ಬದಲು ತಮಿಳಗಂ ರಾಜ್ಯಪಾಲ ಎಂದು ಮುದ್ರಿಸಿರುವುದು ವಿವಿಧ ಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯಕ್ಕೆ ತಮಿಳುನಾಡು ಎಂದು ಕರೆಯುವ ಬದಲು ತಮಿಳಗಂ ಎಂದು ಸಂಬೋಧಿಸುವುದೇ ಸೂಕ್ತ ಎಂದು ಕೆಲ ದಿನಗಳ ಹಿಂದೆ ಅವರು ಹೇಳಿದ್ದರು.

ಕಳೆದ ವರ್ಷದ ಏಪ್ರಿಲ್ 14ರಂದು ರಾಜಭವನದಲ್ಲಿ ಚಹಾ ಕೂಟ ಏರ್ಪಡಿಸಲಾಗಿತ್ತು. ಆಗ ಸಿದ್ಧಪಡಿಸಿದ್ದ ಆಹ್ವಾನ ಪತ್ರಿಕೆಯಲ್ಲಿ ರಾಜ್ಯ ಲಾಂಛನ ಮುದ್ರಿಸಲಾಗಿತ್ತು. ಡಿಸೆಂಬರ್ 14ರಂದು ಉದಯನಿಧಿ ಸ್ಟಾಲಿನ್ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ರಾಜ್ಯದ ಜೊತೆಗೆ ಕೇಂದ್ರದ ಲಾಂಛನ ನಮೂದಿಸಲಾಗಿತ್ತು. ಆದರೆ ಈಗ ಕೇಂದ್ರ ಸರ್ಕಾರದ ಲಾಂಛನವನ್ನಷ್ಟೇ ಮುದ್ರಿಸಲಾಗಿದೆ.

ಸಿಪಿಐ (ಎಂ) ಸಂಸದ ಸು.ವೆಂಕಟೇಶನ್ ಅವರು 2022 ಹಾಗೂ 2023ರಲ್ಲಿ ರಾಜಭವನದಿಂದ ತಮಗೆ ಕಳುಹಿಸಲಾಗಿರುವ ಆಹ್ವಾನ ಪತ್ರಿಕೆಯನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

'ರಾಜ್ಯ ಲಾಂಛನದಲ್ಲಿ ತಮಿಳುನಾಡು ಎಂಬ ಉಲ್ಲೇಖವಿದೆ. ಆದ್ದರಿಂದ ರಾಜ್ಯಪಾಲರು ಆಹ್ವಾನ ಪತ್ರಿಕೆಯಲ್ಲಿ ಲಾಂಛನ ಮುದ್ರಿಸಿಲ್ಲ. ಅವರದ್ದು ಬಾಡಿಗೆ ನಿವಾಸ (ರಾಜಭವನ). ಅದನ್ನು ಖಾಲಿ ಮಾಡುತ್ತಾರೆಯೇ? ಸದನ ತೊರೆದಷ್ಟೇ ವೇಗವಾಗಿ ರಾಜ್ಯ ತೊರೆಯುತ್ತಾರೆಯೇ' ಎಂದು ವೆಂಕಟೇಶನ್ ಪ್ರಶ್ನಿಸಿದ್ದಾರೆ.

ಪೊಂಗಲ್ ಆಹ್ವಾನ ಪತ್ರಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಹಲವರು ರಾಜ್ಯಪಾಲರ ನಡೆ ಖಂಡಿಸಿದ್ದಾರೆ. ತಮಿಳುನಾಡು ಎಂದು ಸಂಬೋಧಿಸುವುದಕ್ಕೆ ಮನಸ್ಸಿಲ್ಲದಿದ್ದರೆ ರಾಜ್ಯ ಬಿಟ್ಟು ಹೋಗಲಿ ಎಂದಿದ್ದಾರೆ.

ಚೆನ್ನೈನ ಕಾಂಪೌಂಡ್‌ವೊಂದರ ಮೇಲೆ ಮಂಗಳವಾರ 'ಗೆಟ್‌ಔಟ್‌ರವಿ' ಎಂಬ ಬರಹವಿರುವ ಪೋಸ್ಟರ್ ಅಂಟಿಸಲಾಗಿತ್ತು–ಪಿಟಿಐ ಚಿತ್ರ

ರಾಜ್ಯಪಾಲರ ವಿರುದ್ಧ ಪ್ರತಿಭಟನೆ

ಚೆನ್ನೈ (ಪಿಟಿಐ): ರವಿ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಮಂಗಳವಾರ ರಾಜ್ಯದ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ.

ಪ್ರತಿಭಟನಕಾರರು 'ಗೆಟ್‌ಔಟ್‌ರವಿ' ಬರಹವಿರುವ ಫಲಕ ಹಿಡಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಲವೆಡೆ ಕಾಂಪೌಂಡ್‌ಗಳ ಮೇಲೂ ಪೋಸ್ಟರ್ ಅಂಟಿಸಲಾಗಿದೆ. ಕೊಯಮತ್ತೂರಿನಲ್ಲಿ ಪ್ರತಿಭಟನೆ ನಡೆಸಿದ ತಂತೈ ಪೆರಿಯಾರ್ ದ್ರಾವಿಡರ್ ಕಳಗಂ ಸಂಘಟನೆಯ ಕಾರ್ಯಕರ್ತರು ರವಿ ಅವರ ಪ್ರತಿಕೃತಿ ದಹಿಸಲು ಯತ್ನಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದರು.

'ಪ್ರತಿಬಾರಿಯೂ ಸದನದಲ್ಲಿ ತೀಕ್ಷ್ಣ ಉತ್ತರ ನೀಡುವ ಮೂಲಕ ವಿರೋಧ ಪಕ್ಷಗಳ ಬಾಯಿ ಮುಚ್ಚಿಸುತ್ತಿದ್ದ ನಮ್ಮ ನಾಯಕ ಸ್ಟಾಲಿನ್ ಅವರು ಸೋಮವಾರ ರಾಜ್ಯಪಾಲರನ್ನೇ ಸದನ ತೊರೆಯುವಂತೆ ಮಾಡಿದ್ದಾರೆ. ನಮ್ಮ ಹಕ್ಕುಗಳಿಗೆ ಧಕ್ಕೆಯಾದಾಗ ದನಿ ಎತ್ತುವ ಮೊದಲ ಮುಖ್ಯಮಂತ್ರಿ ಅವರಾಗಿದ್ದಾರೆ' ಎಂದು ಸಚಿವ ಉದಯನಿಧಿ ಸ್ಟಾಲಿನ್ ಮಂಗಳವಾರ ಹೇಳಿದ್ದಾರೆ.

ರವಿ ಅವರನ್ನು ಬೆಂಬಲಿಸಿ ಪುದುಕೊಟ್ಟೈನಲ್ಲಿ ಧರಣಿ ನಡೆಸಿರುವ ಬಿಜೆಪಿ ಕಾರ್ಯಕರ್ತರು, ಡಿಎಂಕೆ ವಿರುದ್ಧ ಕಿಡಿಕಾರಿದ್ದಾರೆ. ರಾಜ್ಯ ಬಿಜೆಪಿ ಘಟಕದ ಕಾರ್ಯದರ್ಶಿ ಎ.ಅಶ್ವತ್ಥಮನ್ ಅವರು ಡಿಎಂಕೆಯ ಕೆಲ ಶಾಸಕರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ರಾಹುಲ್ ಪ್ರಾರ್ಥನೆ

ಅಮೃತಸರದಲ್ಲಿರುವ ಸ್ವರ್ಣಮಂದಿರಕ್ಕೆ ಮಂಗಳವಾರ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಳಿಕ ಪ್ರಸಾದ ಸ್ವೀಕರಿಸಿದರು. ಹರಿಯಾಣದಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯು ಮಂಗಳವಾರ ಮುಕ್ತಾಯಗೊಂಡಿದ್ದು, ಬುಧವಾರ ಪಂಜಾಬ್‌ನಿಂದ ಯಾತ್ರೆ ಆರಂಭಗೊಳ್ಳಲಿದೆ.

'ಮಹದಾಯಿ: ಅಣೆಕಟ್ಟು ನಿರ್ಮಾಣ ಸ್ಥಗಿತಗೊಳಿಸಲು ಕರ್ನಾಟಕಕ್ಕೆ ನೋಟಿಸ್'

ಪಣಜಿ (ಪಿಟಿಐ): ಮಹದಾಯಿ ತಿರುವು ಯೋಜನೆಯಡಿ ಕಳಸಾ ಮತ್ತು ಬಂಡೂರಿ ಉಪನದಿಗಳಿಗೆ ಅಣೆಕಟ್ಟು ನಿರ್ಮಿಸುವುದನ್ನು ಸ್ಥಗಿತಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ಪ್ರಧಾನ ವನ್ಯಜೀವಿ ಅಧಿಕಾರಿ ನೋಟಿಸ್ ನೀಡಿದ್ದಾರೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ.

ಮಹದಾಯಿ ನದಿ ತಿರುವು ಯೋಜನೆ ವಿವಾದದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಚರ್ಚಿಸಲು ಸಾವಂತ್ ಅವರು ಉನ್ನತ ಅಧಿಕಾರಿಗಳು ಹಾಗೂ ಮಹದಾಯಿ ಬಚಾವೊ ಅಭಿಯಾನದ ಸದಸ್ಯರೊಂದಿಗೆ ಸೋಮವಾರ ಸಭೆ ನಡೆಸಿದ್ದರು. ನಂತರ, ಅವರು ಈ ಕುರಿತು ಟ್ವೀಟ್ ಮಾಡಿದ್ದಾರೆ.

'ಮಹದಾಯಿ ನದಿ ನೀರು ಹಂಚಿಕೆ ವಿಷಯದಲ್ಲಿ ಗೋವಾದ ಹಿತಾಸಕ್ತಿ ಕಾಪಾಡುವುದಕ್ಕೆ ಸಂಬಂಧಿಸಿ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಸಭೆಗೆ ವಿವರಿಸಲಾಯಿತು. ಮಹದಾಯಿ ಬಚಾವೊ ಆಂದೋಲನ ಸದಸ್ಯರು ಸಹ ಉತ್ತಮ ಸಲಹೆಗಳನ್ನು ನೀಡಿದ್ದು, ಒಟ್ಟಾರೆ ಸಭೆಯು ಫಲಪ್ರದವಾಗಿತ್ತು' ಎಂದು ಟ್ವೀಟ್‌ನಲ್ಲಿ ವಿವರಿಸಿದ್ದಾರೆ.

> ಮಹದಾಯಿ ಯೋಜನೆಗೆ ಸಂಬಂಧಿಸಿ ಕೇಂದ್ರ ಪರಿಸರ ಇಲಾಖೆ ರಾಜ್ಯದ ಸ್ಪಷ್ಟನೆ ಕೇಳಿದೆ. ಇದರಲ್ಲಿ ಆತಂಕಪಡುವ ವಿಚಾರವಿಲ್ಲ. ಅವರಿಗೆ ಬೇಕಾದ ಸ್ಪಷ್ಟನೆ ಕೊಡುತ್ತೇವೆ
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಡ್ವೊಕೇಟ್ ಜನರಲ್ ದೇವಿದಾಸ್ ಪಂಗಮ್, 'ಕರ್ನಾಟಕದ ಡಿಪಿಆರ್‌ಗೆ ಒಪ್ಪಿಗೆ ನೀಡಿರುವುದನ್ನು ಪ್ರಶ್ನಿಸಿ ಗೋವಾ ಸರ್ಕಾರವು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲಿದೆ' ಎಂದರು.

ಆಂದೋಲನದ ಅಧ್ಯಕ್ಷೆ ನಿರ್ಮಲಾ ಸಾವಂತ್, ಪರಿಸರ ಹೋರಾಟಗಾರ ರಾಜೇಂದ್ರ ಕೇರ್ಕರ್ ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಳಸಾ ತಿರುವು: ಸ್ಥಳ ಪರಿಶೀಲಿಸಿದ ಕೇಂದ್ರ ತಂಡ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಕಳಸಾ ನಾಲಾ ತಿರುವು ಯೋಜನೆಗೆ ಅನುಮತಿ ನೀಡುವ ಸಂಬಂಧವಾಗಿ, ಕೇಂದ್ರ ಅರಣ್ಯ, ಪರಿಸರ ಮತ್ತು ತಾಪಮಾನ ಬದಲಾವಣೆ ಸಚಿವಾಲಯದ ಹಿರಿಯ ಅಧಿಕಾರಿಗಳ ತಂಡ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿತು.

ಸಚಿವಾಲಯದ ಹಿರಿಯ ಐಎಫ್‌ಎಸ್ ಅಧಿಕಾರಿ ಅಂಜನಕುಮಾರ್ ನೇತೃತ್ವದಲ್ಲಿ, ಬೆಳಗಾವಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಭಾನು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಚವಾಣ ಅವರೂ ಇದ್ದರು.

ಅಧಿಕಾರಿಗಳ ತಂಡವು ಕಣಕುಂಬಿ ಸುತ್ತಮುತ್ತಲಿನ ಮಲಪ್ರಭಾ, ಮಹದಾಯಿ ನದಿಗಳು, ಕಳಸಾ ಹಳ್ಳ ಹಾಗೂ ಸುತ್ತಲಿನ ಅಚ್ಚುಕಟ್ಟು ಪ್ರದೇಶಕ್ಕೆ ಭೇಟಿ ನೀಡಿತು. ಕಣಕುಂಬಿ ಬಳಿ ಕರ್ನಾಟಕ ನೀರಾವರಿ ನಿಗಮದಿಂದ ಕೈಗೊಂಡಿರುವ ಕಾಮಗಾರಿಯ ವಸ್ತುಸ್ಥಿತಿ ಅವಲೋಕಿಸಿತು.

'ಕಳಸಾ ನಾಲೆ ತಿರುವ ಯೋಜನೆಗೆ ಬೇಕಾದ ಪರಿಸರ ಅನುಮತಿ ನೀಡುವ ಸಂಬಂಧ ಈ ತಂಡ ಪರಿಶೀಲನೆ ನಡೆಸಿದೆ. ತಂಡಕ್ಕೆ ಮಾಹಿತಿ ನೀಡಿದ್ದೇವೆ. ಕಣಕುಂಬಿ ಪ್ರವಾಸಿ ಮಂದಿರದ ಹಿಂಭಾಗ, ಮಾವುಲಿ ದೇವಸ್ಥಾನದ ಮುಂಭಾಗದಲ್ಲಿ ಈಗಾಗಲೇ ಕೈಗೊಂಡ ಕಾಮಗಾರಿಗಳನ್ನೂ ಅಧಿಕಾರಿಗಳಿಗೆ ತೋರಿಸಿದ್ದೇವೆ. ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ನೀರಾವರಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಅವರಿಂದಲೂ ಮಾಹಿತಿ ಸಂಗ್ರಹಿಸಿದ್ದಾರೆ' ಎಂದು ಇಲಾಖೆಯ ಅಧಿಕಾರಿಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (ಹೈದ್ರಾಬಾದ್ ರೋಡ್, ರಾಯಚೂರು –584102)
Phone /Fax-08532-238488/89 Web. www. rims-raichur.com Email info@rims-raichur.com

ಸಂ.ರಿಮ್ಸ್/ಸರಬರಾಜು/ಟೆಂಡರ್/ಡೆಸ್ಕಟಾಪ್/15/2022–23/ಕಾಲ್–2 ದಿನಾಂಕ : 02.01.2023

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯವಿರುವ ಗಣಕಯಂತ್ರ, Revolving chairs, Reading Tables & Chairs ಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

1.) ಟೆಂಡರ್‌ಗಳನ್ನು ದಿನಾಂಕ : 03.01.2023 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2.ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17.01.2023 ರ ಸಾಯಂಕಾಲ 5.00 ಗಂಟೆಗೆ 3.ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : 19.01.2023 ಬೆಳಿಗ್ಗೆ 11.00 ಗಂಟೆಗೆ

ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ www.rims-raichur.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

ವಾ.ಸಾ.ಸಂ.ಇ/ರಾಯಚೂರು/522/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 18/2022–23, /2ನೇ ಕರೆ ದಿನಾಂಕ: 09.01.2023

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ರಸ್ತೆ, ಕಟ್ಟಡ ಹಾಗೂ ಸೇತುವೆಗಳ ನಿರ್ಮಾಣ ಕಾಮಗಾರಿಗಳಿಗೆ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ದ್ವಿ ಲಕೋಟೆಯಲ್ಲಿ ಸ್ಟ್ಯಾಂಡರ್ಡ್ ಬಿಡ್‌ಡಾಕ್ಯೂಮೆಂಟ್ ಕೆಡಬ್ಲ್ಯೂ–3 & 4ರ ನಿಯಮಾವಳಿಗಳಂತೆ ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ ಟೆಂಡರ್ ನಿಯಮಾನುಸಾರ 3ನೇ ದರ್ಜೆ, ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಒಟ್ಟು 02 ಸಂಖ್ಯೆ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಕಾಮಗಾರಿಗಳಿಗೆ ದಿನಾಂಕ 17.01.2023 ರ ಸಂಜೆ 4:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.150.00 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.100.00 ಲಕ್ಷಗಳಾಗಿದ್ದು ಹಾಗೂ ಗರಿಷ್ಠ ಇ.ಎಂ.ಡಿ ರೂ.2.25 ಲಕ್ಷಗಳು ಮತ್ತು ಕನಿಷ್ಠ ಇ.ಎಂ.ಡಿ ರೂ.2.00ಲಕ್ಷಗಳಾಗಿರುತ್ತದೆ. ರೂ.100.00ಲಕ್ಷ ಮೇಲ್ಪಟ್ಟ ಕಾಮಗಾರಿ ಕ್ರ.ಸಂ.08 ಕ್ಕೆ ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ 12.01.2023ರ ಬೆಳಿಗ್ಗೆ 11:30ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಗಧಿಪಡಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ.

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಕೆತು/ವಿಭಾಗ/ಭಾಲ್ಕಿ/ಟಿ.ಎಸ್–5/2022–23/1430 ದಿನಾಂಕ:05.01.2023

ಶೇಕಡಾವಾರು ಟೆಂಡರಅಧಿಸೂಚನೆ. (ಅಲ್ಪಾವಧಿ) (ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ). (ದ್ವಿ ಲಕೋಟೆಯಲ್ಲಿ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ದ್ವಿ –ಲಕೋಟೆಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಆವ್ಹಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ.

ಕಾಮಗಾರಿಯ ಇಂಡೆಂಟ್ ಸಂ. 1) 34901, 2) 34906, 3) 35361, 4) 34872, 5) 34644/Call-2, 6) 34645/Call-2, 7) 34646/Call-2, 8) 34647/Call-2, 9) 33974/Call-3, 10) 33975/Call-3 & 11) 33986/Call-3. ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ) 1) 104.84 LAKHS, 2) 78.37 LAKHS, 3) 67.75 LAKHS, 4) 83.36 LAKHS, 5) 324.93 LAKHS, 6) 242.86 LAKHS, 7) 315.53 LAKHS, 8) 230.79 LAKHS, 9) 423.72 LAKHS, 10) 338.98 LAKHS & 11) 330.50 Lakhs ವರೆಗೆ ಇರುತ್ತದೆ. ಇ.ಎಂ.ಡಿ ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್‌ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 07–01–2023, b) The Last date of Submission of completed tender documents 16-01-2023 @ 16.30Hrs c) Date of Opening of Technical Bid is 17-01-2023 @ 17.00 Hrs & Financial bid is 18-01-2023 @ 17.01 Hrs respectively, Website www.eproc.karnataka.gov.in ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ08484–262257 ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ

ವಾ.ಸಾ.ಸಂ.ಇ/ಬೀದರ/410/ಎಂಸಿ&ಎ/2022–23

ಕರ್ನಾಟಕ ಗೃಹ ಮಂಡಳಿ
Karnataka Housing Board, Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಪಾ.ಅ./ಹಂಚಿಕೆ–10/2022–23 ದಿನಾಂಕ: 09.01.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಅನಾಪುರ ಮತ್ತು ಕಣ್ಣೂರು ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಜಂಟಿ ಸಹಭಾಗಿತ್ವದಡಿಯಲ್ಲಿ ಅಭಿವೃದ್ಧಿಪಡಿಸಲಾಗಿರುವ ನಿವೇಶನಗಳಿಗೆ ಆರಂಭಿಕ ಠೇವಣಿಯೊಂದಿಗೆ ಅರ್ಜಿ ನೊಂದಾಯಿಸಲು ದಿನಾಂಕ: 17.08.2018 ರಂದು ಪ್ರಜಾವಾಣಿ ಮತ್ತು ಆಂದೋಲನ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲಾಗಿತ್ತು. ಅದರಂತೆ ಸದರಿ ಪ್ರಕಟಣೆಯನ್ವಯ ಆರಂಭಿಕ ಠೇವಣಿಯನ್ನು ಪಾವತಿಸಿರುವ ಅರ್ಹ ಅರ್ಜಿದಾರರುಗಳಿಗೆ ಮಂಡಳಿಯ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ತಾತ್ಕಾಲಿಕ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಣೆಯ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

ಜಿಲ್ಲೆ	ಬಡಾವಣೆ	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ:	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ:
ಚಾಮರಾಜನಗರ	ಹನೂರು	ದಿನಾಂಕ: 11–01–2023.	25–01–2023.
		ಮಂಡಳಿಯ ವೆಬ್‌ಸೈಟ್ www.khb.karnataka.gov.in ಹಾಗೂ ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಚಾಮರಾಜನಗರ ಮತ್ತು ಕೇಂದ್ರ ಕಛೇರಿ, ಬೆಂಗಳೂರು.	

ವಿಶೇಷ ಸೂಚನೆ:–
1) ಅರ್ಹ/ಅನರ್ಹ ಅರ್ಜಿದಾರರ ಅಂತಿಮ ಪಟ್ಟಿಯನ್ನು ಹಾಗೂ ಲಾಟರಿ ದಿನಾಂಕವನ್ನು ಪ್ರತ್ಯೇಕವಾದ ಪ್ರಕಟಣೆಯಲ್ಲಿ ತಿಳಿಸಲಾಗುವುದು.
2) ಆಕ್ಷೇಪಣೆ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ., ಚಾಮರಾಜನಗರ** ಇವರನ್ನು **ಮೊಬೈಲ್ ಸಂ. 8310045887** ಅಥವಾ **ಕಾರ್ಯಪಾಲಕ ಅಭಿಯಂತರರು, ಕಗೃಮಂ., ಮೈಸೂರು** ಇವರನ್ನು **ಮೊಬೈಲ್ ಸಂ.8884201692** ಹಾಗೂ **ಕಂದಾಯ ಅಧಿಕಾರಿ ಮತ್ತು ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು** ಇವರನ್ನು ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ**: 080–22273511 **ವಿಸ್ತರಣೆ**: 309, 307 ಇಲ್ಲಿಗೆ ಸಂಪರ್ಕಿಸಬಹುದು ಹಾಗೂ **ವೆಬ್‌ಸೈಟ್**: **www.khb.karnataka.gov.in** ಯಿಂದ ಮಾಹಿತಿ ಪಡೆಯಬಹುದು.

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/RO4018/AAPL/2022-23

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಹಿಂಡಲಗಾ, ಬೆಳಗಾವಿ–591108.

ಸಂಖ್ಯೆ:ಕೇಕಾಬೆ/ದರಖಾಸ್ತು/5021/2022–23, ದಿನಾಂಕ: 10–01–2023

ಇ–ಟೆಂಡರ್ ನೋಟಿಸ್

ಪ್ರಧಾನ ಕಛೇರಿ ಆದೇಶ ಪತ್ರ ಸಂಖ್ಯೆ:ಎಡಿಎಂ–2/ಸಿಆರ್–35/2022–23, ಬೆಂಗಳೂರು ದಿನಾಂಕ: 22–12–2022ರ ಮೇರೆಗೆ 2023–24 ನೇ ಸಾಲಿಗೆ ಬೆಳಗಾವಿ ಕೇಂದ್ರ ಕಾರಾಗೃಹ ಕಾರಾಗೃಹ & ವ್ಯಾಪ್ತಿಯ ಕಾರಾಗೃಹಗಳ ಬಂದಿಗಳಿಗೆ ಅವಶ್ಯವಿರುವ ಆಹಾರ ಪದಾರ್ಥಗಳು, ಕಾರ್ಖಾನೆ ವಿಭಾಗಕ್ಕೆ ಬೇಕರಿ ಪದಾರ್ಥಗಳು/ ಕಾರ್ಖಾನೆ ಕಚ್ಚಾ ವಸ್ತುಗಳನ್ನು ಕೆ.ಟಿ.ಟಿ.ಪಿ ನಿಯಮದನ್ವಯ ಇ–ಖರೀದಿ ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ಲಾಟ್ ನಂ	ದರಖಾಸ್ತು ವಿವರ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	DP/2022-23/IND1403	ಲಾಟ್–1	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ
2	DP/2022-23/IND1404	ಲಾಟ್–2	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
3	DP/2022-23/IND1405	ಲಾಟ್–3	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
4	DP/2022-23/IND1406	ಲಾಟ್–4	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
5	DP/2022-23/IND1407	ಲಾಟ್–5	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
6	DP/2022-23/IND1408	ಲಾಟ್–6	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
7	DP/2022-23/IND1409	ಲಾಟ್–7	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
8	DP/2022-23/IND1410	ಲಾಟ್–8	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
9	DP/2022-23/IND1411	ಲಾಟ್–9	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
10	DP/2022-23/IND1412	ಲಾಟ್–10	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
11	DP/2022-23/IND1413	ಲಾಟ್–11	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
12	DP/2022-23/IND1414	ಲಾಟ್–12	ಬೆಳಗಾವಿ ವಲಯದ ಕಾರಾಗೃಹಗಳಿಗೆ ಇತರೆ ವಸ್ತುಗಳನ್ನು ಖರೀದಿಸುವ ಬಗ್ಗೆ.	
13	DP/2022-23/IND1415	ಲಾಟ್–13	ಬೆಳಗಾವಿ ವಲಯದ ಕಾರಾಗೃಹಗಳಿಗೆ ಬೇಕರಿ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	
14	DP/2022-23/IND1416	ಲಾಟ್–14	ಬೆಳಗಾವಿ, ಕೇಂದ್ರ ಕಾರಾಗೃಹ, ಕಾರ್ಖಾನೆ ಕಚ್ಚಾ ವಸ್ತುಗಳನ್ನು ಖರೀದಿಸುವ ಬಗ್ಗೆ.	
15	DP/2022-23/IND1417	ಲಾಟ್–15	ಬೆಳಗಾವಿ, ಕೇಂದ್ರ ಕಾರಾಗೃಹ, ಕಾರ್ಖಾನೆ ಕಚ್ಚಾ ಸೋಪು, ಮತ್ತು ಪೇನ್ಟೈಲ್ ವಸ್ತುಗಳನ್ನು ಖರೀದಿಸುವ ಬಗ್ಗೆ.	

ದರಖಾಸ್ತುದಾರರು ಇ–ಪೋರ್ಟಲ್ ದೂರವಾಣಿ ಸಂಖ್ಯೆ: 080–25501227, 25501216 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ https://eproc.karnataka.gov.in or Helpline No. 080–25501227, 25501216 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–(ಕೃಷ್ಣಕುಮಾರ್)
ಮುಖ್ಯ ಅಧೀಕ್ಷಕರು ಕೇಂದ್ರ ಕಾರಾಗೃಹ, ಬೆಳಗಾವಿ

DIPR/BGM/RO-NO-1526/MCA/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸಶಕ್ತವಾದ ಪ್ರಪಂಚ ನಿರ್ಮಾಣಕ್ಕೆ ನೋವೇ ಇಂಧನ.
-ಹೃತಿಕ್ ರೋಷನ್

ತಮಿಳುನಾಡು: ಭಾಷಣ ತಿರುಚಿದ ರಾಜ್ಯಪಾಲರ ಕ್ರಮ ಸಮರ್ಥನೀಯವಲ್ಲ

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಉಲ್ಲಂಘಿಸಿದ್ದಾರೆ. ತಮಿಳುನಾಡು ವಿಧಾನಸಭೆಯ ವರ್ಷದ ಮೊದಲ ಅಧಿವೇಶನದ ಮೊದಲ ದಿನ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಅವರು ವಿಫಲರಾಗಿದ್ದಾರೆ. ಅಧಿವೇಶನದ ಆರಂಭದ ದಿನದ ಭಾಷಣದ ಕೆಲವು ಭಾಗಗಳನ್ನು ಓದಲು ರಾಜ್ಯಪಾಲರು ನಿರಾಕರಿಸಿದ್ದಾರೆ ಮತ್ತು ತಮ್ಮದೇ ಕೆಲವು ಮಾತುಗಳನ್ನು ಸೇರಿಸಿದ್ದಾರೆ. ರಾಜ್ಯಪಾಲರ ಮೂಲ ಭಾಷಣವನ್ನು ಮಾತ್ರ ಕಡತಕ್ಕೆ ಸೇರಿಸಿಕೊಳ್ಳಬೇಕು ಎಂಬ ನಿರ್ಣಯವನ್ನು ಸರ್ಕಾರವು ಸಿದ್ಧಪಡಿಸಿ, ಸದನವು ಅದನ್ನು ಅಂಗೀಕರಿಸಿದಾಗ ರಾಜ್ಯಪಾಲರು ಸದನದಿಂದ ಹೊರಗೆ ನಡೆದಿದ್ದಾರೆ. ಸದನವನ್ನು ಉದ್ದೇಶಿಸಿ ಮಾಡುವ ಸಾಂಪ್ರದಾಯಿಕ ಭಾಷಣಕ್ಕೆ ಏನನ್ನಾದರೂ ಸೇರಿಸುವ ಅಥವಾ ಅದರಿಂದ ಏನನ್ನಾದರೂ ತೆಗೆದುಹಾಕುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ. ಈ ಭಾಷಣವು ರಾಜ್ಯ ಸರ್ಕಾರದ ನಿಲುವು ಮತ್ತು ನೀತಿಗಳ ಕುರಿತದ್ದಾಗಿರುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದ ನಿಯಮಗಳು ಅತ್ಯಂತ ಸ್ಪಷ್ಟವಾಗಿವೆ. ಈ ಹಿಂದೆ ಇಂತಹ ಉಲ್ಲಂಘನೆ ಆಗಿರುವುದು ವಿರಳ. ಆದರೆ, ಉಲ್ಲಂಘನೆ ಆದಾಗ ಅದು ತಪ್ಪು ಮತ್ತು ಸ್ವೀಕಾರಾರ್ಹವಲ್ಲ ಎಂದೇ ಹೇಳಲಾಗಿತ್ತು. ಸಾಂಪ್ರದಾಯಿಕ ಭಾಷಣಕ್ಕೆ ರಾಜ್ಯಪಾಲರು ತಮ್ಮ ಮಾತುಗಳನ್ನು ಸೇರಿಸಿಕೊಂಡ ಪೂರ್ವನಿದರ್ಶನ ಇಲ್ಲ. ಹಾಗಿದ್ದರೂ ರವಿ ಅವರು ತಮ್ಮದೇ ಮಾತುಗಳನ್ನು ಸೇರಿಸಿಕೊಂಡಿರುವುದು ಸರಿಯಾದ ಕ್ರಮ ಅಲ್ಲವೇ ಅಲ್ಲ.

ನಮ್ಮ ರಾಜಕೀಯ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿರುವ ಒಕ್ಕೂಟವಾದಕ್ಕೆ ರಾಜ್ಯಪಾಲರ ಈ ರೀತಿಯ ವರ್ತನೆಗಳು ಭಾರಿ ಹಾನಿ ಮಾಡುತ್ತವೆ

ರಾಜ್ಯಪಾಲರಿಗೆ ಇರುವ ಅಧಿಕಾರಗಳು ಏನು ಎಂಬುದನ್ನು ಸಂವಿಧಾನದಲ್ಲಿ ವಿವರಿಸಲಾಗಿದೆ. ಸುಪ್ರೀಂ ಕೋರ್ಟ್ ಈ ಹಿಂದೆ ಹಲವು ಬಾರಿ ನೀಡಿದ್ದ ತೀರ್ಪುಗಳಲ್ಲಿಯೂ ಅದನ್ನು ಸ್ಪಷ್ಟಪಡಿಸಲಾಗಿದೆ. ಈ ವಿಚಾರವು ಆಯೋಗಗಳಲ್ಲಿ ಸಮಾಲೋಚನೆಗೆ ಒಳಪಟ್ಟಿದೆ. ಹಲವು ವರದಿಗಳನ್ನು ಸಿದ್ಧಪಡಿಸಲಾಗಿದೆ. ರಾಜ್ಯಪಾಲರಿಗೆ ಸ್ವತಂತ್ರ ಅಧಿಕಾರ ಇಲ್ಲ ಎಂಬ ವಿಚಾರದಲ್ಲಿ ಸಹಮತಕ್ಕೂ ಬರಲಾಗಿದೆ. ರಾಜ್ಯದ ಚುನಾಯಿತ ಸರ್ಕಾರದ ಇಚ್ಛೆಗೆ ಅನುಗುಣವಾಗಿ ಅವರು ಕೆಲಸ ಮಾಡಬೇಕು ಎಂಬುದರಲ್ಲಿಯೂ ಯಾವುದೇ ಭಿನ್ನಮತ ಇಲ್ಲ. ಆದರೆ, ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಸರ್ಕಾರದ ಜೊತೆಗೆ ಸಂಘರ್ಷಕ್ಕೆ ಇಳಿಯುತ್ತಿರುವುದು ಹೆಚ್ಚುತ್ತಲೇ ಇದೆ. ಆಡಳಿತದಲ್ಲಿ ಅವರು ಹಸ್ತಕ್ಷೇಪ ಮಾಡುತ್ತಿದ್ದಾರೆ ಮತ್ತು ಸರ್ಕಾರವನ್ನು ನಿರ್ಲಕ್ಷಿಸಲು ಕೂಡ ಯತ್ನಿಸುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ನಿಷ್ಠೆ ತೋರುವ ಭರದಲ್ಲಿ ರಾಜ್ಯ ಸರ್ಕಾರದ ಜೊತೆಗೆ ಸ್ಪರ್ಧೆಗೆ ಇಳಿಯುತ್ತಿದ್ದಾರೆ. ರಾಜ್ಯಪಾಲರ ಈ ರೀತಿಯ ವರ್ತನೆಗಳಿಗೆ ಕೇಂದ್ರ ಸರ್ಕಾರದ ಸಮ್ಮತಿ ಮತ್ತು ಬೆಂಬಲ ಇದೆ ಎಂಬುದು ಸ್ಪಷ್ಟ. ವೈಯಕ್ತಿಕ ಮಹತ್ವಾಕಾಂಕ್ಷೆಯ ಕಾರಣಕ್ಕೆ ಕೆಲವು ರಾಜ್ಯಪಾಲರು ಹೀಗೆ ಮಾಡುತ್ತಿದ್ದಾರೆ. ಕೇಂದ್ರದ ಆಡಳಿತಾರೂಢ ಪಕ್ಷದ ರಾಜಕೀಯ ಸಿದ್ಧಾಂತದ ಜೊತೆಗೆ ಇರುವ ಒಲವಿನ ಕಾರಣಕ್ಕಾಗಿಯೂ ಕೆಲವು ರಾಜ್ಯಪಾಲರು ಹೀಗೆ ಮಾಡುತ್ತಿದ್ದಾರೆ. ರವಿ ಸೇರಿದಂತೆ ಕೆಲವು ರಾಜ್ಯಪಾಲರು ಸದನವು ಅಂಗೀಕರಿಸಿದ ಮಸೂದೆಗಳಿಗೆ ಸಹಿ ಹಾಕಲು ನಿರಾಕರಿಸಿದ್ದೂ ಇದೆ. ಅದಲ್ಲದೆ, ಅತ್ಯಂತ ವಿವೇಚನಾರಹಿತವಾಗಿ ವರ್ತಿಸಿದ್ದೂ ಇದೆ. ನಮ್ಮ ರಾಜಕೀಯ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿರುವ ಒಕ್ಕೂಟವಾದಕ್ಕೆ ಈ ರೀತಿಯ ವರ್ತನೆಗಳು ಭಾರಿ ಹಾನಿ ಮಾಡುತ್ತವೆ. ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಯಾವುದೇ ಸಂಘರ್ಷ ಇಲ್ಲ ಎಂಬುದು ಕೂಡ ಗಮನಾರ್ಹ.

ರವಿ ಅವರು ಕೈಬಿಟ್ಟ ಪದಗಳು ಮತ್ತು ಅಭಿವ್ಯಕ್ತಿಗಳನ್ನು ಉಲ್ಲೇಖಿಸುವುದು ಬಹಳ ಮುಖ್ಯ. ಜಾತ್ಯತೀತತೆ ಮತ್ತು ದ್ರಾವಿಡ ಮಾದರಿ ಎಂಬ ಪದಗಳನ್ನು ಅವರು ಕೈಬಿಟ್ಟಿದ್ದಾರೆ. ಪೆರಿಯಾರ್, ಅಂಬೇಡ್ಕರ್, ಕೆ. ಕಾಮರಾಜ್, ಸಿ.ಎನ್. ಅಣ್ಣಾದೊರೆ, ಕರುಣಾನಿಧಿ ಮುಂತಾದವರ ಉಲ್ಲೇಖಗಳನ್ನೂ ಕೈಬಿಟ್ಟಿದ್ದಾರೆ. ರವಿ ಅವರು ಕೈಬಿಟ್ಟ ಪದಗಳು ಮತ್ತು ಹೆಸರುಗಳು ಕಳವಳವನ್ನು ಇನ್ನಷ್ಟು ಹೆಚ್ಚಿಸುತ್ತವೆ. ರವಿ ಮತ್ತು ಅವರು ನಿಷ್ಠೆ ಇರಿಸಿರುವ ರಾಜಕೀಯ ನಾಯಕರ ರಾಜಕೀಯ ಒಲವು ಇದು ಆಗಿರಬಹುದು. ಆದರೆ, ಅದನ್ನು ರಾಜ್ಯಗಳ ಮೇಲೆ ಹೇರುವುದು ಸಲ್ಲದು. ದ್ರಾವಿಡ ಮಾದರಿ ಮತ್ತು ತಮಿಳುನಾಡು ಎಂಬುದು ಪ್ರತಿಗಾಮಿಯಾದುದು, ಹಾಗಾಗಿ ರಾಜ್ಯದ ಹೆಸರನ್ನು ತಮಿಳಗಂ ಎಂದು ಬದಲಾಯಿಸಬೇಕು ಎಂದು ರವಿ ಅವರು ಪ್ರತಿಪಾದಿಸುತ್ತಿದ್ದಾರೆ. ರವಿ ಮತ್ತು ಅವರಂತಹ ಇತರ ರಾಜ್ಯಪಾಲರ ನಿಲುವು ಮತ್ತು ನಡವಳಿಕೆಗಳು ಯಾರಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಬದಲಿಗೆ, ಅದರಿಂದ ದೇಶಕ್ಕೆ ಆಗುವ ಹಾನಿ ಬಹಳ ಹೆಚ್ಚು.

ದಿನದ ಟ್ವೀಟ್

ಮನದ ಮಾತಿಗೆ ಓಗೊಟ್ಟವರು

ಜಾಣತನವೇ ಕಾಲನ ನಡೆಯಾಗಿರುವಾಗ, ಜಾಣತನದ, ಸಕ್ಕರೆ ಲೇಪಿತ ಮಾತು ಮತ್ತು ಬರಹಗಳೇ 'ವೈಚಾರಿಕತೆ' ಎಂದು ವಿಜೃಂಭಿಸುತ್ತಿರುವ ಕಾಲದಲ್ಲಿ ಮನದ ಮಾತನ್ನು ಬರೆದು, ಆಡಿ, ಬದುಕಿ ನಿರ್ಗಮಿಸಿದವರಿಗೆ ಶ್ರದ್ಧಾ ನಮನ.
#ಸಾರಾ_ಅಬೂಬಕ್ಕರ್

ಇ.ಎಸ್.ಪ್ರದೀಪ

ಕಿಡಿನುಡಿ

ಬೆಂಗಳೂರಿನಲ್ಲಿ ನಿರ್ಮಾಣ ಹಂತದಲ್ಲಿದ್ದ ಮೆಟ್ರೊ ಕಂಬ ಕುಸಿದು ಮಹಿಳೆ ಮತ್ತು ಮಗು ಸಾವಿಗೀಡಾಗಿದ್ದಾರೆ. ನಿರ್ಲಕ್ಷ್ಯದ ಪರಮಾವಧಿ! ಕಾಮಗಾರಿಯ ಗುಣಮಟ್ಟವನ್ನು ಇದು ತೋರಿಸುತ್ತದೆ. ಇಡೀ ಮೆಟ್ರೊ ವ್ಯವಸ್ಥೆಯನ್ನೇ ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಬೇಕು.

ಡಾ. ಸುಂದರ್, ಕೃಷಿ ವಿಜ್ಞಾನಿ

25 ವರ್ಷಗಳ ಹಿಂದೆ

ಭಾನುವಾರ, 11-1-1998

- **ಬಿಹಾರದಲ್ಲಿ ಮರುಕಳಿಸಿದ ಹತ್ಯಾಕಾಂಡ- 9 ಸಾವು**

ಜೆಹನಾಬಾದ್ (ಬಿಹಾರ), ಜ. 10 (ಪಿಟಿಐ): ಲಕ್ಷ್ಮಣಪುರದಲ್ಲಿ ಈಚೆಗೆ ನಡೆದ ಸಾಮೂಹಿಕ ಹತ್ಯೆಯ ಹಿನ್ನೆಲೆಯಲ್ಲಿ ನಕ್ಸಲೀಯ ಸಂಘಟನೆಗೆ ಸೇರಿದ ಸಿಪಿಎಂಎಲ್ ಕಾರ್ಯಕರ್ತರು ಜೆಹನಾಬಾದ್ ಜಿಲ್ಲೆಯ ರಾಂ ಪುರಾಚುರನ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ 9 ಮಂದಿಯನ್ನು ಭೀಕರವಾಗಿ ಹತ್ಯೆ ಮಾಡಿದ್ದಾರೆ. ಈ ಘಟನೆಯಲ್ಲಿ ಇನ್ನಿಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಇಂದು ತಿಳಿಸಿದ್ದಾರೆ.

- **ಸೋನಿಯಾ ದರ್ಶನಕ್ಕೆ ನೂಕುನುಗ್ಗಲು**

ನವದೆಹಲಿ, ಜ. 10- ಜನ ಮರುಳೋ, ಜಾತ್ರೆ ಮರುಳೋ ಎನ್ನುವ ನಾಣ್ಣುಡಿಯಂತೆ ಸೋನಿಯಾ ಗಾಂಧಿ ಅವರ 'ಧರ್ಮ ದರ್ಶನ' ಪಡೆಯಲು ಜನಜಾತ್ರೆ, ನೂಕುನುಗ್ಗಲು.

ಕಳೆದ ಮೂರ್ನಾಲ್ಕು ದಿನಗಳಿಂದ ಸೋನಿಯಾ ಗಾಂಧಿ ಅವರು ನಂ.10 ಜನಪಥ್‌ನ ತಮ್ಮ ಬಂಗಲೆಯ ಆವರಣದಲ್ಲಿ ತಮ್ಮನ್ನು ಪ್ರೀತಿ ವಿಶ್ವಾಸಗಳಿಂದ ಕಾಣಲು, ಅಭಿನಂದಿಸಲು ಬರುವ ಮಂದಿಗೆ ವಿಶೇಷವಾಗಿ ಕಾಂಗ್ರೆಸ್ ಕಾರ್ಯಕರ್ತರಿಗೆ 'ಧರ್ಮದರ್ಶನ' ವ್ಯವಸ್ಥೆ ಮಾಡಿದ್ದಾರೆ.

ಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಪ್ರಚಾರ ಆರಂಭಿಸಲು ತಮ್ಮ ನಿರ್ಧಾರವನ್ನು ಪ್ರಕಟಿಸಿದ ಮೇಲೆ ಅವರ ನಿವಾಸ ಮತ್ತು ಪಕ್ಕದಲ್ಲಿಯೇ ಇರುವ ಅಕ್ಬರ್ ರಸ್ತೆಯ ಕಾಂಗ್ರೆಸ್ ಕಾರ್ಯಾಲಯ ಬಿಡುವಿಲ್ಲದ ಚಟುವಟಿಕೆಗಳ ತಾಣವಾಗಿ ಪರಿವರ್ತನೆಗೊಂಡಿವೆ.

50 ವರ್ಷಗಳ ಹಿಂದೆ

ಗುರುವಾರ, 11-1-1973

- **ಗಣರಾಜ್ಯ ದಿನಕ್ಕೆ ಮುಂಚೆ ಪ್ರತ್ಯೇಕ ಆಂಧ್ರ ರಾಜ್ಯ: ಇಲ್ಲವೆ ಪಕ್ಷ ತ್ಯಾಗ**

ವಿಜಯವಾಡ, ಜ. 10- ಜನವರಿ 26ರೊಳಗಾಗಿ ಪ್ರತ್ಯೇಕ ಆಂಧ್ರ ರಾಜ್ಯ ಬೇಡಿಕೆ ಈಡೇರಿಸದೇ ಹೋದಲ್ಲಿ ತಾವುಗಳು ಸಾಮೂಹಿಕವಾಗಿ ಪಕ್ಷ ತ್ಯಜಿಸುವುದಾಗಿ ಆಂಧ್ರ ವಿಭಾಗದ ಹದಿನೈದು ಮಂದಿ ಸಂಸತ್ ಕಾಂಗ್ರೆಸ್ ಸದಸ್ಯರು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರಿಗೆ ಅಂತಿಮ ಎಚ್ಚರಿಕೆ ನೀಡಿದ್ದಾರೆ.

ಮಂಗಳವಾರ ತೆನಾಲಿಯಲ್ಲಿ ನಡೆದ ಸಂಸತ್ ಸದಸ್ಯರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತೆಂದು ಸಭೆಯಲ್ಲಿ ಭಾಗವಹಿಸಿದ್ದ ಕೆ.ಸೂರ್ಯನಾರಾಯಣ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಜನತೆಯ ಅಭಿಲಾಷೆಗನುಗುಣವಾಗಿ ಆಂಧ್ರಪ್ರದೇಶ ವಿಭಜನೆ ಹೊರತು ಬೇರೆ ಮಾರ್ಗವಿಲ್ಲವೆಂದು ಅವರು ಹೇಳಿದರು.

- **ಉದ್ಯಮ ಕ್ಷೇತ್ರದಲ್ಲಿ ಇನ್ನಷ್ಟು ಭಾರತ-ಜಪಾನ್ ಸಹಕಾರ: ಸ್ವರಣ್ ಭೇಟಿಯ ಫಲ**

ಟೋಕಿಯೊ, ಜ. 10- ಜಪಾನ್ ವಿದೇಶಾಂಗ ಸಚಿವ ಮಾಸಯೋಷಿ ಓಹಿರಾ ಅವರೊಡನೆ ನಡೆಸಿದ ಮಾತುಕತೆಗಳಿಂದ ಸಂತೃಪ್ತರಾಗಿ ಭಾರತದ ವಿದೇಶಾಂಗ ಸಚಿವ ಸರ್ದಾರ್ ಸ್ವರಣ್ ಸಿಂಗ್ ಅವರು ಇಂದು ಇಲ್ಲಿಂದ ಪ್ರಯಾಣ ಮಾಡಿದರು.

ಆರ್ಥಿಕ ರಂಗದಲ್ಲಿ ಉಭಯ ರಾಷ್ಟ್ರಗಳೂ ಪರಸ್ಪರ ಸಹಕಾರ ಹೆಚ್ಚಿಸಿಕೊಳ್ಳಬಹುದೆಂದು ಭಾರತ ಈಚೆಗೆ ಸೂಚಿಸಿತು.

ಸಿಂಗ್ ಮತ್ತು ಓಹಿರಾ ಅವರು ಜಪಾನ್ ತಾಂತ್ರಿಕ ತಿಳಿವಳಿಕೆ ಮತ್ತು ಆರ್ಥಿಕ ಪಾಲುದಾರಿಕೆಗಳ ಅಗತ್ಯವಿರುವ ಕೆಲವು ನಿರ್ದಿಷ್ಟ ಯೋಜನೆಗಳನ್ನು ಆಲೋಚಿಸಿ ಕೊಂಡಿರುವುದಾಗಿ ಗೊತ್ತಾಗಿದೆ.

ಬಿರುಕುಗಳನ್ನು ಬೆಸೆಯಲು ಬೇಕಾದ ಅಂಶಗಳು ವಿವೇಕಾನಂದರ ತಾತ್ವಿಕ ಪರಂಪರೆಯಲ್ಲಿವೆ

ಭಾರತಕ್ಕೆ ಬೇಕು 'ವಿವೇಕ' ಪರಂಪರೆ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಸ್ವಾಮಿ ವಿವೇಕಾನಂದರ ಜನ್ಮದಿನದ (ಜನವರಿ 12) ಹಿನ್ನೆಲೆಯಲ್ಲಿ ಅವರ ವಿಚಾರಧಾರೆಯ ತಾತ್ವಿಕ ನೆಲೆಗಳನ್ನು ಪ್ರಸ್ತುತಗೊಳಿಸಿಕೊಂಡು ಸಮಕಾಲೀನ ಸಂದರ್ಭದ ಧಾರ್ಮಿಕ ಬಿಕ್ಕಟ್ಟುಗಳನ್ನು ಪರಿಶೀಲಿಸುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಯಾಕೆಂದರೆ ನಮ್ಮ ದೇಶದಲ್ಲೀಗ ಧರ್ಮದ ಹೆಸರಿನಲ್ಲಿ ದ್ವೇಷ ಸಾಧಿಸುವ ಪ್ರವೃತ್ತಿಯು ದೊಡ್ಡ ಬಿಕ್ಕಟ್ಟು ಮತ್ತು ಬಿರುಕುಗಳನ್ನು ಸೃಷ್ಟಿ ಮಾಡಿದೆ. ಇಂಥ ಅನಾರೋಗ್ಯಕರ ಬಿರುಕುಗಳನ್ನು ಬೆಸೆಯಲು ಬೇಕಾದ ಅನೇಕ ಅಂಶಗಳು ವಿವೇಕಾನಂದರ ತಾತ್ವಿಕ ಪರಂಪರೆಯಲ್ಲಿವೆ. ಭಾರತವನ್ನು ಬೆಸೆಯುವ ಉದ್ದೇಶ ಹೊಂದಿದ ರಾಹುಲ್ ಗಾಂಧಿಯವರ ಪಾದಯಾತ್ರೆಯನ್ನೂ ಒಳಗೊಂಡಂತೆ ಪ್ರಗತಿಪರ ಭಾರತೀಯ ಮನಸ್ಸುಗಳು ಈ 'ವಿವೇಕ ಪರಂಪರೆ'ಯನ್ನು ಜನರ ಮುಂದಿಡುವ ಅಗತ್ಯವಿದೆ. ಇದು ಧಾರ್ಮಿಕ ಮೂಲಭೂತವಾದಿಗಳಿಗೆ ಉತ್ತರವಾಗಲಿದೆ.

ನಿಜ, ವಿವೇಕಾನಂದರು ಹಿಂದೂ ಧರ್ಮನಿಷ್ಠ ಧಾರ್ಮಿಕ ನೇತಾರರು. ಅಷ್ಟೇ ಅಲ್ಲ, ಹಿಂದೂ ಧರ್ಮದ ಪ್ರಖರ ಒಳವಿಮರ್ಶಕರು. ಸರ್ವಧರ್ಮ ಮಾನ್ಯವಾದ ಮಾನವೀಯ ಮರು ವ್ಯಾಖ್ಯಾನಕಾರರು. 'ದೀನ ದೇವೋಭವ, ದರಿದ್ರ ದೇವೋಭವ' ಎಂಬ ಹೃದಯಸ್ಥ ನುಡಿಗಳೊಂದಿಗೆ ಅನ್ನಮೂಲ ಅಧ್ಯಾತ್ಮವನ್ನು ಪ್ರತಿಪಾದಿಸಿದವರು. 'ಪರರ ಧಾರ್ಮಿಕ ನಂಬಿಕೆಗಳನ್ನು ಸಹಾನುಭೂತಿಯಿಂದ ನೋಡುವುದೇ ಈಗ ಅತ್ಯವಶ್ಯಕವಾಗಿ ಬೇಕಾಗಿರುವ ಪರಮತ ಸಹಿಷ್ಣುತೆಯ ಪ್ರಥಮ ಹೆಜ್ಜೆ' ಎಂದು ಪ್ರತಿಪಾದಿಸಿದವರು (ನೋಡಿ: ಕೋ.ಚೆನ್ನಬಸಪ್ಪನವರ 'ಕಡಲ ತಡಿಯಿಂದ ಹೈಮಾಚಲದಡಿಗೆ'). ಇದು ಭಾರತವನ್ನು ಜೋಡಿಸುವ ವಿವೇಕ ಪರಂಪರೆ. ಬುದ್ಧ, ಬಸವಣ್ಣ, ನಾರಾಯಣ ಗುರು, ಗಾಂಧಿ, ಭಗತ್ ಸಿಂಗ್, ಬೋಸ್, ಅಂಬೇಡ್ಕರ್, ಆಜಾದ್, ಸಾವಿತ್ರಿಬಾಯಿ ಫುಲೆ, ಫಾತಿಮಾ ಶೇಖ್, ಕಬೀರ್, ಸೂಫಿ ಸಂತರು, ಪಂಪ, ಕುವೆಂಪು ಅವರಂತಹ ಅನೇಕ ಸಾಧಕರು ತಮ್ಮದೇ ನೆಲೆ-ನಿಲುವುಗಳಿಂದ 'ವಿವೇಕ ಪರಂಪರೆ'ಯ ಪ್ರಮುಖರಾಗಿದ್ದಾರೆ. ರಾಹುಲ್ ಗಾಂಧಿಯವರ ಪಾದಯಾತ್ರೆಯಲ್ಲಿ ಇಂಥವರ ಆಶಯ ಅಂತರ್ಗತವಾಗಿತ್ತೆ ಎಂಬ ಪ್ರಶ್ನೆಯೂ ಪ್ರಮುಖವಾಗುತ್ತದೆ.

ಸದ್ಯದ ಸನ್ನಿವೇಶದಲ್ಲಿ ಭಾರತವನ್ನು ಜೋಡಿಸುವ ಆಶಯಕ್ಕೆ ಧರ್ಮ ನಿರಾಕರಣೆ ಮತ್ತು ಸ್ವೀಕರಣೆಯ ಪ್ರಶ್ನೆ ಮುಖ್ಯವಲ್ಲ. ಒಡೆದಾಳುವ ಧಾರ್ಮಿಕ ಮೂಲಭೂತವಾದಿ ಪ್ರವೃತ್ತಿಯ ಪ್ರತಿರೋಧವೇ ಮುಖ್ಯ. ಜನಮಾನಸವನ್ನು ಮುಟ್ಟುವುದು ಮುಖ್ಯ. ಆಗ ನಮ್ಮ ಪ್ರತಿರೋಧ ಇಡಿಯಾಗಿ ಒಂದು ಧರ್ಮದ ಎಲ್ಲರ ವಿರುದ್ಧ ಇರುವುದಿಲ್ಲ. ಯಾಕೆಂದರೆ, ಹಿಂದೂಗಳೆಲ್ಲರೂ ಮೂಲಭೂತವಾದಿಗಳಲ್ಲ, ಮುಸ್ಲಿಮರೆಲ್ಲರೂ ಭಯೋತ್ಪಾದಕರಲ್ಲ, ಕ್ರೈಸ್ತರೆಲ್ಲರೂ ಕರ್ಮಠರಲ್ಲ. ಈಗ ಮೂಲಭೂತವಾದ, ಭಯೋತ್ಪಾದನೆ, ಕರ್ಮಠತೆಗಳು ವಿವಿಧ ಪ್ರಮಾಣ ಮತ್ತು ಸ್ವರೂಪದಲ್ಲಿ ಸರ್ವ 'ಸಾಂಸ್ಥಿಕ' ಧರ್ಮಗಳ 'ಸಣ್ಣ ಸಂಖ್ಯಾತರ' ಸಾಧನಗಳಾಗುತ್ತಿವೆ. ಕೆಲವರಿಗೆ ಬಂದೂಕವೇ ಬಾಯಿ; ಇನ್ನು ಕೆಲವರಿಗೆ ಬಾಯಿಯೇ ಬಂದೂಕ; ಮತ್ತೆ ಕೆಲವರಿಗೆ ಕರ್ಮಠತೆಯೇ ಕನ್ನಡಕ. ಆದ್ದರಿಂದ 'ಸಣ್ಣ ಸಂಖ್ಯಾತರ' ಕಾರಣಕ್ಕಾಗಿ ಇಡೀ ಧರ್ಮದವರನ್ನು ದೂಷಿಸಿದರೆ ಭಾರತೀಯ ಮನಸ್ಸುಗಳನ್ನು ಬೆಸೆಯಲಾಗದು. ಈ ದೃಷ್ಟಿಯಿಂದ ಹಿಂದೂ ಧರ್ಮದ ಸಂದರ್ಭದಲ್ಲಿ ವಿವೇಕಾನಂದರು ಹೇಳಿದ ಈ ಮಾತುಗಳು ಎಲ್ಲ ಧರ್ಮಗಳಿಗೂ ಅನ್ವಯವಾಗುತ್ತವೆ: 'ತಪ್ಪು ಹಿಂದೂ ಧರ್ಮದ್ದಲ್ಲ, ಅಲ್ಲಿರುವ ಸಂಪ್ರದಾಯ ಶರಣರದು, ಪುರೋಹಿತರದು' (ವಿವೇಕಾನಂದರ ಕೃತಿ ಶ್ರೇಣಿ ಸಂಪುಟ- 6). ಸಂಪುಟ 5ರಲ್ಲಿ ವಿವೇಕಾನಂದರು ಧರ್ಮವನ್ನು ವ್ಯಾಖ್ಯಾನಿಸಿದ್ದು ಹೀಗೆ: 'ಧರ್ಮವು ದೇವಸ್ಥಾನ ಕಟ್ಟುವುದರಲ್ಲಿ ಇಲ್ಲ ಅಥವಾ ಸಾಮಾಜಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ. ಅದು ಗ್ರಂಥದಲ್ಲಿಲ್ಲ, ಮಾತಿನಲ್ಲಿಯೂ ಇಲ್ಲ. ಉಪವಾಸದಲ್ಲೂ ಇಲ್ಲ, ಸಂಸ್ಥೆಯಲ್ಲಿಯೂ ಇಲ್ಲ. ಧರ್ಮವೆಂದರೆ ಸಾಕ್ಷಾತ್ಕಾರ'- ಇಲ್ಲಿ ವಿವೇಕಾನಂದರು ಧರ್ಮದ ಸ್ಥಾವರತ್ವವನ್ನು ವಿಮರ್ಶೆಗೆ ಒಡ್ಡಿದ್ದಾರೆ.

ಇಲ್ಲಿ ಬಸವಣ್ಣನವರು ದೇಗುಲವನ್ನು ದೇಹಕ್ಕೆ ಸ್ಥಳಾಂತರಿಸಿ 'ದೇಹವೇ ದೇಗುಲ' ಎಂದದ್ದು ಮತ್ತು ಕುವೆಂಪು ಅವರು ತಮ್ಮ 'ಜಲಗಾರ' ನಾಟಕದಲ್ಲಿ ದೇವರನ್ನು ಶ್ರಮಿಕವರ್ಗದ ಹೃದಯವಾಗಿಸಿದ್ದು ಉಲ್ಲೇಖನೀಯ. ಈ ಎಲ್ಲರ ಆದರ್ಶಗಳೂ ಅದ್ವಿತೀಯವಾಗಿವೆ. ಆದರೆ ವಾಸ್ತವದಲ್ಲಿ ಭಾರತದ ಯಾವ ಧರ್ಮಗಳೂ ಸ್ಥಾವರಗಳನ್ನು ಬಿಟ್ಟಿಲ್ಲ. ಇದರ ಅರಿವು ವಿವೇಕಾನಂದರಿಗೆ ಇತ್ತು. ಸ್ಥಾವರಗಳನ್ನು ದಾಟಬೇಕೆಂದು ಆಶಿಸಿದರೂ ಅದು ಅಷ್ಟು ಸುಲಭವಲ್ಲ ಎಂದು ಅವರಿಗೆ ಗೊತ್ತಿತ್ತು. ಹೀಗಾಗಿ, ಮುಂದೊಮ್ಮೆ 'ಮಾನವ ವರ್ಗವನ್ನು ಎಲ್ಲಿ ವೇದಗಳು, ಬೈಬಲ್, ಕುರಾನ್ ಇಲ್ಲವೊ ಅಲ್ಲಿಗೆ ಕರೆದೊಯ್ಯಬೇಕು. ಆದರೂ ವೇದ, ಬೈಬಲ್, ಕುರಾನ್‌ಗಳ ಐಕ್ಯತೆಯಿಂದ ಇದನ್ನು ಸಾಧಿಸಬೇಕಾಗಿದೆ. ...ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳ ಮಿಲನವಾಗಬೇಕು... ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ' ಎಂದು ಆಶಿಸುತ್ತಾರೆ (ವಿವೇಕಾನಂದರ ಕೃತಿ ಶ್ರೇಣಿ ಸಂಪುಟ- 7). ಇಲ್ಲಿ ಧರ್ಮಗಳು ಮಿಲನವಾಗುವುದೆಂದರೆ ತಂತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವುದಲ್ಲ, ಸ್ನೇಹ ಸಮ್ಮಿಲನದಿಂದ ಭಾವಬಂಧುತ್ವ ಸಾಧಿಸುವುದು.

ರಾಹುಲ್ ಗಾಂಧಿಯವರ 'ಭಾರತ್ ಜೋಡೊ' ಪಾದಯಾತ್ರೆ ಕೂಡ ಧರ್ಮ, ದೇವರುಗಳ ಅಸ್ತಿತ್ವವನ್ನು ಒಪ್ಪುತ್ತಲೇ ದ್ವೇಷ ಬಿತ್ತಿ ದೇಶವನ್ನು ಒಡೆಯುವ ಶಕ್ತಿಗಳ ವಿರುದ್ಧವಾಗಿದೆ. ಆದರೆ ದ್ವೇಷ ಬಿತ್ತುವ ಧರ್ಮ ಧುರೀಣರಿಗಿಂತ ರಾಜಕೀಯ ಪಕ್ಷ ಮತ್ತು ಪರಿವಾರವನ್ನು ವಿರೋಧಿಸುವ ಮಾತುಗಳೇ ಮುನ್ನೆಲೆಗೆ ಬಂದು 'ಭಾರತ್ ಜೋಡೊ'ಗೆ ರಾಜಕೀಯ ಆಯಾಮವೂ ಲಭ್ಯವಾಗಿದೆ. ರಾಜಕೀಯ ಶಕ್ತಿ ಕೇಂದ್ರಗಳು ಧರ್ಮದ ದುರುಪಯೋಗ ಮಾಡಿಕೊಳ್ಳುತ್ತಿರುವುದರಿಂದ ಪಾದಯಾತ್ರೆಗೆ ಒದಗಿರುವ ರಾಜಕೀಯ ಆಯಾಮವನ್ನು ಪೂರ್ಣ ತಪ್ಪೆಂದು ಹೇಳಲಾಗದು. ಆದರೆ ಜನಮಾನಸದಲ್ಲಿ ಧಾರ್ಮಿಕ ಮೂಲಭೂತವಾದಕ್ಕೆ ಪ್ರತಿರೋಧವನ್ನು ಬಿತ್ತಿ ಬೆಳೆಯಲು ಭಾರತದ 'ವಿವೇಕ ಪರಂಪರೆ' ಬಹುಮುಖ್ಯ ಎಂಬುದನ್ನು ಮರೆಯಬಾರದು.

ಹಾಗೆ ನೋಡಿದರೆ ಪಾದಯಾತ್ರೆಯ ವೇಳೆ ರಾಹುಲ್ ಅವರು 'ಬಹುಪಾಲು' ಉಚಿತ ಮಾತುಗಳನ್ನೇ ಆಡಿದ್ದಾರೆ. ಸಾಂದರ್ಭಿಕವಾಗಿ ಒಮ್ಮೊಮ್ಮೆ ಪಾದಯಾತ್ರೆಯ ಮೂಲ ಆಶಯದಾಚೆಯ ಮಾತುಗಳು ಬಂದಿದ್ದರೂ ಅವರಿಗೆ ಕೇಂದ್ರ ಆಶಯದ ಸ್ಪಷ್ಟತೆಯಿದೆ. ಇದಕ್ಕೆ ರಾಹುಲ್ ಅವರು ನನಗೆ ಬರೆದ ಒಂದು ಪತ್ರ ಸಾಕ್ಷಿಯಾಗಿದೆ.

ಹೌದು, ಕೆಲವು ದಿನಗಳ ಹಿಂದೆ ರಾಹುಲ್ ಗಾಂಧಿ ಅವರ ಕಚೇರಿಯಿಂದ ನನಗೊಂದು ಅಚ್ಚರಿಯ ಕರೆ ಬಂತು. ಕರೆ ಮಾಡಿದವರು 'ರಾಹುಲ್ ಗಾಂಧಿಯವರು ನಿಮಗೊಂದು ಪತ್ರ ಕಳಿಸಬೇಕೆಂದಿದ್ದಾರೆ. ನಿಮ್ಮ ಇ-ಮೇಲ್ ಐ.ಡಿ. ಬೇಕು' ಎಂದರು. ತಿಳಿಸಿದೆ. ಎರಡು-ಮೂರು ದಿನದಲ್ಲಿ ರಾಹುಲ್ ಅವರ ಪತ್ರ ಬಂತು. ಅದರಲ್ಲಿ ಅವರು 'ಭಾರತ್ ಜೋಡೊ' ಪಾದಯಾತ್ರೆಯ ಆಶಯವನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದರು. ನನ್ನನ್ನು ಪಾದಯಾತ್ರೆಗೊಮ್ಮೆ ಬರಲು ಆಹ್ವಾನಿಸಿದ್ದರು; ಬರಲಾಗದಿದ್ದರೆ ಪಾದಯಾತ್ರೆಯ ಆಶಯದೊಂದಿಗೆ ಮಾನಸಿಕವಾಗಿ ಭಾರತಯಾತ್ರಿಯಾಗಿ ಬೆಂಬಲಿಸಲು ಕೇಳಿದ್ದರು. ಬಹುತ್ವ ಭಾರತದ ಅಗತ್ಯವನ್ನು ವಿವರಿಸುತ್ತ 'ನಾವು ನಮ್ಮ ನಮ್ಮ ಅಭಿಪ್ರಾಯವನ್ನು ಒಪ್ಪುವ ಅಥವಾ ಒಪ್ಪದಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಸಂವಾದಿಸೋಣ' ಎಂದು ಅವರು ಪ್ರಜಾಪ್ರಭುತ್ವ ಬದ್ಧ ಆಶಯವನ್ನು ಅಭಿವ್ಯಕ್ತಿಸಿದ್ದರು (ಈ ಮಾದರಿಯ ಪತ್ರವನ್ನು ದೇಶದ ಅನೇಕರಿಗೆ ಬರೆದಿರಬಹುದು).

3500ಕ್ಕೂ ಹೆಚ್ಚು ಕಿಲೊಮೀಟರ್ ನಡಿಗೆ ಸಾಮಾನ್ಯವಾದುದಲ್ಲ, ಭಾರತದ ಭಾವ ಬೆಸುಗೆಯ ಸದುದ್ದೇಶದಿಂದ ಪಾದಯಾತ್ರೆ ಮಾಡುವ ಯಾರನ್ನೇ ಆಗಲಿ ಮನಸಾರೆ ಬೆಂಬಲಿಸುವುದು ದೇಶಬದ್ಧ ನೈತಿಕ ಜವಾಬ್ದಾರಿಯೆಂದು ನಾನು ಭಾವಿಸುತ್ತೇನೆ. ಆದರೆ ಪಾದಯಾತ್ರೆಗೆ ಕೊಡುವ ಬೆಂಬಲವು ಅವರ ಪಕ್ಷಕ್ಕೆ ನೀಡುವ ಬೆಂಬಲವಾಗಬೇಕಿಲ್ಲ.

ವಿವೇಕಾನಂದರ ಸ್ಮಾರಕವಿರುವ ಕನ್ಯಾಕುಮಾರಿಯಿಂದ ಆರಂಭಿಸಿ ಗಾಂಧೀಜಿ ಹುತಾತ್ಮರಾದ ದಿನದಂದು ಕಾಶ್ಮೀರದಲ್ಲಿ ಮುಕ್ತಾಯವಾಗುವ ಈ ಪಾದಯಾತ್ರೆಗೆ ಭೌಗೋಳಿಕ ಮಹತ್ವ ಮಾತ್ರವಲ್ಲದೆ, ಸೌಹಾರ್ದದ ಸಾಂಕೇತಿಕ ಮಹತ್ವವೂ ಲಭ್ಯವಾಗುತ್ತದೆ. ಈ ಸಾಂಕೇತಿಕತೆಯು ಜನಮನ ಸಂಚಲನದ ಜೊತೆಗೆ ಕಾಂಗ್ರೆಸ್ಸಿಗರ ಸಿದ್ಧಾಂತದಲ್ಲೂ ಸಾಕಾರಗೊಂಡರೆ ಪಾದಯಾತ್ರೆ ಸಾರ್ಥಕವಾಗುತ್ತದೆ. ಪಾದಯಾತ್ರೆಯ ನಂತರವೂ 'ವಿವೇಕ ಪರಂಪರೆ' ದೇಶವ್ಯಾಪಿಯಾಗಬೇಕು. ಪ್ರಗತಿಪರ ಪರಂಪರೆಯ ಪ್ರತೀಕವಾದ ಸಾಧಕರನ್ನು ಪ್ರತಿಗಾಮಿಗಳಿಂದ ವಿಮೋಚನೆಗೊಳಿಸಬೇಕು.

ಚುರುಮುರಿ

ನಾಲಿಗೆ ನಿಗ್ರಹ

• ಮಣ್ಣೆರಾಜು

'ಎಲೆಕ್ಷನ್ ಟೈಮ್‌ನಲ್ಲಿ ರಾಜಕೀಯ ಪಕ್ಷಗಳು ಹೆಲ್ತ್ ಕ್ಯಾಂಪ್ ನಡೆಸಿ ತಮ್ಮ ನಾಯಕರಿಗೆ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ಕೊಡಬೇಕು ಕಣ್ರೀ...' ಎಂದಳು ಸುಮಿ.

'ಹೌದು, ಪಾದಯಾತ್ರೆ, ಜಾಥಾ, ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡಿ, ಘೋಷಣೆ ಕೂಗಿ ನಾಯಕರು ದಣಿಯುತ್ತಾರೆ. ಕಾರ್ಯ ಒತ್ತಡದಲ್ಲಿ ಏರುಪೇರಾಗುವ ಅವರ ಬಿ.ಪಿ, ಶುಗರ್, ಖದರ್, ಬೆವರನ್ನು ತಪಾಸಣೆ ಮಾಡಿ ತಹಬಂದಿಗೆ ತರಬೇಕಾಗುತ್ತದೆ' ಎಂದ ಶಂಕ್ರಿ.

'ಸಾಲದಕ್ಕೆ, ಮಾಧ್ಯಮದವರು ತಲೆಬಿಸಿಯಾಗುವ ಪ್ರಶ್ನೆ ಕೇಳಿ ಕೆಣಕಿ ನಾಯಕರನ್ನು ಕೆರಳಿಸುತ್ತಾರೆ, ಅಲ್ಲದೆ, ಹೈಕಮಾಂಡ್ ನೀಡುವ ಟಾರ್ಗೆಟ್, ಕೋ-ಕಮಾಂಡ್‌ಗಳು ಕೊಡುವ ಟಾರ್ಚರ್ ನಾಯಕರನ್ನು ಕಾಡಿ ಕಂಗೆಡಿಸುತ್ತವೆ'.

'ರಾಜ್ಯ ಪ್ರವಾಸ ಕಾಲದಲ್ಲಿ ಕಾವೇರಿ, ತುಂಗಭದ್ರೆ, ಕೃಷ್ಣೆ, ಕಪಿಲೆ, ನರ್ಮದೆ, ನೇತ್ರಾವತಿ ನದಿಗಳ ನೀರಿನ ಮಿನರಲ್ ವಾಟರ್, ಒಗ್ಗದ ಊಟ ಸೇವನೆ, ಹೊಸ ಜಾಗದ ವಾಸ್ತವ್ಯ ಇವೆಲ್ಲವೂ ನಾಯಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು'.

'ಅಷ್ಟೆ ಅಲ್ಲಾರೀ, ಶತ್ರುಗಳನ್ನು ಗೆಲ್ಲುವ ಗುರಿ, ಹಿತಶತ್ರುಗಳು ಗಿಲ್ಲುವ ಉರಿ ತಾಳದೆ ತಾಳ್ಮೆ ಕೆಟ್ಟು ನಾಯಕರ ತಲೆಕೆಡಬಹುದು. ನಾಯಕ ತಾನು ಕೆಡುವುದಲ್ಲದೆ ಪಕ್ಷವನ್ನೂ ಕೆಡಿಸುತ್ತಾನೆ ಎಂಬ ಅಪಾದನೆಯೂ ಬರಬಹುದು'.

'ತಮ್ಮ ನಾಯಕರ ಸೇವೆ ಕೊಂಡಾಡುವ, ವಿಪಕ್ಷದವರ ಲೋಪಗಳನ್ನು ಚೆಂಡಾಡುವ ಉದ್ವೇಗದ ಭಾಷಣ ಮಾಡುವಾಗ ನಾಯಕರ ನಾಲಿಗೆ-ಮೆದುಳು ನಡುವಿನ ಸಂಪರ್ಕ ಕಡಿತಗೊಳ್ಳಬಹುದು. ಪ್ರತಿಪಕ್ಷದವರನ್ನು ಬೈಯ್ಯುವ ಭರದಲ್ಲಿ ಮೆದುಳು ತಾನೊಂದನ್ನು ಬೈಯ್ಯಲು ಹೇಳಿದರೆ, ನಾಲಿಗೆ ಇನ್ನೊಂದನ್ನು ಬೈಯ್ದು ಆಭಾಸ ಮಾಡಬಹುದು'.

'ಪರಿಸ್ಥಿತಿ ಕುತ್ತಿಗೆಗೆ ಬಂದಾಗ, ಉದ್ದೇಶಪೂರ್ವಕವಾಗಿ ಬೈದಿಲ್ಲ ಎಂದು ತಿಪ್ಪೆ ಸಾರಿಸಬೇಕಾಗುತ್ತದೆ. ಇಂತಹ ಅನಾರೋಗ್ಯಗಳ ನಿವಾರಣೆಗೆ ನಾಯಕರಿಗೆ ನಾಲಿಗೆ ನಿಗ್ರಹ ಚಿಕಿತ್ಸೆ ನೀಡಿ ಪಕ್ಷದ ಆರೋಗ್ಯ ಕಾಪಾಡಿಕೊಳ್ಳಬೇಕು ಅಲ್ವೇನ್ರೀ?' ಎಂದಳು ಸುಮಿ.

ಸಂಗತ

ನೈತಿಕ ಶಿಕ್ಷಣ: ಸಂವಿಧಾನವೇ ಮೂಲ ಸೆಲೆ

ಮತಧರ್ಮ ನಿರಪೇಕ್ಷವಾದ ನೈತಿಕ ಮೌಲ್ಯಗಳನ್ನು ಶಿಕ್ಷಣದಲ್ಲಿ ತರುವುದಕ್ಕೆ ಆಧಾರವನ್ನು ಒದಗಿಸುವುದು 'ಭಾರತ ಸಂವಿಧಾನ' ಮಾತ್ರ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ವಿಧಾನಸೌಧದಲ್ಲಿ ಸೋಮವಾರ ಬಹಳ ಮಹತ್ವದ ದುಂಡುಮೇಜಿನ ಸಭೆ ನಡೆಯಿತು. ಶಾಲೆಗಳಲ್ಲಿ ಯಾವ ಮಾದರಿಯ 'ನೈತಿಕ ಶಿಕ್ಷಣ'ವನ್ನು ನೀಡಬೇಕು ಎನ್ನುವುದರ ಕುರಿತ ಸಮಾಲೋಚನೆಯಲ್ಲಿ ಪ್ರಾತಿನಿಧ್ಯ ಚೆನ್ನಾಗಿಯೇ ಇತ್ತು. ಈ ಮುಂಚೆ ಈ ಕುರಿತು ನೀತಿ ನಿರ್ದೇಶನ ನೀಡಿದ್ದ ಶಿಕ್ಷಣ ಸಚಿವರು, 'ರಾಮಾಯಣ, ಮಹಾಭಾರತ, ಭಗವದ್ಗೀತೆಯನ್ನು ಒಳಗೊಂಡು ಎಲ್ಲಾ ಧರ್ಮಗಳ ಒಳ್ಳೆಯ ಅಂಶಗಳು ನೀತಿ ಪಾಠದಲ್ಲಿ ಇರಲಿವೆ' ಎಂದು ಹೇಳುತ್ತಾ, ಕುರಾನ್, ಬೈಬಲ್ಲಿನಲ್ಲಿರುವ ಉತ್ತಮ ಅಂಶಗಳ ಸೇರ್ಪಡೆಗೆ ತಕರಾರಿಲ್ಲ ಎಂಬ ರಿಯಾಯಿತಿಯನ್ನೂ ನೀಡಿದ್ದರು. ಆದರೆ ಮೊನ್ನೆಯ ಸಭೆಯಲ್ಲಿ ಹೆಚ್ಚಿನವರು ಭಗವದ್ಗೀತೆ, ರಾಮಾಯಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಆದರೆ, ಕುರಾನ್, ಬೈಬಲ್ ಬಗ್ಗೆ ಯಾರೂ ಮಾತನಾಡಿಲ್ಲ. ಕ್ರೈಸ್ತ ಗುರುಗಳೊಬ್ಬರು ನೈತಿಕ ಶಿಕ್ಷಣವು ಧರ್ಮಾತೀತವಾಗಿರಬೇಕು ಎಂದಿದ್ದರೆ, ಮುಸ್ಲಿಂ ಗುರುಗಳೊಬ್ಬರು, ವಿವಿಧ ಸಂಸ್ಕೃತಿಗಳ ನಮ್ಮ ನಾಡಿನಲ್ಲಿ 'ಯೂನಿವರ್ಸಲ್ ಚಿಂತನೆ'ಗಳನ್ನು ನಾವು ತರಬೇಕು ಎಂದಿದ್ದಾರೆ.

ಶೈಕ್ಷಣಿಕವಾದ ಯಾವುದೇ ಅಂಶಗಳನ್ನು ಧಾರ್ಮಿಕತೆಯ ಚೌಕಟ್ಟಿನಲ್ಲಿ ನೋಡಿದರೆ ಏನಾಗುತ್ತದೆ ಎಂಬುದನ್ನು ನಾವು ಹಿಂದಿನ ವರ್ಷ ಹಿಜಾಬ್, ಕೇಸರಿ ಶಾಲು, ಗಣೇಶೋತ್ಸವ, ಶಾಲೆಯಲ್ಲಿಯೇ ನಮಾಜಿನಂತಹ ವಿವಾದಗಳು ಭುಗಿಲೆದ್ದಾಗ, 'ತಮ್ಮ ಬೋಧನೆಗಳ ಮೂಲಕ ಸಮಾಜವನ್ನು ಎಚ್ಚರಿಸುವ' ವಿವಿಧ ಕೋಮಿನ ಧಾರ್ಮಿಕ ಮುಖಂಡರು ನೀಡಿದ ಕೊಡುಗೆ ಏನು ಎಂಬುದರಲ್ಲಿ ಕಂಡಿದ್ದೇವೆ. ನೈತಿಕ ಶಿಕ್ಷಣಕ್ಕಾಗಿ ಧರ್ಮಗ್ರಂಥಗಳಿಗೆ ಕೈಹಾಕಿದರೆ ಮತ್ತೊಮ್ಮೆ ಕೋಮುಭಾವನೆಗಳನ್ನು ಕೆದಕಿ ನಾವು ಶಾಲಾ ವಾತಾವರಣವನ್ನು ಇನ್ನಷ್ಟು ಮಲಿನಗೊಳಿಸುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ಸಭೆಯಲ್ಲಿ ಕ್ರೈಸ್ತ ಧರ್ಮಗುರುಗಳು ಹೇಳಿದ ಹಾಗೆ 'ಜಾತ್ಯತೀತ' ಎಂದರೆ, 'ಮತಧರ್ಮ ನಿರಪೇಕ್ಷ'ವಾದ ನೈತಿಕ ಮೌಲ್ಯಗಳನ್ನು ಶಿಕ್ಷಣದಲ್ಲಿ ತರಬೇಕು. ಇದಕ್ಕೆ ಯಾವುದಾದರೂ ಒಂದು ಗ್ರಂಥ ಆಧಾರವನ್ನು ಒದಗಿಸುತ್ತದೆ ಎಂದರೆ ಅದು 'ಭಾರತ ಸಂವಿಧಾನ' ಮಾತ್ರ.

ಮಕ್ಕಳನ್ನು ಭಾವಿ ಜೀವನಕ್ಕಾಗಿ ಸಜ್ಜುಗೊಳಿಸುವ ಜೊತೆಯಲ್ಲಿಯೇ ಅವರನ್ನು ಉತ್ತಮ ನಾಗರಿಕರನ್ನಾಗಿ ಮಾಡುವುದೂ ಅಗತ್ಯ ಎನ್ನುವುದನ್ನು ಒಪ್ಪಿಕೊಳ್ಳುವುದಾದರೆ, ಬಹುತ್ವವೇ ಬಲವಾದ ವೈಶಿಷ್ಟ್ಯವಾದ ಭಾರತದಲ್ಲಿ ಅದು ಯಾವುದೇ ಒಂದು ಅಥವಾ ಹಲವು ಧರ್ಮಗ್ರಂಥಗಳಿಂದ ಸಾಧ್ಯವಾಗುವುದಿಲ್ಲ. ಎಲ್ಲಾ ಪ್ರತ್ಯೇಕ ಧರ್ಮಗಳ ಮೂಲ ಮಾನವೀಯ ಮೌಲ್ಯಗಳನ್ನು ಒಳಗೊಂಡು, ಆಧುನಿಕ ಭಾರತಕ್ಕೆ ಅಗತ್ಯವಾದ ಮೌಲ್ಯಗಳನ್ನು ಕಲಿಸುವುದಕ್ಕಾಗಿ ಇರುವ ಒಂದೇ ಒಂದು ಗ್ರಂಥವೆಂದರೆ, 'ಭಾರತ ಸಂವಿಧಾನ'.

ಸಂವಿಧಾನದ ಪ್ರಸ್ತಾವನೆಯನ್ನು ಓದಿ, ಅದರಲ್ಲಿ, (ಜಾತಿ, ಧರ್ಮಗಳನ್ನು ಮೀರಿ) 'ಭಾರತದ ಜನತೆಯಾದ ನಾವು', 'ಸಾರ್ವಭೌಮ, ಸಮಾಜವಾದಿ, ಮತಧರ್ಮ ನಿರಪೇಕ್ಷ, ಜನಸತ್ತಾತ್ಮಕ ಗಣ ರಾಜ್ಯ'ವನ್ನಾಗಿ ಮಾಡುವುದಕ್ಕಾಗಿ ಭಾರತದ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ, ಮತ್ತು ಉಪಾಸನೆಯ ಸ್ವಾತಂತ್ರ್ಯ; ಸ್ಥಾನಮಾನ, ಅವಕಾಶಗಳ ಸಮತೆ; ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಬಂಧುತ್ವಭಾವನೆ ಮೂಡಿಸುವ ದೃಢ ಸಂಕಲ್ಪವನ್ನು ಮಾಡಿದ್ದೇವೆ. ಇವು ನಮಗೆ ನಾವೇ ಕೊಟ್ಟುಕೊಂಡಿರುವ ನಾಗರಿಕ ಮೌಲ್ಯಗಳು. ಸಂವಿಧಾನದ ಮೂರನೇ ಭಾಗದಲ್ಲಿ ನಮಗೆ ನೀಡಲಾಗಿರುವ ಮೂಲಭೂತ ಹಕ್ಕುಗಳು ನಮ್ಮ ಗಳಿಕೆಗಳು, ಅವುಗಳಿಗೆ ಇರುವ ಸಮಂಜಸವಾದ ನಿರ್ಬಂಧಗಳು ನಮ್ಮ ಬಾಧ್ಯತೆಗಳು.

ನಾಲ್ಕನೇ ಭಾಗದ ವಿಧಿ 51 ಎ-ಯಲ್ಲಿ ನಿಗದಿಗೊಳಿಸಿರುವ 'ಮೂಲಭೂತ ಕರ್ತವ್ಯಗಳು' ಭಾರತದ ನಾಗರಿಕರಾಗಿ ನಾವು ಅನುಸರಿಸಬೇಕಾದ ನೀತಿಗಳು, ಮನೋವೃತ್ತಿಗಳು ಮತ್ತು ವರ್ತನೆಗಳು. ಅದರಲ್ಲಿ ಸಂವಿಧಾನಕ್ಕೆ ಬದ್ಧವಾಗಿರುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು; ಧರ್ಮ, ಭಾಷೆ, ಪ್ರದೇಶ, ಲಿಂಗ ಇತ್ಯಾದಿ ಭೇದ ಭಾವಗಳನ್ನು ಮೀರಿ ಭಾರತದ ಎಲ್ಲಾ ಜನರಲ್ಲಿ ಸಾಮರಸ್ಯ ಮತ್ತು ಸಮಾನ ಭ್ರಾತೃತ್ವದ ಭಾವನೆ ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಗಳನ್ನು ಬಿಟ್ಟುಬಿಡುವುದು, ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯಪರಂಪರೆಯನ್ನು ಗೌರವಿಸುವುದು, ವೈಜ್ಞಾನಿಕ ಮನೋವೃತ್ತಿ, ಮಾನವೀಯತೆ, ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವಂತಹ ಮೌಲ್ಯಗಳನ್ನು ಕರ್ತವ್ಯಗಳಾಗಿ ನಮಗೆ ನಾವೇ ವಿಧಿಸಿಕೊಂಡಿದ್ದೇವೆ.

ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವ ರೀತಿಯಲ್ಲಿ ಮಕ್ಕಳನ್ನು ಸಜ್ಜುಗೊಳಿಸುವ ಅಗತ್ಯವಿದೆ. ಇದು ಯಾವುದೇ ಒಂದು ಅಥವಾ ಹೆಚ್ಚು ಧರ್ಮ ಗ್ರಂಥಗಳಿಂದ ಸಾಧ್ಯವಿಲ್ಲ, ಇಂಥದೊಂದು ದೂರದೃಷ್ಟಿ, ಸಾಂವಿಧಾನಿಕ ಮನೋವೃತ್ತಿ ಧಾರ್ಮಿಕ ಮುಖಂಡರು ಎನಿಸಿಕೊಂಡವರಲ್ಲಿ ಇರುವುದಿಲ್ಲ.

ಮಕ್ಕಳಿಗಿಂತ ಮೊದಲು ಶಿಕ್ಷಕರಿಗೆ ಇಂಥ ನೈತಿಕ ಪಾಠವಾಗಬೇಕು ಎಂದು ಸಭೆಯಲ್ಲಿ ಮೂಡಿಬಂದ ಅಭಿಪ್ರಾಯ ಸಮರ್ಥನೀಯ. ಸಂವಿಧಾನದಲ್ಲಿ ಪ್ರತಿಪಾದಿಸಲಾಗಿರುವ ನಾಗರಿಕ ಮೌಲ್ಯಗಳನ್ನು ಪಠ್ಯದ ರೂಪದಲ್ಲಿ ಸಂಯೋಜಿಸಿ, ಕಲಿಕೆ, ಅರಿವು, ಅನ್ವಯ, ಆಚರಣೆಗಳನ್ನು ಸಾಧ್ಯವಾಗಿಸುವ ಕಾರ್ಯಯೋಜನೆಯನ್ನು ಹಾಕಿಕೊಂಡು ಶಿಕ್ಷಕರಿಗೆ ನೈತಿಕ ಶಿಕ್ಷಣವನ್ನು ನೀಡುವುದು ಹೆಚ್ಚು ಸಮಂಜಸ. ಸರ್ಕಾರ ಈ ಕುರಿತು ಸಕಾರಾತ್ಮಕವಾಗಿ ಕಾರ್ಯಪ್ರವೃತ್ತವಾಗಲಿ.

ವಾಚಕರ ವಾಣಿ

ದೇಶ ರೂಪಿಸಿದ ಪಟೇಲ್

ವಲ್ಲಭ ಭಾಯಿ ಪಟೇಲರೇ ಗಡಿ ಸಮಸ್ಯೆಗೆ ಮೂಲ ಕಾರಣ ಎಂದು 86ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಅವರು ಹೇಳಿರುವುದು ಆಶ್ಚರ್ಯಕರ. ಪಟೇಲರು ನಿಧನ ಹೊಂದಿದ್ದು 1950ರಲ್ಲಿ. ಮೈಸೂರು ಅಥವಾ ಕರ್ನಾಟಕ ರಾಜ್ಯ ಈಗಿರುವಂತೆ ಅಸ್ತಿತ್ವಕ್ಕೆ ಬಂದದ್ದು 1956ರಲ್ಲಿ. ರಾಜ್ಯಗಳು ಪುನರ್ವಿಂಗಡಣೆ ಆದ ಬಳಿಕ ಮತ್ತು ಕೇಂದ್ರ ಸರ್ಕಾರದ ಕಾನೂನಿನಂತೆ, ಸುತ್ತಲಿನ ರಾಜ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡದ ಪ್ರದೇಶಗಳು ಒಂದು ಕಡೆ ಸೇರಿದವು. ನಿಜ, ಕೆಲವು ಪ್ರದೇಶಗಳು ಇನ್ನೂ ಸೇರಬೇಕಿದೆ. ಆದರೆ ಅದು ಆನಂತರ ಉಂಟಾಗಿರುವ ಸಮಸ್ಯೆ. ವಸ್ತುಸ್ಥಿತಿ ಹೀಗಿರುವಾಗ, ಗಡಿ ಸಮಸ್ಯೆಯನ್ನು ಪಟೇಲರಿಗೆ ಆರೋಪಿಸುವುದು ದುರದೃಷ್ಟಕರ.

ಪಟೇಲರು ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆ ಎಲ್ಲರಿಗೂ ಗೊತ್ತಿರುವಂತಹದ್ದು. 560ಕ್ಕೂ ಹೆಚ್ಚು ಸ್ಥಳೀಯ ಪ್ರಾಂತ್ಯಗಳನ್ನು ಹಲವಾರು ಕ್ರಮಗಳ ಮೂಲಕ ಒಂದುಗೂಡಿಸಿ, ದೇಶ ಈಗಿರುವಂತೆ ರೂಪುಗೊಳ್ಳುವಲ್ಲಿ ಅವರ ಪಾತ್ರ ಬಹಳ ಹಿರಿದು. ಹೀಗಿರುವಾಗ ಅವರಿಗೆ ಅವಹೇಳನವಾಗುವಂತೆ ಮಾತನಾಡಿರುವುದು ಉಚಿತವಲ್ಲ ಹಾಗೂ ಸಂದರ್ಭೋಚಿತವೂ ಅಲ್ಲ.

ವೆಂಕಟೇಶ ಮಾಚಕನೂರ, ಧಾರವಾಡ

ಗಣಿತ ಕಲಿಕೆ: ಸುನಕ್ ಚಿಂತನೆ ಸಮರ್ಪಕ

ಬ್ರಿಟನ್‌ನ ಪ್ರಧಾನಮಂತ್ರಿ ರಿಷಿ ಸುನಕ್ ಅವರು ತಮ್ಮ ದೇಶದ ಎಲ್ಲಾ ಮಕ್ಕಳಿಗೆ ಹದಿನೆಂಟು ವರ್ಷ ವಯಸ್ಸು ಆಗುವವರೆಗೆ, ಗಣಿತವನ್ನು ಯಾವುದೇ ರೀತಿಯಲ್ಲಾದರೂ ಕಡ್ಡಾಯವಾಗಿ ಕಲಿಸಲು ಯೋಜನೆಯೊಂದನ್ನು ರೂಪಿಸಿದ್ದಾರೆ ಎಂದು ವರದಿಯಾಗಿದೆ. ಇಂದಿನ ದತ್ತಾಂಶ ಮತ್ತು ಸಂಖ್ಯಾಶಾಸ್ತ್ರದ ಯುಗದಲ್ಲಿ ಮಕ್ಕಳು ಹಿಂದೆ ಬೀಳಬಾರದು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆಯಂತೆ. ಗಣಿತದ ಅವಶ್ಯಕತೆ ಮನಗಂಡರೆ, ಈ ನಿರ್ಧಾರ ದಿಟ್ಟ ಅಷ್ಟೇ ಅಲ್ಲ ಸಮರ್ಪಕ ಹೆಜ್ಜೆ ಸಹ ಎಂದು ಹೇಳಬಹುದು.

ಅನೇಕ ಮಕ್ಕಳಿಗೆ ಗಣಿತ ಎನ್ನುವುದು ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಕಬ್ಬಿಣದ ಕಡಲೆಯಾಗಿಯೇ ಪರಿಣಮಿಸಿದೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಗಣಿತ ಕಲಿಕೆಯು ಹಿನ್ನಡೆ ಅನುಭವಿಸುತ್ತಲೇ ಇದೆ. ಅದಕ್ಕೆ ದಕ್ಷ ಅಧ್ಯಾಪಕರ ಕೊರತೆಯೂ ಒಂದು ಕಾರಣ ಎಂದು ಹೇಳಬಹುದೇನೊ. ಇಂದಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರವೇಶ ಪಡೆಯಬೇಕಾದರೆ, ಗಣಿತದಲ್ಲಿ ಪ್ರಾವೀಣ್ಯ ಅತ್ಯವಶ್ಯಕ. ಹಾಗೆಂದ ಮಾತ್ರಕ್ಕೆ ಎಲ್ಲರೂ ಎಂಜಿನಿಯರ್‌ಗಳು ಆಗಬೇಕೆಂದೇನಿಲ್ಲ. ಹಾಗಾಗಿ ಇಂಗ್ಲೆಂಡ್‌ನಲ್ಲಿ ಈಗ ಮಾಡುತ್ತಿರುವಂತೆ, ಗಣಿತ ಕಲಿಕೆಗೆ ಹೆಚ್ಚಿನ ಪ್ರಾಮುಖ್ಯ ನೀಡಿದ್ದೇ ಆದರೆ, ವಿದ್ಯಾರ್ಥಿಗಳು ಬೇರೆ ಬೇರೆ ಹಂತಗಳಲ್ಲಿ ಮುನ್ನಡೆಯಬಹುದು.

ಎಂ.ಎಸ್.ರಘುನಾಥ್, ಬೆಂಗಳೂರು

ತಮಿಳುನಾಡು ರಾಜ್ಯಪಾಲರ ವರ್ತನೆ ಸರಿಯಲ್ಲ

ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಪಕ್ಷ ಹಾಗೂ ರಾಜ್ಯಪಾಲ ಆರ್.ಎನ್. ರವಿ ಅವರ ನಡುವಣ ತಿಕ್ಕಾಟ ತೀವ್ರಗೊಂಡಿದೆ. ರಾಜ್ಯಪಾಲರು ವಿಧಾನಸಭೆಯ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ, ಸರ್ಕಾರ ಸಿದ್ಧಪಡಿಸಿಕೊಟ್ಟಿದ್ದ ಭಾಷಣದಲ್ಲಿನ ಕೆಲವು ಅಂಶಗಳನ್ನು, ಹೆಸರುಗಳನ್ನು ಕೈಬಿಟ್ಟು ಓದಿದ್ದಾರೆ. ಅದಕ್ಕೆ ಸಹಜವಾಗಿಯೇ ಆಡಳಿತಪಕ್ಷದ ಸದಸ್ಯರು ಕೆರಳಿ ವಿರೋಧಿಸಿದ್ದಾರೆ. ರಾಜ್ಯಪಾಲರ ವೈಯಕ್ತಿಕ ಅನಿಸಿಕೆ ಏನೇ ಇರಲಿ, ರಾಷ್ಟ್ರಗೀತೆಗೂ ಮುನ್ನವೇ ಅವರು ಅಸಹನೆಯಿಂದ ಸದನದಿಂದ ಹೊರನಡೆದದ್ದು ಸರಿಯಲ್ಲ. ಇದು, ಬಹುತ್ವ ಭಾರತದ ಸಂವಿಧಾನವಿರೋಧಿ ನಡೆ.

ಪ್ರೊ.ಶಿವರಾಮಯ್ಯ, ಬೆಂಗಳೂರು

ಅಚ್ಚ ಕನ್ನಡದ ಮಾದರಿ ನಡೆ

ಹಾವೇರಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಕಲಾ ಸಂಗಮ' ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಚಲನಚಿತ್ರ ನಟ ಸುಚೇಂದ್ರ ಪ್ರಸಾದ್ ಅವರು ತಮ್ಮ 25 ನಿಮಿಷಗಳ ಭಾಷಣದಲ್ಲಿ ಒಂದೇ ಒಂದು ಇಂಗ್ಲಿಷ್ ಪದವನ್ನೂ ಬಳಸದೆ ಸಭಿಕರ ಗಮನಸೆಳೆದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಖಂಡಿತಾ ಇದೊಂದು ಉತ್ತಮ ಬೆಳವಣಿಗೆ. ನಮ್ಮಲ್ಲಿ ಅನೇಕರು ಇಂಗ್ಲಿಷ್ ಬರದಿದ್ದರೂ ಮಾತು ಮಾತಿಗೂ ಹರುಕು ಮುರುಕು ಇಂಗ್ಲಿಷ್‌ನಲ್ಲಿ ಮಾತನಾಡಿ ಅಪಹಾಸ್ಯಕ್ಕೆ ಈಡಾಗುತ್ತಾರೆ. ಕೆಲವರಂತೂ ಬಾಯಿ ಬಿಟ್ಟರೆ ಸಾಕು, so, but, actually ಎಂಬಂಥ ಇಂಗ್ಲಿಷ್ ಪದಗಳ ಪ್ರವಾಹವೇ ಹರಿಯುತ್ತದೆ. ಆದರೆ ಸ್ಪಷ್ಟವಾಗಿ ಅಚ್ಚ ಕನ್ನಡದಲ್ಲಿ ಮಾತನಾಡಿದರೆ ಎಷ್ಟು ಚಂದ. 'ಚಲಿಸುವ ಮೋಡಗಳು' ಚಿತ್ರಕ್ಕಾಗಿ ಡಾ. ರಾಜ್‌ಕುಮಾರ್ ಅವರು ಹಾಡಿರುವ 'ಜೇನಿನ ಹೊಳೆಯೋ ಹಾಲಿನ ಮಳೆಯೋ ಸುಧೆಯೋ ಕನ್ನಡ ಸವಿ ನುಡಿಯೋ' ಎಂಬ ಚಿ.ಉದಯಶಂಕರ್ ವಿರಚಿತ ಗೀತೆ ಎಷ್ಟೊಂದು ಅರ್ಥಪೂರ್ಣ ಹಾಗೂ ಕರ್ಣಾನಂದಕರವಲ್ಲವೇ.

ಮೈಸೂರಿನಲ್ಲಿ ಕೆಲವು ವರ್ಷಗಳ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿರ್ವಾಹಕರೊಬ್ಬರು ಪ್ರತಿಯೊಂದು ನಿಲುಗಡೆಯ ಸ್ಥಳವನ್ನೂ ಕನ್ನಡದಲ್ಲಿಯೇ ಹೇಳುತ್ತಿದ್ದರಲ್ಲದೆ ಇಂಗ್ಲಿಷ್ ಭಾಷೆಯ ಯಾವುದೇ ಪದ ಬಳಸದೆ ಪ್ರಯಾಣಿಕರೊಡನೆ ಸ್ವಚ್ಛ ಹಾಗೂ ಶುದ್ಧ ಕನ್ನಡದಲ್ಲಿ ಮಾತನಾಡುತ್ತಿದ್ದರು. ಈಗ ಆ ಪುಣ್ಯಾತ್ಮ ಎಲ್ಲಿದ್ದಾರೋ ಏನು ಕಥೆಯೋ ಗೊತ್ತಿಲ್ಲ. ಅದೇ ರೀತಿ ಪತ್ರಿಕೆಗಳಲ್ಲಿ ಪತ್ರಗಳನ್ನು ಬರೆಯುವ ಕೊ.ಸು.ನರಸಿಂಹ ಮೂರ್ತಿಯವರು ಯಾವಾಗಲೂ ಕನ್ನಡದಲ್ಲೇ ಸಹಿ ಮಾಡುವುದರ ಜೊತೆಗೆ ಚೆಕ್ ಪುಸ್ತಕದಲ್ಲೂ ಕನ್ನಡದಲ್ಲೇ ಸಹಿ ಮಾಡುತ್ತಾರೆ. ಇಂತಹ ಕನ್ನಡಪ್ರೇಮಿಗಳು ರಾಜ್ಯದ ಅನೇಕ ಕಡೆ ಕಂಡುಬರಬಹುದು. ಹೊರ ದೇಶಗಳಲ್ಲಿರುವ ಕನ್ನಡಿಗರೂ ತಮ್ಮ ಮೂಲ ಭಾಷೆಯನ್ನು ಹೆಚ್ಚು ಪ್ರೀತಿಸಿ ಗೌರವಿಸುವ ಬಹಳಷ್ಟು ಉದಾಹರಣೆಗಳು ಇವೆ. ಭಾಷೆಯ ಮೇಲಿನ ಪ್ರೇಮ ಹೇಳಿಕೊಟ್ಟು ಬರುವಂತಹುದಲ್ಲ. ಅದು ಹೃದಯಾಂತರಾಳದಿಂದ ಮೂಡಿಬರಬೇಕು. ಬೇರೆ ಭಾಷೆಗಳನ್ನು ಗೌರವಿಸೋಣ. ನಮ್ಮ ಭಾಷೆಯನ್ನು ಮೆರೆಸೋಣ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುಲಾಂತರಿ ಸಾಸಿವೆಯ ಬೀಜ ಉತ್ಪಾದಿಸಿ ಅದನ್ನು ತೆರೆದ ಪರಿಸರದಲ್ಲಿ ಬೆಳೆದು ಪರೀಕ್ಷಿಸಲು (ಎನ್ವಿರಾನ್ಮೆಂಟಲ್ ರಿಲೀಸ್ ಸ್ಟಡಿ) ಕೇಂದ್ರ ಸರ್ಕಾರವು 2022ರ ಅಕ್ಟೋಬರ್‌ನಲ್ಲಿ ಅನುಮತಿ ನೀಡಿತ್ತು. ಸರ್ಕಾರವೇ ಪ್ರಾಯೋಜಿಸಿ ಅಭಿವೃದ್ಧಿಪಡಿಸಿರುವ ಈ ಕುಲಾಂತರಿ ಸಾಸಿವೆಗೆ ಈ ಅನುಮತಿ ನೀಡುವಲ್ಲಿ ಭಾರಿ ತರಾತುರಿ ನಡೆದಿದೆ. ಕುಲಾಂತರಿ ಸಾಸಿವೆಯಿಂದ ಪರಿಸರ ಮತ್ತು ಜೀವವೈವಿಧ್ಯ, ಮುಖ್ಯವಾಗಿ ಜೇನುನೊಣಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ವಿಸ್ತೃತ ಅಧ್ಯಯನ ನಡೆಸಲು ವಿಜ್ಞಾನಿಗಳ ತಂಡ ನಿರ್ಲಕ್ಷ್ಯ ತೋರಿದೆ ಎಂದು ಹೇಳಲಾಗುತ್ತಿದೆ. ಹಲವು ಸೂಚನೆಗಳ ನಂತರವೂ ಅಧ್ಯಯನದ ಅವಶ್ಯಕತೆ ಇಲ್ಲ ಎಂದು ವಿಜ್ಞಾನಿಗಳ ತಂಡ ಹೇಳಿದೆ. ಹೀಗಿದ್ದೂ ಎನ್ವಿರಾನ್ಮೆಂಟಲ್ ರಿಲೀಸ್ ಸ್ಟಡಿಗೆ ಅನುಮತಿ ನೀಡಲಾಗಿತ್ತು, ಅದರ ಜತೆಯಲ್ಲೇ ಜೇನುನೊಣಗಳ ಮೇಲಾಗುವ ಪರಿಣಾಮಗಳನ್ನು ಪರಿಶೀಲಿಸುವಂತೆ ಮತ್ತೆ ಸೂಚಿಸಲಾಗಿತ್ತು. ಈ ಮಧ್ಯೆ, ಅನುಮತಿಯನ್ನು ರದ್ದುಪಡಿಸುವಂತೆ ಆಗ್ರಹಿಸಿ ಹಲವು ವಿಜ್ಞಾನಿಗಳು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರವಷ್ಟೇ ಪತ್ರ ಬರೆದಿದ್ದಾರೆ

ಕುಲಾಂತರಿ ಸಾಸಿವೆಗೆ ತರಾತುರಿಯ ಒಪ್ಪಿಗೆ

• ಜಯಸಿಂಹ ಆರ್.

ಕುಲಾಂತರಿ ತಳಿಗಳ ವಿಷಯ ಮತ್ತೆ ಸದ್ದು ಮಾಡುತ್ತಿದೆ. ಕೇಂದ್ರ ಸರ್ಕಾರದ್ದೇ ಸಂಸ್ಥೆ ಅಭಿವೃದ್ಧಿಪಡಿಸಿರುವ ಕುಲಾಂತರಿ ಸಾಸಿವೆಯನ್ನು ದೊಡ್ಡ ಮಟ್ಟದಲ್ಲಿ ಪರೀಕ್ಷೆಗೆ ಒಳಪಡಿಸಲು ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದೆ. ಸರ್ಕಾರದ ಈ ನಿರ್ಧಾರಕ್ಕೆ ಹಲವು ರೈತ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ. ಸರ್ಕಾರದ ಈ ನಿರ್ಧಾರದಿಂದ ಸಾಸಿವೆಯ ದೇಸೀ ತಳಿಗಳು ನಾಶವಾಗುತ್ತವೆ ಎಂಬ ಆತಂಕ ವ್ಯಕ್ತವಾಗಿದೆ.

ಕುಲಾಂತರಿ ಸಾಸಿವೆ ತಳಿಯು ನಾಟಿ ತಳಿಗಿಂತ ಶೇ 29ರಷ್ಟು ಮತ್ತು ವರುಣಾ ತಳಿಗಿಂತ ಶೇ 19ರಷ್ಟು ಹೆಚ್ಚು ಇಳುವರಿ ನೀಡುತ್ತದೆ ಎಂಬುದು ಈವರೆಗಿನ ಅಧ್ಯಯನದಲ್ಲಿ ದೃಢಪಟ್ಟಿದೆ. ಇಳುವರಿ ಹೆಚ್ಚಾಗುವ ಕಾರಣದಿಂದ, ಸಾಸಿವೆ ಬೆಳಗಾರರಲ್ಲಿ ಹೆಚ್ಚಿನವರು ಕುಲಾಂತರಿ ಸಾಸಿವೆಗೇ ಮೊರೆ ಹೋಗುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಅದರ ಪರಿಣಾಮವಾಗಿ ಸ್ಥಳೀಯ ತಳಿಗಳು ನಾಶವಾಗುತ್ತವೆ. ಕುಲಾಂತರಿ ಹತ್ತಿಯ ವಿಚಾರದಲ್ಲಿ ಇದು ದೃಢಪಟ್ಟಿದೆ. ಈಗ ಸಾಸಿವೆ ವಿಚಾರದಲ್ಲೂ ಇದೇ ಆತಂಕ ವ್ಯಕ್ತವಾಗಿದೆ.

ಕುಲಾಂತರಿ ತಳಿಗಳಿಗೆ ಅವನ್ನು ಅಭಿವೃದ್ಧಿಪಡಿಸಿದ ಸಂಸ್ಥೆಯೇ ನಿಗದಿಪಡಿಸಿದ ಔಷಧಗಳು ಮತ್ತು ಗೊಬ್ಬರಗಳನ್ನು ನೀಡಬೇಕಾಗುತ್ತದೆ. ಔಷಧ ಮತ್ತು ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಹೆಚ್ಚಾಗುತ್ತದೆ ಎಂಬುದು ಯಾವುದೇ ಕುಲಾಂತರಿ ತಳಿಯ ಬಗ್ಗೆ ಸಾಮಾನ್ಯವಾಗಿ ಇರುವ ಆತಂಕ. ಕುಲಾಂತರಿ ಸಾಸಿವೆಯೂ ಇದಕ್ಕೆ ಹೊರತಲ್ಲ. ಕುಲಾಂತರಿ ಸಾಸಿವೆಯನ್ನು ಪ್ರಾಯೋಗಿಕವಾಗಿ ಹೊಲಗಳಲ್ಲಿ ಬೆಳೆಸುವಾಗ, ಅವುಗಳಿಗೆ ಯಾವುದೇ ರೋಗಬಾಧೆ ಇರಲಿಲ್ಲ ಎಂದು ಅಧ್ಯಯನ ವರದಿಯಲ್ಲಿ ಮತ್ತು ಜಿಇಎಸಿಗೆ ಸಲ್ಲಿಸಿದ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಬಿತ್ತನೆಯಾದ ಕೆಲವೇ ದಿನಗಳಲ್ಲಿ ಆ ಹೊಲಗಳಿಗೆ ಔಷಧಗಳನ್ನು ಸಿಂಪಡಿಸಲಾಗಿತ್ತು ಎಂದೂ ವರದಿಯಲ್ಲಿ ಹೇಳಲಾಗಿದೆ. ಯಾವ ಔಷಧಗಳನ್ನು ಎಷ್ಟು ಪ್ರಮಾಣದಲ್ಲಿ ಸಿಂಪಡಿಸಲಾಗಿತ್ತು ಎಂಬ ವಿವರ ಲಭ್ಯವಿಲ್ಲ. ಹೀಗಾಗಿ ಕುಲಾಂತರಿ ಸಾಸಿವೆಗೂ ಹೆಚ್ಚು ಔಷಧ ಮತ್ತು ರಸಗೊಬ್ಬರ ನೀಡಬೇಕಾಗುತ್ತದೆ ಎಂದು ಕೆಲವು ರೈತ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಎನ್ವಿರಾನ್ಮೆಂಟಲ್ ರಿಲೀಸ್ ಎಂದರೆ...

ಯಾವುದೇ ಕುಲಾಂತರಿ ತಳಿಯ ಅಭಿವೃದ್ಧಿ ಸಂದರ್ಭದಲ್ಲಿ ಅವುಗಳನ್ನು ಮೊದಲು ಪ್ರಯೋಗಾಲಯದಲ್ಲಿ ಬೆಳೆದು ಪರಿಶೀಲನೆ ನಡೆಸಲಾಗುತ್ತದೆ. ಆನಂತರ ಅದೇ ಕುಲಾಂತರಿ ತಳಿಯನ್ನು ಪಾಲಿಹೌಸ್‌ಗಳಲ್ಲಿ ನಿಯಂತ್ರಿತ ವಾತಾವರಣದಲ್ಲಿ ಬೆಳೆಯಲಾಗುತ್ತದೆ. ಮೂರನೇ ಹಂತದಲ್ಲಿ ತೆರೆದ ಪರಿಸರದಲ್ಲಿ, ನಿಯಂತ್ರಿತ ವಾತಾವರಣದಲ್ಲಿ ಬೆಳೆದು ಅಧ್ಯಯನ ನಡೆಸಲಾಗುತ್ತದೆ. ಈ ಅಧ್ಯಯನಗಳಲ್ಲಿ ಲಭ್ಯವಾದ ದತ್ತಾಂಶಗಳು ಮತ್ತು ಫಲಿತಾಂಶಗಳನ್ನು ಪರಿಶೀಲಿಸಿ, ಆ ತಳಿಯನ್ನು ಸಂಪೂರ್ಣವಾಗಿ ತೆರೆದ ಪರಿಸರದಲ್ಲಿ ಬೆಳೆದು ಅಧ್ಯಯನ ನಡೆಸಲಾಗುತ್ತದೆ. ಇದನ್ನು 'ಎನ್ವಿರಾನ್ಮೆಂಟಲ್ ರಿಲೀಸ್ ಸ್ಟಡಿ' ಎಂದು ಕರೆಯಲಾಗುತ್ತದೆ. ದೆಹಲಿ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾದ 'ಸೆಂಟರ್ ಫಾರ್ ಜೆನೆಟಿಕಲಿ ಮಾಡಿಫೈಡ್ ಕ್ರಾಪ್ ಪ್ಲಾಂಟ್ಸ್ -ಸಿಜಿಎಂಸಿಪಿ' ಕುಲಾಂತರಿ ಸಾಸಿವೆ ತಳಿ ಡಿಎಂಎಚ್-11 ಅನ್ನು ಅಭಿವೃದ್ಧಿಪಡಿಸಿದೆ. ಈಗ ಡಿಎಂಎಚ್-11, 'ಎನ್ವಿರಾನ್ಮೆಂಟಲ್ ರಿಲೀಸ್ ಸ್ಟಡಿ' ಹಂತದ ಪರೀಕ್ಷೆಗೆ ಅನುಮತಿ ಪಡೆದಿದೆ.

ಆಧಾರ: ಜಿಇಎಸಿ 136, 137, 146 ಮತ್ತು 147ನೇ ಸಭೆಯ ವರದಿಗಳು, ಪಿಟಿಐ

ಜೇನುನೊಣಗಳ ನಿರ್ಲಕ್ಷ್ಯ

ಸಾಸಿವೆಯ ಡಿಎಂಎಚ್-11 ಕುಲಾಂತರಿ ತಳಿಯು ಜೇನುನೊಣಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದು 2010-15ರ ನಡುವೆ ನಡೆಸಲಾದ ಮೂರು ಪ್ರತ್ಯೇಕ ಅಧ್ಯಯನಗಳಲ್ಲಿ ಪತ್ತೆಯಾಗಿದೆ. ಆದರೆ, ಈ ಪರಿಣಾಮ ನಗಣ್ಯವಾದುದು ಎಂದು ಈ ತಳಿಯನ್ನು ಅಭಿವೃದ್ಧಿಪಡಿಸಿದ ವಿಜ್ಞಾನಿಗಳ ತಂಡ ಪ್ರತಿಪಾದಿಸುತ್ತಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ವಿಜ್ಞಾನಿಗಳ ತಂಡವು ಪದೇ ಪದೇ ನಿರಾಕರಿಸಿದೆ.

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ (ಐಸಿಎಆರ್) ಮೇಲ್ವಿಚಾರಣೆಯಲ್ಲಿ ಡಿಎಂಎಚ್-11 ತಳಿಯ ಕ್ಷೇತ್ರ ಅಧ್ಯಯನಗಳನ್ನು ನಡೆಸಲಾಗಿತ್ತು. ಹೀಗೆ ನಡೆದ ಮೂರು ಅಧ್ಯಯನಗಳಲ್ಲಿ ಈ ತಳಿಯಿಂದ ಪರಿಸರದ ಮೇಲೆ, ಸೂಕ್ಷ್ಮಜೀವಿಗಳ ಮೇಲೆ, ಜೇನುನೊಣ ಮತ್ತು ಇತರ ಪರಾಗಸ್ಪರ್ಶಿ ಕೀಟಗಳ ಮೇಲೆ ಆಗುವ ಪರಿಣಾಮಗಳನ್ನು ಪರಿಶೀಲಿಸಲಾಗಿತ್ತು. 2010-11ರಲ್ಲಿ, 2011-12 ಮತ್ತು 2014-15ರಲ್ಲಿ ಭಿನ್ನ ಪರಿಸರದ ಹಲವು ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಲಾಗಿತ್ತು. ಕುಲಾಂತರಿ ಸಾಸಿವೆಯ ಹೊಲಗಳಲ್ಲಿ ಮಕರಂದ ಹೀರಲು ಜೇನುನೊಣಗಳು ಹೆಚ್ಚು ಶ್ರಮ ಪಡಬೇಕು ಎಂಬುದು ಈ ಅಧ್ಯಯನಗಳಲ್ಲಿ ಪತ್ತೆಯಾಗಿತ್ತು.

ಸ್ಥಳೀಯ ತಳಿಗಳು ಮತ್ತು ಈಗಾಗಲೇ ಬಳಕೆಯಲ್ಲಿರುವ ವರುಣಾ ತಳಿಯ ಸಾಸಿವೆಯ ಹೊಲದಲ್ಲಿ ಸಂಗ್ರಹಿಸುತ್ತಿದ್ದ ಮಕರಂದದಷ್ಟೇ, ಮಕರಂದವನ್ನು ಕುಲಾಂತರಿ ಸಾಸಿವೆಯ ಹೊಲದಲ್ಲಿ ಸಂಗ್ರಹಿಸಲು ಶೇ 5ರಿಂದ ಶೇ 27ರಷ್ಟು ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ಸ್ಥಳದಿಂದ ಸ್ಥಳಕ್ಕೆ ಈ ಶ್ರಮದ ಏರಿಕೆಯಲ್ಲಿ ಭಾರಿ ವ್ಯತ್ಯಾಸವಿದೆ. ಮಧ್ಯಪ್ರದೇಶದ ನವಗಾಂವ್‌ನ ಕ್ಷೇತ್ರದಲ್ಲಿ ಜೇನುನೊಣಗಳು ಶೇ 27ರಷ್ಟು ಹೆಚ್ಚು ಶ್ರಮ ಹಾಕಿತ್ತು ಎಂಬುದು 2011-12ರಲ್ಲಿ ನಡೆದ ಅಧ್ಯಯನದಲ್ಲಿ ಪತ್ತೆಯಾಗಿತ್ತು. 2014-2015ರಲ್ಲಿ ಲುಧಿಯಾನಾದಲ್ಲಿ ನಡೆದ ಅಧ್ಯಯನದಲ್ಲಿ, ಕುಲಾಂತರಿ ಸಾಸಿವೆ ಹೊಲದಲ್ಲಿ ಜೇನುನೊಣಗಳ ಶ್ರಮವು ಶೇ 19.5ರಷ್ಟು ಹೆಚ್ಚಾಗಿತ್ತು. ಇದೇ ಅವಧಿಯಲ್ಲಿ ದೆಹಲಿಯಲ್ಲಿರುವ ಐಸಿಎಆರ್‌ನ ಕ್ಷೇತ್ರದಲ್ಲಿ ನಡೆಸಿದ ಅಧ್ಯಯನದಲ್ಲಿ ಜೇನುನೊಣಗಳು ಶೇ 5ರಷ್ಟು ಹೆಚ್ಚು ಶ್ರಮ ಹಾಕಿತ್ತು ಎಂಬುದು ಪತ್ತೆಯಾಗಿತ್ತು. ಆದರೆ, ಇದು ಗಣನೀಯ ಬದಲಾವಣೆ ಅಲ್ಲ ಎಂದು ವಿಜ್ಞಾನಿಗಳು ಸಿದ್ಧಪಡಿಸಿರುವ ವರದಿಯಲ್ಲಿ ಹೇಳಿದ್ದಾರೆ.

ಡಿಎಂಎಚ್-11ರ ಎನ್ವಿರಾನ್ಮೆಂಟಲ್ ರಿಲೀಸ್‌ಗೆ ಅನುಮತಿ ನೀಡಿ ಎಂದು ದೀಪಕ್ ಪೆಂಟಲ್ ಅವರ ನೇತೃತ್ವದ ವಿಜ್ಞಾನಿಗಳ ತಂಡವು ಜಿಇಎಸಿಗೆ 2017ರಲ್ಲೇ ಅರ್ಜಿ ಸಲ್ಲಿಸಿತ್ತು. ಅರ್ಜಿಯನ್ನು ಪರಿಶೀಲಿಸಿದ್ದ ಜಿಇಎಸಿಯು 2018ರ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ತನ್ನ 136ನೇ ಸಭೆಯಲ್ಲಿ, 'ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಿ ಕೀಟಗಳ ಮೇಲೆ ಕುಲಾಂತರಿ ಸಾಸಿವೆಯಿಂದಾಗುವ ಪರಿಣಾಮದ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಿ. ಅಧ್ಯಯನಕ್ಕಾಗಿ ಈ ಸಾಸಿವೆಯನ್ನು ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ, 5 ಎಕರೆಯಷ್ಟು ವಿಸ್ತೀರ್ಣದ ಕ್ಷೇತ್ರಗಳಲ್ಲಿ ಬೆಳೆಯಬೇಕು' ಎಂದು ಸೂಚನೆ ನೀಡಿತ್ತು.

ಆದರೆ ವಿಜ್ಞಾನಿಗಳ ತಂಡವು ಇಂತಹ ಅಧ್ಯಯನವನ್ನು ನಡೆಸಲೇ ಇಲ್ಲ. ಬದಲಿಗೆ 2022ರ ಆಗಸ್ಟ್‌ನಲ್ಲಿ ಎನ್ವಿರಾನ್ಮೆಂಟಲ್ ರಿಲೀಸ್‌ಗೆ ಅನುಮತಿ ಕೋರಿ ಮತ್ತೆ ಅರ್ಜಿ ಸಲ್ಲಿಸಿತ್ತು. ಅರ್ಜಿಯಲ್ಲಿ, 'ಕುಲಾಂತರಿ ಸಾಸಿವೆಯಿಂದ ಜೇನುನೊಣಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅಮೆರಿಕ, ಆಸ್ಟ್ರೇಲಿಯ ಸೇರಿ ಹಲವು ದೇಶಗಳಲ್ಲಿ ಈಗಾಗಲೇ ಅಧ್ಯಯನಗಳು ನಡೆದಿವೆ. ಅಲ್ಲದೆ, 2010-15ರ ಮಧ್ಯೆ ನಾವೇ ನಡೆಸಿದ ಅಧ್ಯಯನದಲ್ಲೂ ಜೇನುನೊಣಗಳ ಮೇಲೆ ಗಣನೀಯ ಪರಿಣಾಮ ಬೀರುವುದಿಲ್ಲ ಎಂಬುದು ಪತ್ತೆಯಾಗಿದೆ. ಹೀಗಾಗಿ ಮತ್ತೆ ಅಧ್ಯಯನದ ಅವಶ್ಯಕತೆ ಇಲ್ಲ' ಎಂದು ಪ್ರತಿಪಾದಿಸಿತ್ತು. 2018ರಿಂದ 2022ರ ಮಧ್ಯೆ ಯಾವುದೇ ಅಧ್ಯಯನ ನಡೆಸದೆಯೇ ಮತ್ತೆ ಅರ್ಜಿ ಸಲ್ಲಿಸಲಾಗಿತ್ತು. ವಿಜ್ಞಾನಿಗಳ ಈ ಪ್ರತಿಪಾದನೆಯನ್ನು ಒಪ್ಪದ ಜಿಇಎಸಿ, ಈ ಪ್ರತಿಪಾದನೆಯ ಪರಿಶೀಲನೆಗೆ ತಜ್ಞರ ಸಮಿತಿ ರಚಿಸಿತ್ತು.

ತಜ್ಞರ ಸಮಿತಿಯು ಜಿಇಎಸಿಗೆ ಸಲ್ಲಿಸಿದ ವರದಿಯಲ್ಲಿ, 'ಬೇರೆ ದೇಶಗಳಲ್ಲಿ ನಡೆದ ಅಧ್ಯಯನಗಳನ್ನು ಪರಿಗಣಿಸಬಹುದಾದರೂ, ಭಾರತದ್ದೇ ಪರಿಸರದಲ್ಲಿ ಮತ್ತು ಸ್ಥಳೀಯ ಪರಿಸ್ಥಿತಿಗಳಲ್ಲಿ ಜೇನುನೊಣಗಳ ಮೇಲೆ ಅಧ್ಯಯನ ನಡೆಸಬಹುದು' ಎಂದು ಅಭಿಪ್ರಾಯಪಟ್ಟಿದೆ. ಆದರೆ, ಅಧ್ಯಯನ ನಡೆಸಲೇಬೇಕು ಎಂದು ಹೇಳಿಲ್ಲ. ಬದಲಿಗೆ ಎನ್ವಿರಾನ್ಮೆಂಟಲ್ ರಿಲೀಸ್‌ಗೆ ಅನುಮತಿ ನೀಡಬಹುದು ಎಂದು ಶಿಫಾರಸು ಮಾಡಲಾಗಿದೆ. ಜೇನುನೊಣಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ವಿಸ್ತೃತ ಅಧ್ಯಯನದ ಕೊರತೆ ಇದ್ದರೂ, ಅದನ್ನು ನಿರ್ಲಕ್ಷಿಸಲಾಗಿದೆ.

2010-15ರ ಮಧ್ಯೆ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ಮೂರು ಅಧ್ಯಯನ ವರದಿಗಳ ಪ್ರಕಾರ, ಜೇನುನೊಣಗಳ ಮೇಲೆ ಆಗುವ ಪರಿಣಾಮವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಗುತ್ತದೆ. ಅಕ್ಕಪಕ್ಕದ ರಾಜ್ಯಗಳಲ್ಲೇ ದೊಡ್ಡ ಪ್ರಮಾಣದ ವ್ಯತ್ಯಾಸವಿದೆ. ಹೀಗಿದ್ದಾಗ ದೂರದ ಅಮೆರಿಕ ಮತ್ತು ಆಸ್ಟ್ರೇಲಿಯಾದಲ್ಲಿ ನಡೆದ ಅಧ್ಯಯನ ವರದಿಗಳನ್ನು ಸಾರಾಸಗಟಾಗಿ ಭಾರತದ ಪರಿಸರಕ್ಕೆ ಅನ್ವಯ ಮಾಡುವುದು ಅಪಾಯಕಾರಿ. ಈ ಅಪಾಯವನ್ನು ವಿಜ್ಞಾನಿಗಳ ತಂಡ, ತಜ್ಞರ ಸಮಿತಿ ಮತ್ತು ಜಿಇಎಸಿ ಸಹ ನಿರ್ಲಕ್ಷಿಸಿವೆ. ಎನ್ವಿರಾನ್ಮೆಂಟ್ ರಿಲೀಸ್ ಅಧ್ಯಯನ ಮತ್ತು ಜೇನುನೊಣಗಳ ಮೇಲೆ ಆಗುವ ಪರಿಣಾಮ ಕುರಿತ ಅಧ್ಯಯನವನ್ನು ಏಕಕಾಲದಲ್ಲಿ ನಡೆಸುವಂತೆ ವಿಜ್ಞಾನಿಗಳ ತಂಡಕ್ಕೆ ಜಿಇಎಸಿ ಮತ್ತೆ ಸೂಚಿಸಿದೆ.

ಅನುಮತಿ ರದ್ದುಪಡಿಸಲು ಆಗ್ರಹ

ಕುಲಾಂತರಿ ಸಾಸಿವೆಯ 'ಎನ್ವಿರಾನ್ಮೆಂಟಲ್ ರಿಲೀಸ್'ಗೆ ಅನುಮತಿ ನೀಡುವಲ್ಲಿ ಹಲವು ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ವಿಜ್ಞಾನಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿಜ್ಞಾನಿಗಳ ಪ್ರಮುಖ ಆಕ್ಷೇಪಗಳು:

- ಅನುಮತಿ ನೀಡುವ ಮುನ್ನ ಸರ್ಕಾರದ ಸಂಸ್ಥೆಗಳ ಹೊರತಾಗಿ, ಸ್ವತಂತ್ರ ಸಂಸ್ಥೆ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡಿಲ್ಲ
- ಕೆಲವೇ ತಳಿಗಳ ಜತೆಗೆ ಹೋಲಿಸಿ ಕುಲಾಂತರಿ ಸಾಸಿವೆಯ ಇಳುವರಿ ಹೆಚ್ಚು ಎಂದು ಹೇಳಲಾಗಿದೆ. ಆದರೆ, ಅದಕ್ಕಿಂತಲೂ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಭಾರತದಲ್ಲಿ ಬೆಳೆಯಲಾಗುತ್ತಿದೆ. ಅವುಗಳನ್ನು ಅಧ್ಯಯನಕ್ಕೆ ಪರಿಗಣಿಸಿಲ್ಲ
- ಈ ಸಾಸಿವೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆ ವಿಸ್ತೃತ ಅಧ್ಯಯನ ನಡೆಸಿಲ್ಲ. ಜೇನುನೊಣಗಳ ಮೇಲೆ ಆಗುವ ಪರಿಣಾಮವನ್ನು ಕಡೆಗಣಿಸಲಾಗಿದೆ

ಸರ್ಕಾರದ ಸಮರ್ಥನೆ

- ಕುಲಾಂತರಿ ಸಾಸಿವೆಗೆ ಸಂಬಂಧಿಸಿದ ಅಧ್ಯಯನ ವರದಿಯನ್ನು 2016ರಲ್ಲೇ ಸಂಬಂಧಿತ ಸಂಸ್ಥೆ ಮತ್ತು ಪರಿಸರ ಸಚಿವಾಲಯದ ಜಾಲತಾಣಗಳಲ್ಲಿ ಬಿಡುಗಡೆ ಮಾಡಲಾಗಿತ್ತು. ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿತ್ತು. ಬಂದ ಅಭಿಪ್ರಾಯಗಳನ್ನು ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಕೆಲವು ವಿಜ್ಞಾನಿಗಳು ಮಾಡಿರುವ ಆರೋಪದಲ್ಲಿ ಹುರುಳಿಲ್ಲ
- ಕುಲಾಂತರಿ ಸಾಸಿವೆಯನ್ನು 30ಕ್ಕೂ ಹೆಚ್ಚು ದೇಶಗಳಲ್ಲಿ ಬೆಳೆಯಲಾಗುತ್ತಿದೆ. ಕುಲಾಂತರಿ ಸಾಸಿವೆಯು ಹೆಚ್ಚು ಇಳುವರಿ ನೀಡುತ್ತದೆ ಎಂಬುದು ಸಾಬೀತಾಗಿದೆ
- ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಈಗಾಗಲೇ ವಿಸ್ತೃತ ಅಧ್ಯಯನ ನಡೆದಿದೆ. ಜೇನುನೊಣಗಳ ಮೇಲೆ ಆಗುವ ಪರಿಣಾಮದ ಬಗ್ಗೆ ಮತ್ತೆ ಅಧ್ಯಯನ ನಡೆಸಲು ಸೂಚಿಸಲಾಗಿದೆ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಮಕ್ಕಳಿಗೆ ಶಾಲೆಯಲ್ಲಿ ಸಾತ್ವಿಕ ಆಹಾರ ನೀಡಬೇಕು ಎನ್ನುವ ಮಠಾಧೀಶರ ಸಲಹೆಯನ್ನು ಒಪ್ಪಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಆಧಾರ್ ಸುರಕ್ಷಿತ ಬಳಕೆಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಆಧಾರ್ ಗುರುತಿನ ಚೀಟಿಯನ್ನು ಗುರುತು ದೃಢೀಕರಣಕ್ಕಾಗಿ ಪಡೆಯುವ ಸಂಸ್ಥೆಗಳಿಗೆ (ಒವಿಎಸ್‌ಇ) ಕೆಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಆಧಾರ್ ಬಳಕೆದಾರರ ಮಟ್ಟದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳು ಹಾಗೂ ಅವರ ವಿಶ್ವಾಸ ಹೆಚ್ಚಿಸುವ ಮಾರ್ಗಗಳನ್ನು ಇದು ಒಳಗೊಂಡಿವೆ.



ಆಧಾರ್ ಕಾರ್ಡ್ ಬಳಕೆದಾರರ ಸ್ಪಷ್ಟ ಒಪ್ಪಿಗೆಯ ನಂತರವೇ ಅವರ ಕಾರ್ಡ್ ಅನ್ನು ಸಂಸ್ಥೆಗಳು ಗುರುತು ದೃಢೀಕರಣಕ್ಕೆ ಬಳಸಬೇಕು. ಭೌತಿಕ ಪರಿಶೀಲನೆ ವೇಳೆ, ಕಾರ್ಡ್‌ನ ಬಳಕೆದಾರರಿಗೆ ಅದರ ಸುರಕ್ಷತೆ ಹಾಗೂ ಗೋಪ್ಯತೆಯನ್ನು ಕಾಪಾಡುವ ಭರವಸೆ ನೀಡುವ ಸೌಜನ್ಯ ತೋರಬೇಕು ಎಂದು ಯುಐಡಿಎಐ ಮಾರ್ಗಸೂಚಿಯಲ್ಲಿ ತಿಳಿಸಿದೆ.

ಪರಿಶೀಲನೆಗೆ ಬಳಕೆದಾರರು ನೀಡಿದ ಒಪ್ಪಿಗೆಯನ್ನು ಸುರಕ್ಷಿತವಾಗಿ ಇರಿಸಿಕೊಳ್ಳಬೇಕು. ಯುಐಡಿಎಐ ಅಥವಾ ಇತರೆ ಸಂಸ್ಥೆಗಳು ಮುಂದಿನ ದಿನಗಳಲ್ಲಿ ಪರಿಶೋಧನೆ (ಆಡಿಟ್) ನಡೆಸುವಾಗ, ಈ ದಾಖಲೆಗಳನ್ನು ಒದಗಿಸಬೇಕು. ಭೌತಿಕ ರೂಪದಲ್ಲಿ ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿ ಆಧಾರ್ ದಾಖಲೆಯನ್ನು ಪಡೆದುಕೊಳ್ಳುವ ಬದಲು, ಆಧಾರ್ ಪತ್ರದಲ್ಲಿರುವ (ಇ-ಆಧಾರ್, ಎಂ-ಆಧಾರ್ ಅಥವಾ ಪಿವಿಸಿ ಕಾರ್ಡ್ ರೂಪದಲ್ಲಿರುವ ಆಧಾರ್) ಕ್ಯೂಆರ್ ಕೋಡ್ ಬಳಸಿಕೊಂಡು, ಗುರುತಿನ ದಾಖಲೆಯನ್ನು ದೃಢಪಡಿಸಿಕೊಳ್ಳಬಹುದು ಎಂದು ತಿಳಿಸಿದೆ.

ಆಧಾರ್ ಆಫ್‌ಲೈನ್ ಪರಿಶೀಲನೆ ಸಾಧ್ಯವಾಗುತ್ತಿಲ್ಲ ಎಂಬ ಕಾರಣಕ್ಕೆ ಸಂಸ್ಥೆಗಳು ಬಳಕೆದಾರರಿಗೆ ಸೇವೆಯನ್ನು ನಿರಾಕರಿಸುವಂತಿಲ್ಲ. ಇದಕ್ಕೆ ಪರ್ಯಾಯ ಮಾರ್ಗಗಳನ್ನು ಸೂಚಿಸಬೇಕು. ಇತರೆ ದಾಖಲೆಗಳ ಮೂಲಕ ಬಳಕೆದಾರರು ತಮ್ಮ ಗುರುತನ್ನು ದೃಢಪಡಿಸಲು ಸಾಧ್ಯವಾಗಬೇಕು. ಸಂಸ್ಥೆಗಳು ಆಫ್‌ಲೈನ್ ವಿಧಾನದಲ್ಲಿ ಆಧಾರ್ ಪರಿಶೀಲನೆ ನಡೆಸಿದ ಬಳಿಕ, ಬಳಕೆದಾರರ ಆಧಾರ್ ಮಾಹಿತಿಯನ್ನು ಸಂಗ್ರಹಿಸಿ ಇಡುವಂತಿಲ್ಲ ಮತ್ತು ಬಳಕೆ ಮಾಡುವಂತಿಲ್ಲ. ಒಂದು ವೇಳೆ ಆಧಾರ್ ದತ್ತಾಂಶವು ಯಾವುದಾದರೂ ಕಾರಣಕ್ಕೆ ಬೇಕಾಗುತ್ತದೆ ಎಂದಾದಲ್ಲಿ, ಮಸುಕಾಗಿಸಿದ ಸ್ವರೂಪದಲ್ಲಿ ಅದರ ಪ್ರತಿಯನ್ನು ಇರಿಸಿಕೊಳ್ಳಬಹುದು ಎಂದು ಮಾರ್ಗಸೂಚಿ ತಿಳಿಸಿದೆ.

ಆಧಾರ್ ಬಳಕೆಗೆ ಆಫ್‌ಲೈನ್‌ನಲ್ಲಿ ನಡೆಯುವ ಪರಿಶೀಲನೆ ಅಥವಾ ಕೆವೈಸಿ ಪ್ರಕ್ರಿಯೆಯು, ಯುಐಡಿಎಐನ ಕೇಂದ್ರೀಯ ಗುರುತು ದತ್ತಾಂಶ ಸರ್ವರ್ ಜತೆ ಸಂಪರ್ಕ ಸಾಧಿಸದೇ, ಸ್ಥಳೀಯವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಸಂಸ್ಥೆಗಳು ಕಾನೂನುಬದ್ಧ ಉದ್ದೇಶಕ್ಕೆ ಮಾತ್ರ ಬಳಕೆದಾರರ ಆಧಾರ್ ಮಾಹಿತಿಯನ್ನು ಪರಿಶೀಲಿಸಬೇಕು ಎಂದು ಮಾರ್ಗಸೂಚಿಗಳು ಉಲ್ಲೇಖಿಸಿವೆ.

ದುರ್ಬಳಕೆ: ಮಾಹಿತಿ ನೀಡುವುದು ಕಡ್ಡಾಯ

ಬಳಕೆದಾರರ ಆಧಾರ್ ಮಾಹಿತಿಯು ದುರ್ಬಳಕೆಯಾಗುತ್ತಿದೆ ಎಂಬುದು ಕಂಡುಬಂದಲ್ಲಿ, ಯುಐಡಿಎಐ ಅಥವಾ ಕಾರ್ಡ್‌ದಾರರಿಗೆ 72 ಗಂಟೆಗಳ ಒಳಗೆ ಸಂಸ್ಥೆಗಳು ಮಾಹಿತಿ ನೀಡಬೇಕು. ಬೇರೊಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಪರವಾಗಿ ಆಧಾರ್ ಬಳಕೆದಾರರ ಮಾಹಿತಿಯನ್ನು ಸಂಸ್ಥೆಯವರು ಪರಿಶೀಲನೆ ನಡೆಸುವಂತಿಲ್ಲ. ದುರ್ಬಳಕೆಗೆ ಸಂಬಂಧಪಟ್ಟಂತೆ ಯುಐಡಿಎಐ ಅಥವಾ ತನಿಖಾ ಸಂಸ್ಥೆಗಳು ನಡೆಸುವ ತನಿಖೆಗೆ ಸಂಸ್ಥೆಗಳು ಸಂಪೂರ್ಣ ಸಹಕಾರ ನೀಡಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

'ಭಾರತ್ ಜೋಡೊ' ಯಾತ್ರೆಯ ವೇಳೆ ಹರಿಯಾಣದ ಹೋಟೆಲ್‌ನಲ್ಲಿ ರಾಹುಲ್ ಗಾಂಧಿ ಇರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಚರ್ಚೆಗೆ ಗ್ರಾಸವಾಗಿದೆ. ರಾಹುಲ್ ಮುಂದಿರುವ ಮೇಜಿನ ಮೇಲೆ ಚಿಕನ್ ಹಾಗೂ ಮದ್ಯ ಇರುವುದು ಚಿತ್ರದಲ್ಲಿ ಕಾಣುತ್ತದೆ. 'ತಪಸ್ಸಿನಲ್ಲಿ ಮಗ್ನರಾಗಿದ್ದಾರೆ' ಎಂಬುದಾಗಿ ವ್ಯಂಗ್ಯ ಮಾಡಲಾಗಿದೆ. ಆದರೆ, ಈ ಚಿತ್ರವನ್ನು ತಿರುಚಲಾಗಿದೆ.

ರಾಹುಲ್ ಎದುರುಗಡೆ ದ್ರಾಕ್ಷಿ, ಗೋಡಂಬಿಯ ತಟ್ಟೆ ಹಾಗೂ ಚಹಾ ಕಪ್ ಇರುವ ಮೂಲ ಚಿತ್ರವನ್ನು 'ಇಂಡಿಯಾಟುಡೇ' ಪ್ರಕಟಿಸಿದೆ. ಮದ್ಯದ ಲೋಟ ಹಾಗೂ ಚಿಕನ್ ಚಿತ್ರಗಳನ್ನು ಸೇರಿಸಲಾಗಿದೆ ಎಂದು ವೆಬ್‌ಸೈಟ್ ವರದಿ ಮಾಡಿದೆ. ಅದೇ ದಿನ ರಾಹುಲ್ ಅವರನ್ನು ಭೇಟಿ ಮಾಡಿದ್ದ ಪತ್ರಕರ್ತ ಗುರುದೀಪ್ ವಾಲಿಯಾ, ಕಾಂಗ್ರೆಸ್ ನಾಯಕ ದ್ರಾಕ್ಷಿ, ಗೋಡಂಬಿ ತಿಂದರು ಎಂದು ಟ್ವೀಟ್ ಮಾಡಿದ್ದರು.

ತಿರುಚಿದ ಚಿತ್ರ

ಮೂಲ ಚಿತ್ರ

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 11, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಚತುರ್ಥಿ ಗಂ. 14-32 ನಕ್ಷತ್ರ: ಮಘಾ ಗಂ. 11-50 ಯೋಗ: ಆಯುಷ್ಮಾನ್ ಗಂ. 12-01 ಕರಣ: ಬಾಲವ ಗಂ. 14-32, ಧನುರ್ ಮಾಸದ 26 ನೇ ದಿನ.

ರಾಹುಕಾಲ : ಮಧ್ಯಾಹ್ನ 12-00 -01-30
ಸೂರ್ಯೋದಯ : 07-00 ಸೂರ್ಯಾಸ್ತ : 06-17
ಮುಸ್ಲಿಂ ದಿನಾಂಕ : 18 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 10, 13

ಮೇಷ: ಸಂಸಾರ ತಾಪತ್ರಯಗಳು ನೀಗಿ ಮನಸ್ಸಿಗೆ ಸಮಾಧಾನ ಉಂಟಾಗುತ್ತದೆ. ಕಾನೂನು ವಿಷಯದ ಅಧ್ಯಯನದಲ್ಲಿ ತೊಡಗಿರುವವರಿಗೆ ಶುಭ. ಅನುಭವಿ ಜನರೊಂದಿಗೆ ವ್ಯವಹರಿಸುವುದರಿಂದ ವ್ಯವಹಾರ ವಿಸ್ತರಣೆಗೊಳ್ಳಲಿದೆ.

ವೃಷಭ: ವೃತ್ತಿರಂಗದಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಲಿದ್ದಾರೆ. ಕಾರ್ಮಿಕ ವರ್ಗದವರಲ್ಲಿ ಮೃದುವರ್ತನೆ ತೋರಿದರೆಮಾತ್ರ ನಿಮಗೆ ಲಾಭವಾಗುವುದು. ವಿಷಯಗಳನ್ನು ಗಂಭೀರವಾಗಿ ತೆಗೆದುಕೊಂಡು ಎಚ್ಚರಿಕೆಯಿಂದ ವರ್ತಿಸಿ.

ಮಿಥುನ: ಅಧ್ಯಯನನಿರತರಿಗೆ ಸೂಕ್ತವಾದ ಮಾರ್ಗದರ್ಶನ ಮತ್ತು ಅಧ್ಯಯನಕ್ಕೆ ಬೇಕಾದ ಗ್ರಂಥಗಳು ದೊರೆಯುವುದು. ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ.

ಕರ್ಕಾಟಕ: ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ. ಸಮಾಲೋಚಿಸಿ ಮಾಹಿತಿಗಳನ್ನು ಕಲೆಹಾಕಿ ಅಂತಿಮವಾಗಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಕುಟುಂಬದಲ್ಲಿ ಸೌಖ್ಯ ನೆಮ್ಮದಿ ಇರುವುದು.

ಸಿಂಹ: ಎಲ್ಲಾ ಕೆಲಸ ಕಾರ್ಯಗಳಲ್ಲಿಯೂ ತಾಳ್ಮೆ ಹಾಗೂ ಧೃಡ ನಿರ್ಧಾರ ಅಗತ್ಯವೆನಿಸಲಿದೆ. ದೇವರ ಧ್ಯಾನದಲ್ಲಿ ಕಾಲ ಕಳೆಯುವುದು, ಮಂದಿರಕ್ಕೆ ಹೋಗಿ ದೇವರ ದರ್ಶನ ಮಾಡುವುದು ಶುಭ ಫಲದ ಪ್ರಾಪ್ತಿಗೆ ಉತ್ತಮವಾದ ದಾರಿ.

ಕನ್ಯಾ: ಷೇರಿನ ವ್ಯವಹಾರದಲ್ಲಿ ಹೆಚ್ಚಿನ ಹಣ ಸಂಗ್ರಹವಾದೀತು. ಕೃಷಿಕರಿಗೆ ವರಮಾನ ಹೆಚ್ಚಲಿದೆ. ಮಕ್ಕಳ ಭವಿಷ್ಯದ ಬಗ್ಗೆಯೋಜನೆ ರೂಪಿಸಲು ಸಕಾಲ. ಸಮಾಜ ಸೇವೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಿರಿ.

ತುಲಾ: ಹೊಸ ಹುದ್ದೆಗೆ ಅಭ್ಯರ್ಥಿಯಾಗುವ ಬಯಕೆ ಉಂಟಾಗಲಿದೆ. ಪ್ರಾಮಾಣಿಕತನದಿಂದಾಗಿ ಒಳ್ಳೆಯ ಕೆಲಸವೊಂದು ಅಯಾಚಿತವಾಗಿ ಸಿಗುತ್ತದೆ. ಕಮಿಶನ್ ವ್ಯಾಪಾರದ ವೃತ್ತಿಯಲ್ಲಿರುವವರಿಗೆ ಲಾಭಾಂಶ ವೃದ್ಧಿಯಾಗುವುದು.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಎಚ್ಚರ ವಹಿಸದೆ ಅತಿಯಾದ ವಿಶ್ವಾಸದಿಂದ ಮುಂದುವರಿದರೆ ಅಧಿಕಾರಿ ಜನರಿಂದ ಕಷ್ಟ-ನಷ್ಟಗಳು, ಸ್ಥಾನಮಾನಕ್ಕೆ ಹಾನಿಗಳು ಸಂಭವಿಸಬಹುದು. ಬಂಡವಾಳ ಹೂಡಿಕೆಯಲ್ಲಿ ಲಾಭ.

ಧನು: ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದಿಸುವಿರಿ. ಮೇಲಧಿಕಾರಿವರ್ಗದವರಿಗೆ ಲೆಕ್ಕ ಪತ್ರ ಸಮರ್ಪಕವಾಗಿರುವುದು. ಉದ್ಯೋಗಾಪೇಕ್ಷಿಗಳಿಗೆ ಗುತ್ತಿಗೆ ಆಧಾರಿತ ಉದ್ಯೋಗ ಸಿಗಲಿದೆ.

ಮಕರ: ಋಣಬಾಧೆಯಿಂದ ಮುಕ್ತರಾಗಲು ಹೆಚ್ಚಿನ ಗಮನನೀಡಿ. ಆಸ್ತಿಗೆ ಸಂಬಂಧಿಸಿದಂತೆ ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ನ್ಯಾಯಾಲಯದದ ಮೊರೆ ಹೋಗುವಂತಹ ಕೃತ್ಯಗಳು ನಡೆಯಲಿದೆ.

ಕುಂಭ: ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಸೇರುವ ನಿಮ್ಮ ಆಸಕ್ತಿಗೆ ಇಂದು ಹಾದಿ ದೊರಕುವುದು. ಪಾಲುದಾರಿಕೆಯನ್ನು ಮುಂದುವರೆಸುವ ಯೋಚನೆಯು ಸರಿಯಾಗಿರುವುದು. ಯೋಗಾಭ್ಯಾಸದಿಂದ ಮನಸ್ಸಿಗೆ ಹಿತ.

ಮೀನ: ಅತಿಯಾದ ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ನೆಮ್ಮದಿ ಸಂಪಾದಿಸಬೇಕಾಗುತ್ತದೆ. ಮನೆಯ ನವೀಕರಣಗೊಳಿಸುವ ಕಾರ್ಯಕ್ಕೆ ಕೈ ಹಾಕುವವರು. ವಾಸ್ತುಶಾಸ್ತ್ರದ ವಿಚಾರಗಳ ಬಗ್ಗೆ ಗಮನಕೊಡಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಕ್ತನ ದೃಷ್ಟಿ

ಸುಟ್ಟ ಹಗ್ಗದ ಬೂದಿ ರೂಪಮಾತ್ರದಿ ಹಗ್ಗ |
ಗಟ್ಟಿ ಜಗವಂತು ತತ್ವಜ್ಞಾನ ಸೋಕೆ ||
ತೊಟ್ಟಹುದು ಲೋಕರೂಪವ, ತಾತ್ವಿಕನ ವೃತ್ತಿ |
ಕಟ್ಟದವನಾತ್ಮವನು - ಮಂಕುತಿಮ್ಮ || **797** ||

ಪದ-ಅರ್ಥ: ರೂಪಮಾತ್ರದಿ = ಆಕಾರದಿಂದ ಮಾತ್ರ, ಜಗವಂತು = ಜಗವು + ಅಂತು, ಸೋಕೆ = ಸ್ಪರ್ಶಿಸಿದರೆ, ತೊಟ್ಟಹುದು = ಹಾಕಿಕೊಂಡಿಹುದು, ಕಟ್ಟದವನಾತ್ಮವನು = ಕಟ್ಟದು + ಅವನ + ಆತ್ಮವನು.

ವಾಚ್ಯಾರ್ಥ: ಸುಟ್ಟು ಹೋದ ಹಗ್ಗದ ಬೂದಿ ಮೇಲ್ನೋಟಕ್ಕೆ ಹಗ್ಗದಂತೇ ಕಂಡೀತು. ಹಾಗೆಯೇ ಗಟ್ಟಿಯಾದ ಜಗತ್ತಿನರೂಪವೂ. ತತ್ವಜ್ಞಾನ ಸ್ಪರ್ಶವಾದ ವ್ಯಕ್ತಿಗೆ ಅದರ ನಿಜರೂಪ ಅರ್ಥವಾಗಿ ಜಗತ್ತು ಅವನ ಆತ್ಮವನ್ನು ಕಟ್ಟಲು ವಿಫಲವಾಗುತ್ತದೆ.

ವಿವರಣೆ: ಅಲ್-ಹಲಾಜ್-ಮನ್ಸೂರ್ ಒಬ್ಬ ಬಹುದೊಡ್ಡ ಸೂಫೀ ಸಂತ. ಸದಾಕಾಲ ಭಗವಂತನ ಚಿಂತನೆಯಲ್ಲೇ ಉನ್ಮತ್ತನಾದವನು. ಅವನಿಗೆ ಪ್ರಪಂಚವೇ ಕಾಣುತ್ತಿರಲಿಕ್ಕಿಲ್ಲ. ಎಲ್ಲೆಲ್ಲಿಯೂ ಅವನಿಗೆ ಭಗವಂತನೇ ಕಾಣುತ್ತಿದ್ದ. ಹೀಗಾಗಿ ಸಾಮಾನ್ಯರ ಕಣ್ಣಿಗೆ ಅವನೊಬ್ಬ ಹುಚ್ಚ. ಒಂದು ಬಾರಿ ನವಾಬನೊಬ್ಬ ಅವನನ್ನು ಕೇಳಿದ, "ನಿನ್ನ ದೇವರು ದೊಡ್ಡವನೋ, ನಾನು ದೊಡ್ಡವನೋ?" ಮನ್ಸೂರ್ ಗಹಗಹಿಸಿ ನಕ್ಕ. "ನೀನು ಯಾರು? ಒಂದು ಹುಳ. ಆ ಭಗವಂತನ ಕೃಪೆಯಿಂದ ಅಲ್ಲಿ ಕುಳಿತಿದ್ದೀ. ಆತ ಕ್ಷಣಮಾತ್ರದಲ್ಲಿ ನಿನ್ನನ್ನು ಭಸ್ಮ ಮಾಡಬಲ್ಲ" ಎಂದ. ಸೊಕ್ಕಿನ ನವಾಬನಿಗೆ ಅವಮಾನವಾಗದಿರುತ್ತದೆಯೇ? ತಕ್ಷಣ ತನ್ನ ಸೈನಿಕರಿಗೆ ಹೇಳಿದ, "ನನಗಿಂತ ದೇವರು ದೊಡ್ಡವನು ಎನ್ನುವ ಈ ಮೂರ್ಖನನ್ನು ಬಜಾರಿನ ಚೌಕದಲ್ಲಿ ನಿಲ್ಲಿಸಿ ತುಂಡು ತುಂಡಾಗಿ ಕೊಂದುಬಿಡಿ. ನಾನು ಯಾರೆಂಬುದು ಲೋಕಕ್ಕೆ ತಿಳಿಯಲಿ". ಸೈನಿಕರು ಮನ್ಸೂರ್‌ನನ್ನು ಬಜಾರಿನ ಚೌಕಕ್ಕೆ ಕರೆದೊಯ್ದರು. ಮೊದಲು ಅವನ ಒಂದು ಕೈಯನ್ನು ಕತ್ತರಿಸಿದರು. ಮನ್ಸೂರ್ ನಗುತ್ತಲೇ ಇದ್ದಾನೆ! ಎರಡನೆಯ ಕೈ ಕತ್ತರಿಸಿದರು. ಅವನ ನಗು ಹೆಚ್ಚಾಯಿತು. ಮುಂದೆ ಒಂದೊಂದೇ ಕಾಲು ಕತ್ತರಿಸಿದರು. ಅವನ ಅಬ್ಬರದ ನಗೆ ಕಡಿಮೆಯಾಗಲಿಲ್ಲ. ಕೂಗಿ ಹೇಳಿದ, "ಮೂರ್ಖ ನವಾಬ, ನಾನು ದೇಹ ಎಂದು ಭಾವಿಸಿದ್ದಾನೆ. ನನ್ನನ್ನು ನಿಜವಾಗಿ ಹಿಡಿಯಲು, ಕತ್ತರಿಸಲು ಯಾರಿಂದಲೂ ಸಾಧ್ಯವಿಲ್ಲ. ಈ ಪ್ರಪಂಚ ಒಂದು ಕನಸು. ನಾನೀಗ ಕನಸನ್ನು ಕಳೆದುಕೊಂಡು ಶಾಶ್ವತವಾದ ಪರಮಾತ್ಮನನ್ನೇ ಸೇರುತ್ತೇನೆ. ಅದನ್ನು ಆಗ ಮಾಡಿದ ನವಾಬನಿಗೆ ನನ್ನ ಕೃತಜ್ಞತೆಗಳು" ಹೀಗೆ ನುಡಿದ ಮನ್ಸೂರ್ ದೇಹತ್ಯಾಗ ಮಾಡಿದ. ಪ್ರಪಂಚವನ್ನು ಕನಸೆಂದು ಭಾವಿಸಿದ ಮನ್ಸೂರ್ ಜಗತ್ತಿನಲ್ಲಿ ಇರಲಿಲ್ಲವೇ? ಎಲ್ಲರಂತೆಯೇ ಅವನೂ ಇದ್ದ. ಪ್ರಪಂಚವನ್ನು ನೋಡಿದ, ಅನುಭವಿಸಿದ, ಸಂತೋಷಪಟ್ಟ. ಆದರೆ ವ್ಯತ್ಯಾಸವೆಂದರೆ, ಉಳಿದವರಂತೆ ಅದಕ್ಕೆ ಅಂಟಿಕೊಂಡು, ಮೋಹವನ್ನು ಬೆಳೆಸಿಕೊಳ್ಳದೆ, ಅದೊಂದು ಸುಂದರ ಕನಸು ಎಂಬುದನ್ನು ತಿಳಿದಿದ್ದ. ಅದಕ್ಕೇ ಅವನಿಗೆ ಬಂಧನಗಳಿರಲಿಲ್ಲ. ಕಗ್ಗದ ಮಾತು ಇದೇ. ಹಗ್ಗವನ್ನು ಸುಟ್ಟು, ಅದನ್ನು ಮುಟ್ಟದಿದ್ದರೆ ಅದರ ಬೂದಿ ಕೂಡ ದೂರದಿಂದ ಹಗ್ಗದಂತೆಯೇ ಕಾಣುತ್ತದೆ. ಆದರೆ ಹತ್ತಿರ ಹೋಗಿ ಮುಟ್ಟದವನಿಗೆ ಮಾತ್ರ ಅದು ಬೂದಿ ಎಂಬುದು ತಿಳಿದೀತು. ಹಾಗೆಯೇ ತನ್ನಾತ್ಮದ ಸ್ವರೂಪವನ್ನು ಅನುಭವದ ಮೂಲಕ ತಿಳಿದವನಿಗೆ ಮಾತ್ರ ಮುಕ್ತಿ. ಆಗ ಅವನಿಗೆ ಸೆರೆಮನೆಯೂ ಒಂದೇ, ಅರಮನೆಯೂ ಒಂದೇ. ಗೀತೆ ಹೇಳುವಂತೆ, "ಆತ್ಮನ್ಯೇವ ಚ ಸಂತುಷ್ಟ. ತಸ್ಯ ಕಾರ್ಯಂ ನ ವಿದ್ಯತೇ", ಆತ್ಮನಲ್ಲೇ ಸಂತುಷ್ಟನಾಗಿರುವವನಿಗೆ ಮಾಡಬೇಕಾದ ಯಾವ ಕೆಲಸವೂ ಇರುವುದಿಲ್ಲ. ಯಾವ ಕರ್ತವ್ಯವೂ, ಬಂಧನವೂ ಅವನನ್ನು ಕಟ್ಟಿ ಹಾಕಲಾರದು.

ಪದಬಂಧ 5196

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಾದಕ ವಸ್ತು ಸೇವನೆಯಿಂದಾಗುವ ಜೊಂಪು (2)
3. ಧಾನ್ಯಗಳನ್ನು ಕುಟ್ಟುವ ಸಾಧನ (3)
6. ಕುದುರೆಯನ್ನೇರುವ ಬಳೆ (3)
8. ಆಸ್ಪತ್ರೆಯನ್ನು ಹೀಗೂ ಹೇಳುವರು (4)
10. ಅಗ್ರಗಣ್ಯರೆಲ್ಲಾ ಪ್ರವೇಶಿದ ಕಾಡು (3)
11. ಹೆಚ್ಚಳವಾದುದನ್ನು ಹೀಗೆನ್ನಿ (3)
12. ನರಕಾಧಿಪತಿಯ ಕಿಂಕರ (4)
15. ಪಟ ತೋರಿಸಿ ಮಾಡಿರುವ ಮೋಸ (3)
17. ಈತ ವಿಷಯಾಸಕ್ತ (3)
18. ಜರೂರಾಗಿ ಹಾಕಿಸಿಕೊಂಡಿರುವ ಸಹಿ (2)

ಮೇಲಿಂದ ಕೆಳಕ್ಕೆ

2. ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
3. ನೆನಪು ಮಾಡಿಕೊಂಡು ತೋರುವ ವಯ್ಯಾರ (3)
4. ಮಣ್ಣು ಮಿಶ್ರಿತ ನೀರು (3)
5. ಕುಲದೊಳಗಿನ ವಂಚನೆ ಕಾಣುತ್ತಿದೆಯೇ (3)
7. ಕಾರು ಇದ್ದರಷ್ಟೇ ಈ ದಯೆ! (3)
9. ಯಮನ ಬಳಿಯಿರುವ ಜೋಡಿ (3)
10. ದಶಮ ಗ್ರಹ ಎನಿಸಿಕೊಂಡವ (3)
11. ಸ್ಲೇಟಿನ ಮೇಲೆ ಬರೆಯುವ ಸಾಧನ (3)
13. ವಿಶಾಲವಾದ ಕಟ್ಟಡ (3)
14. ಭಾಸ್ಕರ ಹುಟ್ಟಿರುವಾಗ ಕಾಣಿಸಿದ ಕಳ್ಳ (3)
15. ಕಲೆಸಿದ ಗೋಧಿ ಹಿಟ್ಟು (3)
16. ಗುರುಗುಟ್ಟುತ್ತಿರುವ ಗಂಡು ಕುರಿ (3)



5195ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಮ 3.ಅಧರ
4.ರಮಡೋಲು
6.ನೆನಪು 8.ಕಮಾನು
9.ಕಶೇರು 10.ಗಡಸು
13.ಕ್ಷಮಾದಾನ
15.ಕನಲು 16.ಗುಣಾಕಾರ

ಮೇಲಿಂದ ಕೆಳಕ್ಕೆ:
1.ಅರಮನೆ 2.ಮರ
3.ಅಲ್ಪಜ್ಞ 5.ಲುಕ್ಸಾನು
7.ಪುಲ್ಲಿಂಗ 9.ಕಟಾಕ್ಷ
11.ಸುಧಾಕರ 12.ತೊಗಲು
14.ನಗು

ಸುಡೊಕು 5582

7				1			8	
	3	6	8		9	5	1	7
4			7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

5581 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು 631



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18101
ಇಂದಿನ ಅಂತ್ಯ	17914
▼	187
ದಿನದ ಕನಿಷ್ಠ	18127

ಕೊಬ್ಬರಿ ಧಾರಣೆ

ಅರಸೀಕೆರೆ	₹11075-11220
ಕೆ.ಆರ್.ಪೇಟೆ (ಇತರ)	₹8308-8350
ತುರುವೇಕೆರೆ	₹11200-11200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	-

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610(1610)
ಸೋಯಾ (ರಿಫೈನ್ಡ್)	₹1245(1260)
ಸೂರ್ಯಕಾಂತಿ (ರಿಫೈನ್ಡ್)	₹1300(1300)
ಪಾಮೋಲಿನ್	₹940(948)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-1700
ಮಧ್ಯಮ	₹1000-1200
ಸಣ್ಣ	₹500-700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹134.50
ಆರ್‌ಎಸ್‌ಎಸ್-5	₹128
ಗುಡ್ ಲಾಟ್	₹122

ಮ್ಯೂಚುವಲ್ ಫಂಡ್ ನಿರ್ವಹಣಾ ಆಸ್ತಿ ಏರಿಕೆ

ನವದೆಹಲಿ (ಪಿಟಿಐ): ದೇಶದ ಮ್ಯೂಚುವಲ್ ಫಂಡ್ ಉದ್ಯಮವು ನಿರ್ವಹಿಸುವ ಆಸ್ತಿಯ ಮೊತ್ತವು 2022ರಲ್ಲಿ ₹ 2.2 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಹೂಡಿಕೆದಾರರು ಎಸ್‌ಐಪಿ ಮೂಲಕ ನಿರಂತರವಾಗಿ ಹೂಡಿಕೆ ಮಾಡುತ್ತಿರುವುದು ಇದಕ್ಕೆ ಪ್ರಮುಖ ಕಾರಣ. ಮ್ಯೂಚುವಲ್ ಫಂಡ್ ಉದ್ಯಮ ನಿರ್ವಹಿಸುತ್ತಿರುವ ಆಸ್ತಿಯ ಒಟ್ಟು ಮೌಲ್ಯವು ಈಗ ₹ 39.88 ಲಕ್ಷ ಕೋಟಿಗೆ ಏರಿಕೆ ಕಂಡಿದೆ ಎಂದು ದೇಶದ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

1st Year SHRADHANJALI of

Sri. T. V. Maruthi
Founder
Shantala Silks & Sarees

14 ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಪಿ.ಎಸ್. ಮುನಿರೆಡ್ಡಿ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ ಶ್ರೀಮತಿ ರತ್ನಮ್ಮ
ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಧಾನಿ ನರೇಂದ್ರ ಮೋದಿ ಅವರು 'ಪ್ರವಾಸಿ ಭಾರತೀಯ ದಿವಸ್ ವಸ್ತುಪ್ರದರ್ಶನ' ಉದ್ಘಾಟಿಸಿದರು.

ವಸ್ತುಪ್ರದರ್ಶನ ಉದ್ಘಾಟಿಸಿದ ಪ್ರಧಾನಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿ ಸೋಮವಾರ ನಡೆದ ಪ್ರವಾಸಿ ಭಾರತೀಯ ದಿವಸ್ ಕಾರ್ಯಕ್ರಮದಲ್ಲಿ 'ಪ್ರವಾಸಿ ಭಾರತೀಯ ದಿವಸ್ ವಸ್ತುಪ್ರದರ್ಶನ'ವನ್ನು ಉದ್ಘಾಟಿಸಿದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವ – ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅನಿವಾಸಿ ಭಾರತೀಯರ ಕೊಡುಗೆ' ಎಂಬುದು ಡಿಜಿಟಲ್ ವಸ್ತುಪ್ರದರ್ಶನದ ಮುಖ್ಯ ಅಂಶ. ಈ ಬಗೆಯ ವಸ್ತುಪ್ರದರ್ಶನ ಆಯೋಜನೆ ಆಗಿರುವುದು ಇದೇ ಮೊದಲು ಎನ್ನಲಾಗಿದೆ.

ಈ ವಸ್ತುಪ್ರದರ್ಶನದಲ್ಲಿ, ಅನಿವಾಸಿ ಭಾರತೀಯರು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯನ್ನು ಬಹಳ ಸ್ಪಷ್ಟವಾಗಿ ತೋರಿಸಲಾಗಿದೆ ಎಂದು ಪ್ರಧಾನಿ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು -	490

ಅಡಿಕೆ

ಬಂಟ್ವಾಳ	
ಕೋಕ	12,500-25,000
ಹೊಸತು	22,500-39,000
ಹಳತು	48,000-54,500
ಚನ್ನಗಿರಿ	
ರಾಶಿ	45,099-47,272
ಕಾರ್ಕಳ	
ಹೊಸತು	30,000-39,000
ಹಳತು	40,000-54,500
ಕುಂದಾಪುರ	
ಹಳೆಚಾಲಿ	40,000-49,500
ಹೊಸಚಾಲಿ	30,000-37,500
ಮಡಿಕೇರಿ	
ಹಸಿ	42,499-42,499
ಪುತ್ತೂರು	
ಹೊಸತು	33,000-39,000
ಶಿವಮೊಗ್ಗ	
ಬೆಟ್ಟೆ	46,569-53,599
ಗೊರಬಲು	17,001-36,200
ರಾಶಿ	40,016-47,200
ಸರಕು	51,030-79,640
ಶಿರಸಿ	
ಬೆಟ್ಟೆ	37,899-44,899
ಬಿಳಿಗೋಟು	21,899-37,699
ಚಾಲಿ	34,399-44,081
ಕೆಂಪುಗೋಟು	23,199-37,989
ರಾಶಿ	37,289-46,499
ಸಿದ್ದಾಪುರ	
ಬಿಳಿಗೋಟು	29,019-33,499
ಚಾಲಿ	39,129-42,609
ಕೋಕ	28,119-31,399
ಹೊಸಚಾಲಿ	33,099-35,109
ಕೆಂಪುಗೋಟು	31,099-32,809
ರಾಶಿ	43,419-46,599
ತಟ್ಟಿಬೆಟ್ಟೆ	38,869-44,099
ಯಲ್ಲಾಪುರ	
ಆಪಿ	54,765-57,879
ಬಿಳಿಗೋಟು	24,899-35,899
ಕೋಕ	16,061-30,899
ಹಳೆಚಾಲಿ	36,491-43,299
ಹೊಸಚಾಲಿ	33,012-35,649
ಕೆಂಪುಗೋಟು	27,199-35,100
ರಾಶಿ	45,479-53,019
ತಟ್ಟಿಬೆಟ್ಟೆ	37,599-44,899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13750	13700	13700	158.05 ಸೆಂಟ್ಸ್
ಎಸಿ	6720	6800	6000	
ಆರ್‌ಪಿ	8000	8400	7925	ಲಂಡನ್
ಆರ್‌ಸಿ	4530	160	4200	1863 ಡಾಲರ್ಸ್

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಗೂಗಲ್ ಆತಂಕ

ಸ್ಪರ್ಧಾ ಆಯೋಗದ ಆದೇಶದಿಂದ ಆ್ಯಂಡ್ರಾಯ್ಡ್ ಬೆಳವಣಿಗೆ ಸ್ಥಗಿತ

ನವದೆಹಲಿ (ರಾಯಿಟರ್ಸ್): ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯನ್ನು ಮಾರಾಟ ಮಾಡುತ್ತಿರುವ ರೀತಿಯನ್ನು ಬದಲಾಯಿಸಿಕೊಳ್ಳಬೇಕು ಎಂದು ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿರುವ ಆದೇಶದ ಕಾರಣದಿಂದಾಗಿ ಭಾರತದಲ್ಲಿ ಈ ಕಾರ್ಯಾಚರಣೆ ವ್ಯವಸ್ಥೆಯ ಬೆಳವಣಿಗೆಯು ಸ್ಥಗಿತಗೊಳ್ಳುವ ಸ್ಥಿತಿ ಎದುರಾಗಿದೆ ಎಂದು ಗೂಗಲ್ ಹೇಳಿದೆ. ಈ ಮಾತನ್ನು ಗೂಗಲ್ ಕಂಪನಿಯು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿದೆ.

ಸಿಸಿಐ 2022ರ ಅಕ್ಟೋಬರ್‌ನಲ್ಲಿ ಗೂಗಲ್ ಕಂಪನಿಗೆ ₹ 1,314 ಕೋಟಿ ದಂಡ ಪಾವತಿಸುವಂತೆ ಆದೇಶಿಸಿದೆ. ಆ್ಯಂಡ್ರಾಯ್ಡ್ ಮೂಲಕ ತಾನು ಹೊಂದಿರುವ ಪ್ರಭಾವಿ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡಿದ್ದಕ್ಕೆ ಕಂಪನಿ ಈ ದಂಡ ಪಾವತಿಸಬೇಕು ಎಂದು ಸಿಸಿಐ ಹೇಳಿದೆ. ಸ್ಮಾರ್ಟ್‌ಫೋನ್ ತಯಾರಕರು ಯಾವ ಆ್ಯಪ್‌ಗಳನ್ನು ಫೋನ್‌ನಲ್ಲಿ ಮೊದಲೇ ಅಳವಡಿಸಬಹುದು ಎಂಬ ವಿಚಾರವಾಗಿ ಇರುವ ನಿರ್ಬಂಧಗಳನ್ನು ಬದಲಾಯಿಸುವಂತೆಯೂ ಸೂಚಿಸಿದೆ.

ಸೂಚನೆಗಳನ್ನು ಜಾರಿಗೆ ತರಬೇಕು ಎಂದಾದರೆ ಈಗಾಗಲೇ ಜಾರಿಯಲ್ಲಿರುವ ಪರವಾನಗಿ ಒಪ್ಪಂದಗಳನ್ನು ಬದಲಾಯಿಸಬೇಕಾಗುತ್ತದೆ, 1,100ಕ್ಕೂ ಹೆಚ್ಚಿನ ತಯಾರಕರ ಜೊತೆ ಇರುವ ಒಪ್ಪಂದವನ್ನು ಬದಲಾಯಿಸಬೇಕಾಗುತ್ತದೆ, ಆ್ಯಪ್ ಅಭಿವೃದ್ಧಿಪಡಿಸುವವರ ಜೊತೆಗಿನ ಒಪ್ಪಂದಗಳಲ್ಲಿಯೂ ಬದಲಾವಣೆ ತರಬೇಕಾಗುತ್ತದೆ ಎಂದು ಗೂಗಲ್ ವಿವರಿಸಿದೆ. ಸಿಸಿಐ ಆದೇಶವನ್ನು ಗೂಗಲ್ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

'ಕಳೆದ 14–15 ವರ್ಷಗಳಿಂದ ಚಾಲ್ತಿಯಲ್ಲಿ ಇರುವ ಆ್ಯಂಡ್ರಾಯ್ಡ್ ವೇದಿಕೆಯಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ' ಎಂದು ಗೂಗಲ್ ಹೇಳಿದೆ.

ಮುಖ್ಯಾಂಶಗಳು

- ಗೂಗಲ್‌ಗೆ ದಂಡ ವಿಧಿಸಿದ್ದ ಸಿಸಿಐ
- ಆ್ಯಪ್ ತೆಗೆಯಲು ನಿರ್ಬಂಧ ಸಲ್ಲದು ಎಂದಿದ್ದ ಆಯೋಗ

ಸ್ಮಾರ್ಟ್‌ಫೋನ್ ತಯಾರಕರು ತನ್ನ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯನ್ನು ಬಳಸಲು ಗೂಗಲ್ ಅನುಮತಿ ನೀಡುತ್ತದೆ. ಆದರೆ, ತಾನು ಅಭಿವೃದ್ಧಿಪಡಿಸಿದ ಆ್ಯಪ್‌ಗಳನ್ನು ತಯಾರಕರು ಸ್ಮಾರ್ಟ್‌ಫೋನ್‌ಗಳಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂಬ ನಿರ್ಬಂಧಗಳನ್ನು ಗೂಗಲ್ ವಿಧಿಸುವುದು ಸ್ಪರ್ಧಾತ್ಮಕತೆಯ ವಿರೋಧಿ ಧೋರಣೆ ಎಂಬ ಟೀಕೆ ಇದೆ. ಆದರೆ, ಈ ನಿರ್ಬಂಧಗಳ ಕಾರಣದಿಂದಾಗಿ ಆ್ಯಂಡ್ರಾಯ್ಡ್ ಮುಕ್ತವಾಗಿ ಲಭ್ಯವಾಗುವಂತೆ ಆಗಿದೆ ಎಂದು ಗೂಗಲ್ ವಾದಿಸುತ್ತಿದೆ.

ಈಗಿರುವ ನಿಯಮಗಳ ಪ್ರಕಾರ ಗೂಗಲ್‌ನ ಆ್ಯಪ್‌ಗಳಾದ ಯೂಟ್ಯೂಬ್, ಮ್ಯಾಪ್ಸ್‌ಅನ್ನು ಫೋನ್‌ನಿಂದ ತೆಗೆದು ಹಾಕಲು ಬಳಕೆದಾರರಿಗೆ ಅವಕಾಶವಿಲ್ಲ. ಆದರೆ, ಈ ಬಗೆಯ ನಿರ್ಬಂಧ ಹೇರಬಾರದು ಎಂದು ಸಿಸಿಐ ಗೂಗಲ್‌ಗೆ ಹೇಳಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜಶೇಖರ ಹೆಬ್ಬಾರ, ಊರು ಉಲ್ಲೇಖಿಸಿಲ್ಲ

ಪ್ರಶ್ನೆ: ನಾನು ಆಸ್ತಿಯೊಂದನ್ನು 2021ರಲ್ಲಿ ಮಾರಾಟಮಾಡಿ ಬಂದ ₹ 35 ಲಕ್ಷವನ್ನು ಬ್ಯಾಂಕೊಂದರ ಬಂಡವಾಳ ವೃದ್ಧಿ ಖಾತೆಯಲ್ಲಿ ಇರಿಸಿದ್ದು 2023ರ ಮಾರ್ಚ್‌ಗೆ ಎರಡು ವರ್ಷ ಮುಗಿಯುತ್ತದೆ. ಬೇರೆ ಮನೆ ಖರೀದಿಸಲಾಗದಿದ್ದರೆ ಎಷ್ಟು ತೆರಿಗೆ ಬರುತ್ತದೆ? ನನ್ನ ವಾರ್ಷಿಕ ವರಮಾನ ₹ 5 ಲಕ್ಷ.

ಉತ್ತರ: ಆದಾಯ ತೆರಿಗೆ ನಿಯಮದ ಅಡಿ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಅರ್ಹ ತೆರಿಗೆದಾರರಿಗೆ ಕೆಲವು ಷರತ್ತುಬದ್ಧ ವಿನಾಯಿತಿಗಳನ್ನು ನೀಡಲಾಗುತ್ತದೆ. ಮನೆ ಮಾರಾಟ ಮಾಡಿ ಬರುವ ಹಣವನ್ನು ಪುನಃ ಹೂಡಿಕೆ ಮಾಡುವ ಉದ್ದೇಶದೊಂದಿಗೆ ಮಾರಾಟದಿಂದ ಬಂದ ಮೊತ್ತವನ್ನು ಎರಡು ವರ್ಷದ ಅವಧಿಯೊಳಗೆ ಹೊಸ ಮನೆ ಖರೀದಿಗೆ ಅಥವಾ ಹೊಸ ಮನೆಯ ನಿರ್ಮಾಣದ ಕೆಲಸ ಪೂರ್ಣಗೊಳ್ಳುವ ತನಕ ಮೂರು ವರ್ಷದವರೆಗೆ ಬಂಡವಾಳ ವೃದ್ಧಿ ಖಾತೆಯಲ್ಲಿ ಹೂಡಿಕೆ ಮಾಡಿದ್ದರೆ ಆ ಮೊತ್ತಕ್ಕೆ ತೆರಿಗೆ ವಿನಾಯಿತಿ ಸಿಗುತ್ತದೆ. ಇದನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54ರಲ್ಲಿ ಹೇಳಲಾಗಿದೆ.

ಆದರೆ ಕೆಲವೊಮ್ಮೆ ಅನುಕೂಲವಲ್ಲದ ಆರ್ಥಿಕ ಪರಿಸ್ಥಿತಿಯಿಂದ ಅಥವಾ ನಿರ್ಧಾರದ ಬದಲಾವಣೆಗಳಿಂದ ಇಂತಹ ಖಾತೆಯಲ್ಲಿ ತೊಡಗಿಸಿರುವ ಹಣವನ್ನು ಹೊಸ ಮನೆ ಖರೀದಿ ಅಥವಾ ನಿರ್ಮಾಣಕ್ಕೆ ಉಪಯೋಗಿಸಲಾಗದಿದ್ದರೆ, ಆಸ್ತಿ ಮಾರಾಟವಾದ ದಿನದಿಂದ ಮೂರು ವರ್ಷ ಪೂರ್ಣಗೊಂಡ ಆರ್ಥಿಕ ವರ್ಷದಲ್ಲಿ ಅಂತಹ ಮೊತ್ತಕ್ಕೆ ತೆರಿಗೆ ಪಾವತಿಸಬೇಕಾಗಿರುತ್ತದೆ. ಅಂದರೆ, ಇಂತಹ ಖಾತೆಗಳಲ್ಲಿ ಹೂಡುವ ಹಣ ದೀರ್ಘಾವಧಿ ಬಂಡವಾಳ ಆಸ್ತಿ ಮಾರಾಟದಿಂದ ಬಂದಿರುವ ಮೊತ್ತವಾಗಿರುವುದರಿಂದ, ಖಾತೆಯಲ್ಲಿ ಉಪಯೋಗಿಸದೆ ಉಳಿದ ಮೊತ್ತಕ್ಕೆ ಶೇಕಡ 20ರ ಮೂಲ ದರ ಹಾಗೂ ಶೇ 4ರಷ್ಟು ಸೆಸ್ ಸೇರಿಸಿ ತೆರಿಗೆ ಪಾವತಿಸಬೇಕಾಗುತ್ತದೆ.

ನೀವು ಮೇಲೆ ಹೇಳಿರುವ ಮಾಹಿತಿಯಂತೆ, ನಿಮ್ಮ ಮನೆ ಮಾರಾಟ ಮಾಡಿ ಈಗ ಎರಡು ವರ್ಷ ಮುಗಿಯುತ್ತಿದೆ. ಇನ್ನು ಒಂದು ವರ್ಷದ ಅವಧಿಯೊಳಗೆ ಮನೆ ಕಟ್ಟುವ ನಿರ್ಧಾರ ಕೈಗೊಂಡರೂ ಈ ಮೊತ್ತವನ್ನು ತೆರಿಗೆ ಮುಕ್ತವಾಗಿ ಉಪಯೋಗಿಸಿಕೊಳ್ಳಬಹುದು. ಒಂದು ವೇಳೆ ನಿಮ್ಮ ನಿರ್ಧಾರದಲ್ಲಿ ಬದಲಾವಣೆಯಾಗಿ ಹಣ ಹಿಂಪಡೆಯುವುದಿದ್ದರೆ, ಬ್ಯಾಂಕಿಗೆ ಆದಾಯ ತೆರಿಗೆ ಇಲಾಖೆಯಿಂದ ಇದಕ್ಕೆ ಪೂರಕವಾದ ಹೆಚ್ಚುವರಿ ದಾಖಲೆ ಪತ್ರಗಳನ್ನು (ಫಾರಂ-ಜಿ) ಅಗತ್ಯಕ್ಕೆ ತಕ್ಕಂತೆ ಕೊಡಬೇಕಾದೀತು. ಇದಕ್ಕೆ ನಿಮ್ಮ ತೆರಿಗೆ ಮತ್ತೆ ಲೆಕ್ಕ ಹಾಕಬೇಕು. ಕಾರಣ ಹೆಚ್ಚುವರಿ ಲಾಭದ ಮೊತ್ತಕ್ಕೆ ಹೂಡಿಕೆ ಮೊತ್ತ ವಿನಿಯೋಗಿಸದ ಕಾರಣ ಹಿಂದಿನ ವರ್ಷಗಳಲ್ಲಿ ಪಡೆದಿರುವ ತೆರಿಗೆ ವಿನಾಯಿತಿಯನ್ನು ಸರ್ಕಾರಕ್ಕೆ ಮರಳಿಸಬೇಕಾಗುತ್ತದೆ.

ಮಹಾಂತೇಶ ಆರ್, ಊರು ತಿಳಿಸಿಲ್ಲ

ಪ್ರಶ್ನೆ: ನಾನು ಹಿಂದೆ ಯು.ಪಿ. ಪುರಾಣಿಕರ ಅಂಕಣ ಓದಿ, ಬ್ಯಾಂಕಿನಲ್ಲಿ ಆರ್.ಡಿ ಮಾಡಿಸಿದ್ದೆ. ಅವರು ಆರ್.ಡಿ. ಖಾತೆಗೆ ಬರುವ ಬಡ್ಡಿಗೆ ತೆರಿಗೆ ಇರುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ನಮ್ಮ ಖಾತೆ ಅವಧಿ ಪೂರ್ಣಗೊಂಡ ನಂತರ ಹಣ ಬಿಡಿಸಿಕೊಳ್ಳಲು ಹೋದಾಗ ತೆರಿಗೆ ಕಡಿತಗೊಳಿಸಿದ್ದಾರೆ. ನಾವು ಕಟ್ಟಿದ್ದು ₹ 3 ಲಕ್ಷ, ಅವರು ಶೇ 6ರ ಬಡ್ಡಿ ದರದಲ್ಲಿ ₹ 35 ಸಾವಿರ ನೀಡುತ್ತೇವೆ ಎಂದು ಪಾಸ್‌ಬುಕ್‌ನಲ್ಲಿ ಮುದ್ರಿಸಿದ್ದರು. ಹಣವನ್ನು ನಮ್ಮ ಬಿಡಿಸಿಕೊಳ್ಳಲು ಹೋದಾಗ ₹ 5 ಸಾವಿರವನ್ನು ತೆರಿಗೆ ಎಂದು ಕಡಿತ ಮಾಡಿದರು. ದಯವಿಟ್ಟು ಸಲಹೆ ತಿಳಿಸಿ.

ಉತ್ತರ: ಬ್ಯಾಂಕುಗಳ ಆವರ್ತಕ ಠೇವಣಿ ಯೋಜನೆಗಳು (ಆರ್.ಡಿ) ಬಹುತೇಕ ಜನರು ಆಯ್ಕೆ ಮಾಡುವ ಅಪಾಯರಹಿತ ಹಾಗೂ ಅತ್ಯಂತ ಜನಪ್ರಿಯ ಹೂಡಿಕೆ ಆಯ್ಕೆಗಳಲ್ಲಿ ಒಂದು. ಇಂತಹ ಠೇವಣಿಗಳ ಮೇಲೆ ಟಿಡಿಎಸ್ ಅನ್ವಯಿಸುವ ಬದಲಾವಣೆಗಳನ್ನು ಸರ್ಕಾರ 2019ರ ಏಪ್ರಿಲ್‌ನಿಂದ ಜಾರಿಗೆ ತಂದಿದೆ. ಉದಾಹರಣೆಗೆ, ಪ್ರಸ್ತುತ ನಮ್ಮ ಉಳಿತಾಯ ಖಾತೆಗೆ ಬರುವ ಬಡ್ಡಿ ಆದಾಯ ಹೇಗೆ ಈಗಲೂ ತೆರಿಗೆ ಕಡಿತದಿಂದ (ಟಿಡಿಎಸ್) ಮುಕ್ತವೋ ಹಾಗೆಯೇ ಹೊಸ ನಿಯಮ ಬರುವ ತನಕ ಆವರ್ತಕ ಠೇವಣಿ ಯೋಜನೆಗಳ ಮೇಲೆ ತೆರಿಗೆ ಕಡಿತಗೊಳಿಸುವ ಪದ್ಧತಿ ಇರಲಿಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಯಾವುದೇ ಸಂದರ್ಭದಲ್ಲಿ, ಟಿಡಿಎಸ್ ಇದ್ದಿರಲಿಲ್ಲವೇ ವಿನಾ ಅಂತಹ ಆದಾಯ ಸಂಪೂರ್ಣವಾಗಿ ತೆರಿಗೆಯಿಂದ ಮುಕ್ತವಾಗಿರಲಿಲ್ಲ. ಹೀಗಾಗಿ ಬಡ್ಡಿ ಆದಾಯವನ್ನು ಸ್ವತಃ ತೆರಿಗೆದಾರರೇ ಘೋಷಿಸಿ ತಮಗೆ ಅನ್ವಯವಾಗುವ ಸ್ಲ್ಯಾಬ್ ದರದಲ್ಲಿ ತೆರಿಗೆಯನ್ನು ಪಾವತಿಸಬೇಕಾಗಿರುತ್ತದೆ.

ಆದಾಯ ತೆರಿಗೆಯ ಸೆಕ್ಷನ್ 194 ಎ ಅಡಿ ಉಲ್ಲೇಖಿಸಿರುವಂತೆ ಟಿಡಿಎಸ್ ದರ ಶೇ 10. ಸಾಮಾನ್ಯ ನಾಗರಿಕರಿಗೆ ಉಳಿತಾಯ ಖಾತೆಯನ್ನು ಹೊರತುಪಡಿಸಿ, ಪಾವತಿಯಾಗುವ ಒಟ್ಟು ₹ 40,000ದವರೆಗಿನ ವಾರ್ಷಿಕ ಬಡ್ಡಿಗೆ ತೆರಿಗೆ ಕಡಿತ ಇರುವುದಿಲ್ಲ. ಆದರೆ ಹಿರಿಯ ನಾಗರಿಕರಿಗೆ ಈ ಮೊತ್ತ ₹ 50,000. ಇದಕ್ಕಿಂತ ಕಡಿಮೆ ಪಾವತಿ ಇದ್ದಲ್ಲಿ ಬ್ಯಾಂಕ್‌ಗಳು ತೆರಿಗೆ ಕಡಿತಗೊಳಿಸುವ ಅಗತ್ಯ ಇಲ್ಲ. ಯಾವುದೇ ತೆರಿಗೆ ಕಡಿತಗೊಳಿಸದಿರುವಂತೆ ಬ್ಯಾಂಕುಗಳನ್ನು ವಿನಂತಿಸಲು ಆದಾಯ ತೆರಿಗೆಯ ಫಾರ್ಮ್ 15ಜಿ / ಫಾರ್ಮ್ 15 ಎಚ್‌ಅನ್ನು ಸ್ವಂತ ಘೋಷಣೆಯಾಗಿ ಸಲ್ಲಿಸಬೇಕಾಗುತ್ತದೆ. ನಿಮ್ಮ ಆದಾಯ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತಕ್ಕಿಂತ ಕೆಳಗಡೆ ಇದ್ದರಷ್ಟೇ (₹ 2.50 ಲಕ್ಷ, ಹಿರಿಯ ನಾಗರೀಕರಾಗಿದ್ದಲ್ಲಿ ₹ 3 ಲಕ್ಷ ಹಾಗೂ ಅತಿ ಹಿರಿಯ ನಾಗರೀಕರಾಗಿದ್ದರೆ ₹ 5 ಲಕ್ಷ) ಇದನ್ನು ಸಲ್ಲಿಸುವುದರಲ್ಲಿ ಅರ್ಥವಿದೆ. ಈ ಮಿತಿಗಿಂತ ಬೇರೆ ಆದಾಯವಿದ್ದಾಗ ಬ್ಯಾಂಕುಗಳಿಗೆ ಅದನ್ನು ಸಲ್ಲಿಸುವುದರಿಂದ ಒಟ್ಟು ತೆರಿಗೆ ತಗ್ಗಲಾರದು.

ನೀವು ಹಿರಿಯ ನಾಗರಿಕರಾಗಿದ್ದಲ್ಲಿ ಸೆಕ್ಷನ್ 80 ಟಿಟಿಬಿ ಅಡಿ ಠೇವಣಿಯ ₹ 50,000ದವರೆಗಿನ ಬಡ್ಡಿಗಿರುವ ಪೂರ್ಣ ವಿನಾಯಿತಿ ಪಡೆಯಬಹುದು. ನಿಮ್ಮ ವಿಚಾರದಲ್ಲಿ ತೆರಿಗೆ ಕಡಿತಗೊಂಡಿದ್ದರೂ, ಮೇಲಿನ ಅಂಶದಂತೆ ಒಟ್ಟಾರೆ ತೆರಿಗೆಗೊಳಪಡುವ ಆದಾಯ ಇಲ್ಲದಿದ್ದರೆ, ತೆರಿಗೆ ರಿಫಂಡ್ ಪಡೆಯುವ ಅವಕಾಶವಿರುತ್ತದೆ. ಇದನ್ನು ಹೆಚ್ಚುವರಿ ಮಾಹಿತಿಯೊಂದಿಗೆ ಪರಿಶೀಲಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001
ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ
10–01-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620(1620)
ಒಂದು ವಾರದ ಡೆಲಿವರಿ	1615(1615)
ಸೋಯಾ ಕಚ್ಚಾ	1170(-)
ಪಾಮ್ ವಾರದ ಡೆಲಿವರಿ	938(946)
ಸೂರ್ಯಕಾಂತಿ ಎಣ್ಣೆ ಕಚ್ಚಾ	1170(1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55750(56050)
ಬೆಳ್ಳಿ ಕೆ.ಜಿ 67600(68800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹ 555-677
ದ್ವಿತಳಿ (ಬಿ.ವಿ) ₹520-822

'ಅಜಂತಾ ಗುಹೆ ಮಾಹಿತಿಗೆ ಶೀಘ್ರ ಕ್ಯುಆರ್ ಕೋಡ್'

ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದ ಪ್ರಸಿದ್ಧ ಅಜಂತಾ ಗುಹೆಗಳಲ್ಲಿರುವ ವರ್ಣಚಿತ್ರ ಮತ್ತು ಶಿಲ್ಪಕಲೆಗಳ ಬಗ್ಗೆ ಪ್ರವಾಸಿಗರಿಗೆ ಹೆಚ್ಚಿನ ಮಾಹಿತಿ ಒದಗಿಸುವ ಉದ್ದೇಶದಿಂದ ಪ್ರವೇಶ ದ್ವಾರದಲ್ಲಿ ಶೀಘ್ರವೇ ಕ್ಯುಆರ್ ಕೋಡ್ ಅಳವಡಿಸಲಾಗುವುದು ಎಂದು ಭಾರತ ಪುರಾತತ್ವ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ವರ್ಣಚಿತ್ರಗಳ ಬಗ್ಗೆ ಮಾಹಿತಿ ಒದಗಿಸಲು ಕ್ಯುಆರ್ ಕೋಡ್ ಅಳವಡಿಸುತ್ತಿದ್ದೇವೆ. ಅದಕ್ಕಾಗಿ ತಾತ್ಕಾಲಿಕ ಇಂಟರ್‌ನೆಟ್ ಸೇವೆ ಒದಗಿಸುತ್ತೇವೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಚಾಲಕರು ಬೇಕಾಗಿದ್ದಾರೆ ಪ್ರತಿ ತಿಂಗಳು ರೂ. 40,000-50,000 ಗಳಿಸಿ ಕರೆ ಮಾಡಿ: 08069451001 ಅಗತ್ಯವಿದೆ: LMV Driving Licence (3 ವೀಲರ್/ 4 ವೀಲರ್)

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

WORK FROM Home: ವಾರಕ್ಕೆ 10,000 ಸಂಪಾದನೆ, ಟೈಪಿಂಗ್ ವರ್ಕ್, Mobile/ Laptop ಇದ್ದರೆ ಸಾಕು. 8660325376

ಉಡುಪಿಯ ಪ್ರಸಿದ್ಧ ಗ್ರಾನೈಟ್ ಕ್ವಾರಿ ಹಾಗೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. 1)ಮ್ಯಾನೇಜರ್– 1, 2)ಸೂಪರ್ ವೈಸರ್-4, 3)ಯಂತ್ರೋಪಕರಣ ಹಾಗೂ ವಾಹನ ನಿರ್ವಹಣೆ ಸೂಪರ್ ವೈಸರ್-1, 4)ಮೆಷಿನ್ ಆಪರೇಟರ್– 4 (ತರಬೇತಿ ಕೊಡಲಾಗುವುದು) 5)ಮೆಕ್ಯಾನಿಕ್-1, 6)ಲೈಟ್ ಮೋಟಾರ್ ವೆಹಿಕಲ್ ಡ್ರೈವರ್–4. 7)ಹೆವಿ ಮೋಟಾರ್ ವೆಹಿಕಲ್ ಡ್ರೈವರ್–4. ಸಂಪರ್ಕಿಸಿ: 7411292818, 7411061669. ವಿ.ಸೂ: 1)ಸಂಪರ್ಕಿಸುವ ಸಮಯ ಬೆಳಿಗ್ಗೆ 10ರಿಂದ ಸಾಯಂಕಾಲ 5ರ ತನಕ ಮಾತ್ರ. 2)ಸಂದರ್ಶನಕ್ಕೆ ಬಂದು ಹೋಗುವ ವೆಚ್ಚವನ್ನು ಭರಿಸಲಾಗುವುದು. 3)ಉಚಿತ ಊಟ ಹಾಗೂ ವಸತಿ ಸೌಲಭ್ಯವಿದೆ.

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000-28,000/- 8884611125, 8884611126.

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಇದೆ 10,000-15,000. 8951315839, 9880545002

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

Hospital & Medical Jobs

ಬೇಕಾಗಿದ್ದಾರೆ ಪುರುಷರು, ಮಹಿಳೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ ಸಂಬಳ 13000–23000 (ಸರ್ಕಾರಿ ನೋಂದಾಯಿತ ಸಂಸ್ಥೆ) 7483960098

Situation Required

ಬೇಕಾಗಿದ್ದಾರೆ ಅನುಭವ ಇರುವ ಅಲ್ಯೂಮಿನಿಯಂ ಕಾಂಪೋಸಿಟ್ ಪ್ಯಾನಲ್ (ACP) ಕೆಲಸಗಾರರು ಬೇಕಾಗಿದ್ದಾರೆ ಸಂಪರ್ಕಿಸಿ: 8113083388

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

20.01.2023 ರಿಂದ 6 ದಿನಗಳು ಪುರಿಜಗನ್ನಾಥ್ ಭುವನೇಶ್ವರ್, ಲಿಂಗರಾಜ, ಕೊನಾರ್ಕ್ ಸೂರ್ಯ ದೇವಾಲಯ, ಕಲ್ಕತ್ತ ಪ್ರವಾಸ. ಸಂಪರ್ಕಿಸಿ ತತ್ವಮಸಿ ಟೂರ್ಸ್ 7795787484 9902947003

ಶಿವರಾತ್ರಿ ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

08.03.2023 10.04.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 11/7 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023. 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 23.02.2023. 17.03.2023 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

ಮಹಾಶಿವರಾತ್ರಿ ಪ್ರಯುಕ್ತ 9/2/2023 ಮತ್ತು 24/2/2023ರಿಂದ ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 13/16 ದಿನಗಳ ನೈಮಿಶಾರಣ್ಯ ಮುಕ್ತಿನಾಥ್,ಪಶುಪತಿನಾಥ್, ಪೋಕ್ರ,ಭಕ್ತಿಪುರ್,ಕಾಶಿ,ಪೂರಿ, ಕೋಲ್ಕತ್ತಾ, ಇತ್ಯಾದಿ.ಹಾಗೂ 27/4/2023ರಿಂದ 34ದಿನಗಳ ಚಾರಧಾಮ್ ಸಮೇತ ವೈಷ್ಣೋದೇವಿ,ಅಮೃತ್ ಸರ್,ಕಾಶಿ, ಗುಲ್ಮಾರ್ಗ್,ಕಾಶ್ಮೀರ,ಹರಿದ್ವಾರ, ನವದೆಹಲಿ.~ಏಷ್ಯನ್ ಟ್ರಾವೆಲ್ ಲೈನ್ಸ್ 164/3,ಆರ್.ವಿ.ರಸ್ತೆ ಬೆಂಗಳೂರು.~04,ಸಂಪರ್ಕಿಸಿ: ಷಣ್ಮುಗಾನಂದ:9480182865. 8105657052.

ಏಪ್ರಿಲ್ ತಿಂಗಳಲ್ಲಿ ದೆಹಲಿ ವೈಷ್ಣೋದೇವಿ,ಅಮೃತ್‌ಸರ್ 10 ದಿನಗಳು. ಮೇ ತಿಂಗಳಲ್ಲಿ ಕಾಶಿ,ಗಯಾ,ಕಲ್ಕತ್ತ ಪೂರಿ ಜಗನ್ನಾಥ್ ಕೊನಾರ್ಕ್ ಸೂರ್ಯ ದೇವಾಲಯ ಯಾತ್ರಾ 9 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
conditions apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸೆನ್ಸೆಕ್ಸ್, ನಿಫ್ಟಿ ಶೇ 1ರಷ್ಟು ಇಳಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಹಾಗೂ ಬ್ಯಾಂಕಿಂಗ್ ವಲಯದ ಷೇರುಗಳ ಮಾರಾಟ ಹೆಚ್ಚಿದ್ದ ಪರಿಣಾಮವಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ ನಿಫ್ಟಿ ಮಂಗಳವಾರದ ವಹಿವಾಟಿನಲ್ಲಿ ಶೇಕಡ 1ರಷ್ಟು ಕುಸಿತ ಕಂಡವು.

ವಿದೇಶಿ ಹೂಡಿಕೆಯ ಹೊರಹರಿವು ಕೂಡ ದೇಶಿ ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಿತು. ಸೆನ್ಸೆಕ್ಸ್ 631 ಅಂಶ ಹಾಗೂ ನಿಫ್ಟಿ 187 ಅಂಶ ಇಳಿಕೆ ಕಂಡವು. ಸೋಲ್ ಮತ್ತು ಟೋಕಿಯೊ ಷೇರುಪೇಟೆಗಳು ಏರಿಕೆ ದಾಖಲಿಸಿವೆ. ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳು ಇಳಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 0.46ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರೆಲ್‌ಗೆ 79.28 ಡಾಲರ್‌ಗೆ ತಲುಪಿದೆ.

ಕ್ರಿಕೆಟ್: ರೋಹಿತ್–ಗಿಲ್ ಅಮೋಘ ಜೊತೆಯಾಟ; ದಸುನ್ ಶನಕಾ ಶತಕ

ಮಿಂಚಿದ ವಿರಾಟ್; ಭಾರತಕ್ಕೆ ಜಯ

ಗುವಾಹಟಿ (ಪಿಟಿಐ): ಹೊಸ ವರ್ಷದಲ್ಲಿ ತಾವು ಆಡಿದ ಮೊದಲ ಏಕದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಭರ್ಜರಿ ಶತಕ ದಾಖಲಿಸಿದರು.

87 ಎಸೆತಗಳಲ್ಲಿ 113 ರನ್ ಗಳಿಸಿದ ಅವರ ಬ್ಯಾಟಿಂಗ್‌ನಿಂದ ಭಾರತ ತಂಡವು ಶ್ರೀಲಂಕಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ 67 ರನ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಟಾಸ್ ಗೆದ್ದ ಶ್ರೀಲಂಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ರೋಹಿತ್ ಶರ್ಮಾ ಮತ್ತು ಯುವ ಆಟಗಾರ ಶುಭಮನ್ ಗಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 143 ರನ್ ಸೇರಿ ಅಮೋಘ ಆರಂಭ ನೀಡಿದರು.

ಈ ಬುನಾದಿಯ ಮೇಲೆ ಬೃಹತ್ ಮೊತ್ತ ಪೇರಿಸಲು ವಿರಾಟ್ ಕಾರಣರಾದರು. ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 373 ರನ್ ಗಳಿಸಿತು. ಅದಕ್ಕುತ್ತರವಾಗಿ ಲಂಕಾ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 306 ರನ್ ಗಳಿಸಿತು. ನಾಯಕ ದಸುನ್ ಶನಕಾ (108; 88ಎ, 4X12, 6X3) ಶತಕ ಗಳಿಸಿದರು.

ಭಾರತದ ವೇಗಿ ಉಮ್ರಾನ್ ಮಲಿಕ್ ಮತ್ತು ಮೊಹಮ್ಮದ್ ಸಿರಾಜ್ ಅವರ ದಾಳಿಯ ಮುಂದೆ ಲಂಕಾ ಬ್ಯಾಟಿಂಗ್ ಪಡೆ ಕುಸಿಯಿತು.

ಕೊಹ್ಲಿ 45ನೇ ಶತಕ: ಏಕದಿನ ಕ್ರಿಕೆಟ್‌ನಲ್ಲಿ 45ನೇ ಶತಕ ದಾಖಲಿಸಿದರು. ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ (49) ದಾಖಲೆ ಸರಿಗಟ್ಟಲು ಇನ್ನೂ ನಾಲ್ಕು ಶತಕಗಳ ಅಗತ್ಯವಿದೆ. ಒಟ್ಟಾರೆ ಮೂರು ಮಾದರಿಗಳಲ್ಲಿಯೂ ಸೇರಿ 73 ಶತಕಗಳನ್ನು ಕೊಹ್ಲಿ ಗಳಿಸಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ತವರು ನೆಲದಲ್ಲಿ ಅತ್ಯಧಿಕ ಶತಕ ಗಳಿಸಿರುವ ಸಚಿನ್ (20 ಶತಕ) ಅವರ ದಾಖಲೆಯನ್ನು ಕೊಹ್ಲಿ ಸರಿಗಟ್ಟಿದರು.

ಅಲ್ಲದೇ ಈ ಮಾದರಿಯಲ್ಲಿ ಅವರು ಸತತ ಎರಡನೇ ಬಾರಿ ನೂರರ ಗಡಿ ದಾಟಿದರು. ಹೋದ ತಿಂಗಳು ಛತ್ತೋಗ್ರಾಮ್‌ನಲ್ಲಿ ನಡೆದಿದ್ದ ಬಾಂಗ್ಲಾ ಎದುರಿನ ಪಂದ್ಯದಲ್ಲಿ ಶತಕ ಗಳಿಸಿದ್ದರು. ಈ ಪಂದ್ಯದಲ್ಲಿ ತಮಗೆ ಲಭಿಸಿದ ಎರಡು ಜೀವದಾನಗಳನ್ನು ಕೊಹ್ಲಿ ಸಮರ್ಥವಾಗಿ ಬಳಸಿಕೊಂಡರು. ಅವರು 51 ರನ್ ಗಳಿಸಿದ್ದಾಗ ಕುಶಾಲ ಮೆಂಡಿಸ್ ಮತ್ತು 81 ರನ್ ಗಳಿಸಿದ್ದಾಗ ದಸುನ್ ಶನಕಾ ಕ್ಯಾಚ್ ಕೈಚೆಲ್ಲಿದರು. ಕೊಹ್ಲಿ 12 ಬೌಂಡರಿ ಮತ್ತು 1 ಸಿಕ್ಸರ್ ಸಿಡಿಸಿದರು.

ಕೊಹ್ಲಿ ಅವರು ರೋಹಿತ್ ಜೊತೆಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 40 ರನ್, ಮೂರನೇ ವಿಕೆಟ್ ಪಾಲುದಾರಿಕೆಯಲ್ಲಿ ಶ್ರೇಯಸ್ ಜೊತೆಗೆ 40 ರನ್ ಸೇರಿಸಿದರು. ಅಲ್ಲದೇ ಕನ್ನಡಿಗ ಕೆ.ಎಲ್. ರಾಹುಲ್ ಅವರೊಂದಿಗೆ ನಾಲ್ಕನೇ ವಿಕೆಟ್‌ಗೆ 90 ರನ್ ಸೇರಿಸಿದರು. ರಾಹುಲ್ 29 ಎಸೆತಗಳಲ್ಲಿ 39 ರನ್ ಗಳಿಸಿದರು. ರಜಿತಾ ಹಾಕಿದ 49ನೇ ಓವರ್‌ನಲ್ಲಿ ಕೊಹ್ಲಿ, ವಿಕೆಟ್‌ಕೀಪರ್ ಕುಶಾಲ ಮೆಂಡಿಸ್‌ಗೆ ಕ್ಯಾಚಿತ್ತರು.

ಟೀಕೆಗಳಿಗೆ ಉತ್ತರ: ಕಳೆದ ಏಕದಿನ ಪಂದ್ಯದಲ್ಲಿ ಬಾಂಗ್ಲಾ ಎದುರು ದ್ವಿಶತಕ ಬಾರಿಸಿದ್ದ ಇಶಾನ್ ಕಿಶನ್ ಮತ್ತು ಇತ್ತೀಚೆಗೆ ಟಿ20 ಪಂದ್ಯದಲ್ಲಿ ಶತಕ ಗಳಿಸಿದ್ದ ಸೂರ್ಯಕುಮಾರ್ ಯಾದವ್ ಅವರನ್ನು ಈ ಪಂದ್ಯದಲ್ಲಿ ಕಣಕ್ಕಿಳಿಸಲಿಲ್ಲ. ಇದರಿಂದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಟೀಕೆಗಳು ವ್ಯಕ್ತವಾದವು.

ಆದರೆ, ಟೀಕೆಗಳಿಗೆ ತಮ್ಮ ಬ್ಯಾಟಿಂಗ್ ಮೂಲಕ ಉತ್ತರ ಕೊಟ್ಟರು. ರೋಹಿತ್ ಶರ್ಮಾ 67 ಎಸೆತಗಳಲ್ಲಿ 83 ರನ್ ಗಳಿಸಿದರು. ಮೂರು ಸಿಕ್ಸರ್ ಸಿಡಿಸಿದರು. ಬಹುದಿನಗಳ ನಂತರ ಲಯ ಕಂಡುಕೊಂಡರು.

ಶತಕ ಸಂಭ್ರಮದಲ್ಲಿ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ 7ಕ್ಕೆ 373 (50 ಓವರ್)
ರೋಹಿತ್ ಬಿ ಮಧುಶಂಕಾ 83 (67ಎ, 4X9, 6X3), ಶುಭಮನ್ ಎಲ್‌ಬಿಡಬ್ಲ್ಯು ಶನಕ 70 (60ಎ, 4X11), ವಿರಾಟ್ ಸಿ ಮೆಂಡಿಸ್ ಬಿ ರಜಿತಾ 113 (87ಎ, 4X12, 6X1), ಶ್ರೇಯಸ್ ಸಿ ಫೆರ್ನಾಂಡೊ ಬಿ ಧನಂಜಯ 28 (24ಎ, 4X3, 6X1), ರಾಹುಲ್ ಬಿ ರಜಿತಾ 39 (29ಎ, 4X4, 6X1), ಹಾರ್ದಿಕ್ ಸಿ ಹಸರಂಗ ಬಿ ರಜಿತಾ 14 (12ಎ, 6X1), ಅಕ್ಷರ್ ಸಿ ಫೆರ್ನಾಂಡೊ ಬಿ ಕರುಣಾರತ್ನೆ 9 (9ಎ), ಶಮಿ ಔಟಾಗದೆ 4 (4ಎ), ಸಿರಾಜ್ ಔಟಾಗದೆ 7 (8ಎ)
ಇತರೆ 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1-143 (ಶುಭಮನ್ ಗಿಲ್, 19.4), 2-173 (ರೋಹಿತ್ ಶರ್ಮಾ, 23.1), 3-213 (ಶ್ರೇಯಸ್ ಅಯ್ಯರ್, 29.1), 4-303 (ಕೆ. ಎಲ್. ರಾಹುಲ್, 40.5), 5-330 (ಹಾರ್ದಿಕ್ ಪಾಂಡ್ಯ, 44.2), 6-362 (ಅಕ್ಷರ್ ಪಟೇಲ್, 47.5), 7-364 (ವಿರಾಟ್ ಕೊಹ್ಲಿ, 48.2)
ಬೌಲಿಂಗ್: ಕಸುನ್ ರಜಿತಾ 10–0–88–3, ದಿಲ್‌ಶಾನ್ ಮಧುಶಂಕಾ 6–0–43–1, ವನಿಂದು ಹಸರಂಗ 10–0–67–0, ಚಮಿಕಾ ಕರುಣಾರತ್ನೆ 8–0–54–1, ದುನಿತ್ ವೆಲ್ಲಾಲಗೆ 8–0–65–0, ದಸುನ್ ಶನಕ 3–0–22–1, ಧನಂಜಯ ಡಿಸಿಲ್ವಾ 5–0–33–1

ಶ್ರೀಲಂಕಾ 8ಕ್ಕೆ 306 (50 ಓವರ್)
ಪಥುಮ್ ಸಿ ಅಕ್ಷರ್ ಬಿ ಉಮ್ರಾನ್ 72 (80ಎ, 4X11), ಫೆರ್ನಾಂಡೊ ಸಿ ಹಾರ್ದಿಕ್ ಬಿ ಸಿರಾಜ್ 5 (12ಎ, 4X1), ಕುಸಾಲ್ ಬಿ ಸಿರಾಜ್ 0 (4ಎ), ಅಸಲಂಕಾ ಸಿ ರಾಹುಲ್ ಬಿ ಉಮ್ರಾನ್ 23 (28ಎ, 4X3), ಧನಂಜಯ ಸಿ ರಾಹುಲ್ ಬಿ ಶಮಿ 47 (40ಎ, 4X9), ದಸುನ್ ಔಟಾಗದೆ 108 (88ಎ, 4X12, 6X3), ಹಸರಂಗ ಸಿ ಶ್ರೇಯಸ್ ಬಿ ಯಜುವೇಂದ್ರ 16 (7ಎ, 4X1, 6X2), ದುನಿತ್ ಸಿ ಶುಭಮನ್ ಬಿ ಉಮ್ರಾನ್ 0 (1ಎ), ಕರುಣಾರತ್ನೆ ಸಿ ರೋಹಿತ್ ಬಿ ಹಾರ್ದಿಕ್ 14 (21ಎ, 4X2), ರಜಿತಾ ಔಟಾಗದೆ 9 (19ಎ)
ಇತರೆ 12 (ಲೆಗ್‌ಬೈ 3, ವೈಡ್ 9)
ವಿಕೆಟ್ ಪತನ: 1-19 (ಆವಿಷ್ಕಾ ಫೆರ್ನಾಂಡೊ, 3.5), 2-23 (ಕುಸಾಲ್ ಮೆಂಡಿಸ್, 5.3), 3-64 (ಚರಿತ ಅಸಲಂಕಾ, 13.6), 4-136 (ಧನಂಜಯ ಸಿಡಿಲ್ವಾ, 24.5), 5-161 (ಪಥುಮ್ ನಿಸ್ಸಾಂಕ, 30.4), 6-178 (ವನಿಂದು ಹಸರಂಗ, 31.6), 7-179 (ದುನಿತ್ ವೆಲ್ಲಾಲಗೆ, 32.2), 8-206 (ಚಮಿಕಾ ಕರುಣಾರತ್ನೆ, 37.5)
ಬೌಲಿಂಗ್: ಮೊಹಮ್ಮದ್ ಶಮಿ 9–0–67–1, ಮೊಹಮ್ಮದ್ ಸಿರಾಜ್ 7–1–30–2, ಹಾರ್ದಿಕ್ ಪಾಂಡ್ಯ 6–0–33–1, ಉಮ್ರಾನ್ ಮಲಿಕ್ 8–0–57–3, ಯಜುವೇಂದ್ರ ಚಾಹಲ್ 10–0–58–1, ಅಕ್ಷರ್ 10–0–58–0

ಫಲಿತಾಂಶ: ಭಾರತ ತಂಡಕ್ಕೆ 67 ರನ್‌ಗಳ ಜಯ

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಗಾಯತ್ರಿ–ತ್ರಿಶಾಗೆ ಜಯ

ಸೈನಾ, ಶ್ರೀಕಾಂತ್‌ಗೆ ನಿರಾಸೆ

ಕ್ವಾಲಾಲಂಪುರ (ಪಿಟಿಐ): ಭಾರತದ ಸೈನಾ ನೆಹ್ವಾಲ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಮಹಿಳಾ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್ ಮತ್ತು ತ್ರಿಶಾ ಜೋಲಿ ಶುಭಾರಂಭ ಮಾಡಿದರು.

ಮಂಗಳವಾರ ಇಲ್ಲಿ ಆರಂಭವಾದ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸೈನಾ 12-21, 21-17, 12-21ರಿಂದ ಚೀನಾದ ಹಾನ್ ಯು ವಿರುದ್ಧ ಸೋಲು ಅನುಭವಿಸಿದರು. ಎರಡು ಬಾರಿಯ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಸೈನಾ ಅವರು ಮೊದಲ ಗೇಮ್ ಕೈಚೆಲ್ಲಿದ ಬಳಿಕ ಪುಟಿದೆದ್ದು ಎರಡನೇ ಗೇಮ್ ತಮ್ಮದಾಗಿಸಿಕೊಂಡರು. ಆದರೆ ನಿರ್ಣಾಯಕ ಮೂರನೇ ಗೇಮ್‌ನಲ್ಲಿ ಮತ್ತೆ ಎಡವಿದರು.

ಪುರುಷರ ಸಿಂಗಲ್ಸ್ ಮೊದಲ ಪಂದ್ಯದಲ್ಲಿ ಶ್ರೀಕಾಂತ್ 19-21, 14-21ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ಸೋಲು ಕಂಡರು. ಈ ಹಿಂದೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಶ್ರೀಕಾಂತ್ 42 ನಿಮಿಷಗಳ ಪೈಪೋಟಿಯಲ್ಲಿ ಶ್ರೇಯಾಂಕರಹಿತ ಆಟಗಾರನ ಎದುರು ಸೋಲೊಪ್ಪಿಕೊಂಡರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 13ನೇ ಸ್ಥಾನದಲ್ಲಿರುವ ಶ್ರೀಕಾಂತ್ ಮೊದಲ ಗೇಮ್‌ನಲ್ಲಿ ತೀವ್ರ ಸ್ಪರ್ಧೆಯೊಡ್ಡಿದರು. ಎರಡನೇ ಗೇಮ್‌ನಲ್ಲೂ ಒಂದು ಹಂತದಲ್ಲಿ 12–12ರಿಂದ ಸಮಬಲ ಸಾಧಿಸಿದ್ದರು. ಆದರೆ ಆ ಬಳಿಕ ನಿಶಿಮೊಟೊ ಪಾರಮ್ಯ ಮೆರೆದರು.

ಆಕರ್ಷಿ ಕಶ್ಯಪ್ ಅವರ ಅಭಿಯಾನವೂ ಮೊದಲ ಸುತ್ತಿನಲ್ಲೇ ಅಂತ್ಯವಾಯಿತು. ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಅವರು 10-21, 8-21ರಿಂದ ಚೀನಾ ತೈಪೆಯ ವೆನ್ ಚಿ ಸು ಎದುರು ಸೋಲು ಅನುಭವಿಸಿದರು.

ಗಾಯತ್ರಿ–ತ್ರಿಶಾಗೆ ಗೆಲುವಿನ ಆರಂಭ: ಗಾಯತ್ರಿ ಗೋಪಿಚಂದ್ ಹಾಗೂ ತ್ರಿಶಾ ಜೋಲಿ ಮೊದಲ ಸುತ್ತಿನ ಪಂದ್ಯದಲ್ಲಿ 21-14, 21-19ರಿಂದ ಹಾಂಗ್‌ಕಾಂಗ್‌ನ ಯೆಂಗ್ ಗಾ ಟಿಂಗ್ – ಯೆಂಗ್ ಪಿ ಲಾಮ್ ಎದುರು ಗೆದ್ದು 16ರ ಘಟ್ಟ ತಲುಪಿದರು. ಪುರುಷರ ಡಬಲ್ಸ್ ಜೋಡಿ ಕೃಷ್ಣ ಗರಗ–ವಿಷ್ಣುವರ್ಧನ ಪಂಜಾಲ 10–21, 18–21ರಿಂದ ದಕ್ಷಿಣ ಕೊರಿಯಾದ ಕಾಂಗ್ ಮಿನ್ ಹುಕ್ – ಸೆ ಸೆಯುಂಗ್ ಎದುರು ಸೋತರು.

ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್– ಎಎಫ್‌ಪಿ ಚಿತ್ರ

ಯಂಗ್‌ಸ್ಟಾರ್ ತಂಡಕ್ಕೆ ಜಯ

ಬೆಂಗಳೂರು: ಮೊಹಮ್ಮದ್ ತಾಲಿಬ್ ಗಳಿಸಿದ ಎರಡು ಗೋಲುಗಳ ಬಲದಿಂದ ಯಂಗ್‌ಸ್ಟಾರ್ ಕ್ಲಬ್, ರಾಯಚೂರು ತಂಡದವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಗೆಲುವು ಸಾಧಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಯಂಗ್‌ಸ್ಟಾರ್ 4–1ರಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ತಂಡದ ಎದುರು ಗೆದ್ದಿತು. ತಾಲಿಬ್ 14 ಮತ್ತು 41ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ವಿಜೇತ ತಂಡಕ್ಕಾಗಿ ವಿನಾಯಕ್ ಎನ್.ಕೆ. (10ನೇ ನಿ.) ಮತ್ತು ಅಂಕಿತ್ ಜಿ. (39ನೇ ನಿ.) ಗೋಲು ಹೊಡೆದರು.

ಮೈಸೂರು ರೇಸ್

ಡೌಗ್ಲಾಸ್ ಗೆಲ್ಲುವ ನಿರೀಕ್ಷೆ

ಏರ್ ಫೋರ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೌಗ್ಲಾಸ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ವಾಗತಮ್ 1, ಟಾಮ್ ಕ್ರೂಸರ್ 6, ಸ್ವಾಕ್ಲಿಂಗ್ ನೈಟ್ 10
2ನೇ ರೇಸ್: ಮೈ ಒನ್ ಅಂಡ್ ಒನ್ಲಿ 2, ವಂದನ್ 8, ಮಿಸ್ ಚೈನಾ 10
3ನೇ ರೇಸ್: ಫೆಸ್ಟಿವ್ ಸ್ಟಾರ್ 9, ಲೀಡ್ ಸಿಂಗರ್ 1, ಕಂಟ್ರೆಸ್ ಪೇಸ್ 2
4ನೇ ರೇಸ್: ಫಾರೆಸ್ಟ್ ವ್ಯೂ 1, ಕೊಯೊಟೆ ಗರ್ಲ್ 8, ಕುಶಾಖ್
5ನೇ ರೇಸ್: ಡೌಗ್ಲಾಸ್ 8, ಸೆಗೆರ 1, ಅಬರ್ಲರ್ 3
6ನೇ ರೇಸ್: ಅಮೆಜೋನಿಯಾ 1, ಹಿರೋಯಿಸ್ಮ್ 3, ಅಚೂಕ್ 6
7ನೇ ರೇಸ್: ರಿಯಲ್ ಶೋ 2, ಆರ್ಟಿಕಲ್ ಫಿಫ್ಟೀನ್ 15, ವಿವ ಲಾ ಡಿವ 4

ಉತ್ತಮ ಬೆಟ್: ಸ್ವಾಗತಮ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಅಥ್ಲೀಟ್ ಶಿವಪಾಲ್ ನಿಷೇಧ ಅವಧಿ ಕಡಿತ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಅಥ್ಲೀಟ್ ಶಿವಪಾಲ್ ಸಿಂಗ್ ನಿಷೇಧ ಅವಧಿಯನ್ನು ಮಂಗಳವಾರ ನಾಲ್ಕು ವರ್ಷಗಳಿಂದ ಒಂದು ವರ್ಷಕ್ಕೆ ಕಡಿತ ಮಾಡಲಾಗಿದೆ.

ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿದ್ದ ಕಾರಣ ಶಿವಪಾಲ್ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ನಿಷೇಧ ಹೇರಿತ್ತು. ನಿಷೇಧದ ಅವಧಿ 2025ರ ಅಕ್ಟೋಬರ್‌ವರೆಗೆ ಇತ್ತು. ಟೋಕಿಯೊ ಒಲಿಂಪಿಕ್ಸ್ ಬಳಿಕ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲಾಗಿತ್ತು.

ಶಿವಪಾಲ್ ಅವರು ಶಕ್ತಿವರ್ಧನೆಗಾಗಿ ಸೇವಿಸಿದ್ದ ವಸ್ತುವಿನಲ್ಲಿ ಉದ್ದೀಪನ ಮದ್ದು ಅಂಶ ಪತ್ತೆಯಾಗಿದ್ದು, ಆ ಶಕ್ತಿವರ್ಧಕ ನಕಲಿಯಾಗಿತ್ತು. ಆದರೆ ಇದು ಉದ್ದೇಶಪೂರ್ವಕವಾಗಿ ಸೇವಿಸಿದ್ದಲ್ಲ ಎಂಬ ಅವರ ವಾದವನ್ನು ನಾಡಾದ ಮೇಲ್ಮನವಿ ಸಮಿತಿ ಒಪ್ಪಿಕೊಂಡಿದೆ. ಹೀಗಾಗಿ ಶಿವಪಾಲ್ ಅವರ ನಿಷೇಧದ ಅವಧಿಯನ್ನು ಕಡಿಮೆ ಮಾಡಲಾಗಿದೆ.

ಶಿವಪಾಲ್ ಅವರು ಈಗ ಯಾವುದೇ ಕೂಟಗಳಲ್ಲಿ ಸ್ಪರ್ಧಿಸಲು ಮುಕ್ತವಾಗಿದ್ದಾರೆ.

ಉಪನ್ಯಾಸ ನಾಳೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರವು ವಸಂತ ವಿಹಾರ ವಾಟರ್‌ಪೋಲೊ ಕ್ಲಬ್‌ನ ಸಹಯೋಗದೊಂದಿಗೆ ‘ಕ್ರೀಡಾಪಟುಗಳಲ್ಲಿ ಮಾನಸಿಕ ಒತ್ತಡ’ ವಿಷಯದ ಕುರಿತು ಜನವರಿ 12ರಂದು ಉಪನ್ಯಾಸ ಆಯೋಜಿಸಿದೆ.

ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ನೆಟ್ಟಕಲ್ಲಪ್ಪ ಈಜುಕೊಳದ ಆವರಣದಲ್ಲಿ ಅಮೆರಿಕದ ಖ್ಯಾತ ಪರಿಸರವಾದಿ, ಬರಹಗಾರ ಪೌಲ್ ರೊಸೊಲಿ ಉಪನ್ಯಾಸ ನೀಡಲಿದ್ದಾರೆ. ಕ್ರೀಡಾಪಟುಗಳು ಮತ್ತು ಅವರ ಪೋಷಕರು ಭಾಗವಹಿಸಬಹುದು ಎಂದು ವಸಂತ ವಿಹಾರ ವಾಟರ್‌ಪೋಲೊ ಕ್ಲಬ್‌ನ ಸಂಸ್ಥಾಪಕ ಕಾರ್ಯದರ್ಶಿ ಟಿ. ಉಮಾಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರನ್‌ಔಟ್ ಮನವಿ ಹಿಂಪಡೆದ ರೋಹಿತ್

ಗುವಾಹಟಿ (ಪಿಟಿಐ): ಶ್ರೀಲಂಕಾ ಎದುರಿನ ಪಂದ್ಯದಲ್ಲಿ ‘ನಾನ್‌ಸ್ಟ್ರೈಕರ್ ರನ್‌ಔಟ್’ ಮನವಿಯೊಂದನ್ನು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಿಂದೆಗೆದುಕೊಂಡರು.

ಪಂದ್ಯದ ಕೊನೆಯ ಓವರ್‌ನ ನಾಲ್ಕನೇ ಎಸೆತದ ಸಂದರ್ಭದಲ್ಲಿ ಲಂಕಾ ತಂಡದ ನಾಯಕ ದಸುನ್ ಶನಕಾ ಅವರು ನಾನ್‌ಸ್ಟ್ರೈಕರ್ ಕ್ರೀಸ್‌ನಿಂದ ಹೊರಗೆ ಸಾಗಿದ್ದರು. ಆಗ ಬೌಲರ್ ಮೊಹಮ್ಮದ್ ಶಮಿ ಬೇಲ್ಸ್ ಎಗರಿಸಿದರು. ವಿಕೆಟ್‌ಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿದ ರೋಹಿತ್, ಮನವಿಯನ್ನು ಮರಳಿ ಪಡೆದರು. ಮತ್ತೊಂದು ವಿವಾದವಾಗುವುದನ್ನು ತಡೆದರು. ಆಗಿನ್ನೂ ಶನಕಾ ಶತಕಕ್ಕೆ ಎರಡು ರನ್‌ಗಳ ಅಗತ್ಯವಿತ್ತು.

ಐದನೇ ಎಸೆತವನ್ನು ಎದುರಿಸಿದ ಶನಕಾ ಬೌಂಡರಿ ಗಳಿಸಿ ಶತಕ ಪೂರೈಸಿದರು. ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆದರು.

ರೋಹಿತ್ ಮತ್ತು ದಸುನ್ ಶನಕಾ

ಟಿಟಿ: ಪ್ರೀಕ್ವಾರ್ಟರ್‌ಗೆ ಮಣಿಕಾ, ಶ್ರೀಜಾ

ದೋಹಾ (ಪಿಟಿಐ): ಭಾರತದ ಮಣಿಕಾ ಬಾತ್ರಾ ಮತ್ತು ಶ್ರೀಜಾ ಅಕುಲಾ ಅವರು ಏಷ್ಯಾ ಕಾಂಟಿನೆಂಟಲ್ ಸ್ಟೇಜ್ ಡಬ್ಲ್ಯುಟಿಟಿಸಿ ಫೈನಲ್ಸ್ ಟೇಬಲ್ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಮಣಿಕಾ 13-11, 11-9, 11-6, 11-8ರಿಂದ ಹಾಂಗ್‌ಕಾಂಗ್‌ನ ಜು ಚೆಂಗ್‌ಜು ಎದುರು ಗೆದ್ದರು.

ಪ್ರಬಲ ಪೈಪೋಟಿ ನಡೆದ ಇನ್ನೊಂದು ಪಂದ್ಯದಲ್ಲಿ ಅಕುಲಾ 11-2, 5-11, 2-11, 5-11, 13-11, 11-9, 11-8ರಿಂದ ಚೀನಾ ತೈಪೆಯ ಚೆನ್ ಜು ಯು ಎದುರು ಜಯಿಸಿದರು.

ದಿಯಾ ಚಿತಳೆ, ಸ್ವಸ್ತಿಕಾ ಘೋಷ್ ಮತ್ತು ರೀತ್ ಟೆನ್ನಿಸನ್ ಅವರು ತಮ್ಮ ಮೊದಲ ಸುತ್ತಿನ ಪಂದ್ಯಗಳಲ್ಲಿ ಸೋಲು ಅನುಭವಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಹರ್ಮೀತ್ ದೇಸಾಯಿ ಕೂಡ ಸೋಲು ಕಂಡರು.

ಶ್ರೀಜಾ ಅಕುಲಾ– ಪಿಟಿಐ ಚಿತ್ರ

ಗೋ ಫಸ್ಟ್ ವಿಮಾನ ಸಿಬ್ಬಂದಿ ಎಡವಟ್ಟು • ಇಬ್ಬರು ಅಮಾನತು

55 ಪ್ರಯಾಣಿಕರನ್ನು ಬಿಟ್ಟು ಹಾರಿದ ವಿಮಾನ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ಮುಂಜಾನೆ ದೆಹಲಿಗೆ ಹೊರಟ್ಟಿದ್ದ ಗೋ ಫಸ್ಟ್ ವಿಮಾನ 55 ಪ್ರಯಾಣಿಕರನ್ನು ಬಿಟ್ಟು ಹಾರಿದೆ.

ವೇಳಾಪಟ್ಟಿಯಂತೆ ಗೋ ಫಸ್ಟ್ ಸಂಸ್ಥೆಯ ಜಿ8-116 ವಿಮಾನ ಬೆಳಿಗ್ಗೆ 6.20ಕ್ಕೆ ಬೆಂಗಳೂರಿನಿಂದ ದೆಹಲಿಗೆ ಹೊರಡುವುದಿತ್ತು. ಟಿಕೆಟ್ ಕಾಯ್ದಿರಿಸಿದ್ದ ಪ್ರಯಾಣಿಕರು ಬೆಳಿಗ್ಗೆ 5.30ಕ್ಕೂ ಮುನ್ನವೇ ನಿಲ್ದಾಣ ತಲುಪಿದ್ದರು. ಅಗತ್ಯ ಪರಿಶೀಲನೆ ಪ್ರಕ್ರಿಯೆ ಮುಗಿಸಿದ ಪ್ರಯಾಣಿಕರು ಎರಡು ಶಟಲ್ ಬಸ್‌ನಲ್ಲಿ ಟರ್ಮಿನಲ್‌ನಿಂದ ವಿಮಾನ ನಿಂತಿದ್ದ ಜಾಗಕ್ಕೆ ತೆರಳಿದ್ದರು.

ಈ ಪೈಕಿ ಒಂದು ಬಸ್‌ನಲ್ಲಿದ್ದ ಪ್ರಯಾಣಿಕರು ವಿಮಾನ ಏರಿದರು. ಮತ್ತೊಂದು ಬಸ್‌ನಲ್ಲಿದ್ದ 55 ಪ್ರಯಾಣಿಕರು ವಿಮಾನ ಏರುವ ಮೊದಲೇ ವಿಮಾನ ಆಗಸಕ್ಕೆ ಹಾರಿದೆ.

ವಿಮಾನ ತಪ್ಪಿಸಿಕೊಂಡ ಪ್ರಯಾಣಿಕರು ವಿಮಾನ ನಿಯಂತ್ರಣ ಪ್ರಾಧಿಕಾರ, ವಿಮಾನ ನಿಲ್ದಾಣದ ಆಡಳಿತಾಧಿಕಾರಿಗಳು, ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವನ್ನು ಟ್ವಿಟರ್‌ನಲ್ಲಿ ತರಾಟೆಗೆ ತೆಗೆದುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಇಬ್ಬರು ಸಿಬ್ಬಂದಿ ಅಮಾನತು, ಟಿಕೆಟ್ ಹಣ ವಾಪಸ್: ಸಂಸ್ಥೆಯು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತನ್ನ ಸಂಸ್ಥೆಯ ಸಂವಹನ ವಿಭಾಗದ ಇಬ್ಬರು ಸಿಬ್ಬಂದಿಯನ್ನು ಕರ್ತವ್ಯಲೋಪ ಆರೋಪದ ಮೇಲೆ ಅಮಾನತು ಮಾಡಿದೆ.

ಕೆಲವು ಪ್ರಯಾಣಿಕರನ್ನು ಬೇರೆ ವಿಮಾನದಲ್ಲಿ ದೆಹಲಿಗೆ ಕಳಿಸಲಾಗಿದೆ. ಇತರರಿಗೆ ಟಿಕೆಟ್ ಹಣ ಮರುಪಾವತಿ ಮಾಡಲಾಗಿದೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ವಿಮಾನ ತಪ್ಪಿದ ಕಾರಣದಿಂದ ಟರ್ಮಿನಲ್‌ನಲ್ಲಿ ಕಾದು ಕುಳಿತಿದ್ದ ಪ್ರಯಾಣಿಕರು

‘ಗೋ ಫಸ್ಟ್’ಗೆ ಡಿಜಿಸಿಎ ನೋಟಿಸ್

ಮುಂಬೈ (ಪಿಟಿಐ): ಸಂಸ್ಥೆಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಮಂಗಳವಾರ ನೋಟಿಸ್ ನೀಡಿದೆ. ಹಲವು ಲೋಪಗಳು ಕಂಡು ಬಂದಿರುವ ಕಾರಣ ನೋಟಿಸ್ ನೀಡಿರುವುದಾಗಿ ಅದು ಹೇಳಿದೆ.

ಕ್ಷಮೆಯಾಚನೆ: ಸಿಬ್ಬಂದಿಯಿಂದ ಆದ ಅಚಾತುರ್ಯಕ್ಕಾಗಿ ವಿಮಾನಯಾನ ಸಂಸ್ಥೆಯು ಪ್ರಯಾಣಿಕರಲ್ಲಿ ಕ್ಷಮೆ ಕೋರಿದೆ. ಲೋಪದಲ್ಲಿ ಭಾಗಿಯಾಗಿರುವ ಎಲ್ಲ ಸಿಬ್ಬಂದಿಯನ್ನು ಕರ್ತವ್ಯದಿಂದ ದೂರವಿಡಲಾಗಿದ್ದು, ಎಲ್ಲರ ವಿರುದ್ಧವೂ ತನಿಖೆಗೆ ಆದೇಶಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

‘ಬಾಧಿತ ಪ್ರಯಾಣಿಕರಿಗೆ ಮುಂದಿನ 12 ತಿಂಗಳಲ್ಲಿ ದೇಶದ ಯಾವುದೇ ಸ್ಥಳಕ್ಕೆ ಪ್ರಯಾಣಿಸಲು ಒಂದು ಉಚಿತ ಟಿಕೆಟ್ ನೀಡಲು ನಿರ್ಧರಿಸಿರುವುದಾಗಿ’ ಎಂದು ಗೋ ಫಸ್ಟ್ ತಿಳಿಸಿದೆ.

ನಾಸಾ: ಮುಖ್ಯ ತಾಂತ್ರಿಕ ತಜ್ಞರಾಗಿ ಎ.ಸಿ. ಚರಣಿಯಾ ನೇಮಕ

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಅಮೆರಿಕ ಬಾಹ್ಯಾಕಾಶ ಕೈಗಾರಿಕಾ ತಜ್ಞ ಎ.ಸಿ. ಚರಣಿಯಾ ಅವರನ್ನು ನಾಸಾದ ಮುಖ್ಯ ತಾಂತ್ರಿಕ ತಜ್ಞರಾಗಿ ನೇಮಕ ಮಾಡಲಾಗಿದೆ.

ಚರಣಿಯಾ ಅವರು ನಾಸಾ ಮುಖ್ಯ ಕಚೇರಿಯಲ್ಲಿ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಅವರಿಗೆ ತಾಂತ್ರಿಕ ನೀತಿ ಮತ್ತು ಕಾರ್ಯಕ್ರಮಗಳಿಗೆ ಪ್ರಧಾನ ಸಲಹೆಗಾರರಾಗಿ ಸೇವೆ ಸಲ್ಲಿಸಲಿದ್ದಾರೆ.

‘ನಾಸಾ ಯೋಜನೆಯಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ. ಚರಣಿಯಾ ಅವರು ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನವನ್ನು ನಿಭಾಯಿಸುವ ಪರಿಣತಿ ಹೊಂದಿರುವ ಅನುಭವಿ ನಾಯಕ’ ಎಂದು ನಾಸಾದ ತಂತ್ರಜ್ಞಾನ, ನೀತಿ ಮತ್ತು ಕಾರ್ಯತಂತ್ರ ಕುರಿತ ಸಹ ವ್ಯವಸ್ಥಾಪಕಿ ಭವ್ಯ ಲಾಲ್ ಅವರು ಮಾಹಿತಿ ನೀಡಿದ್ದಾರೆ.

ಚರಣಿಯಾ

ಶೆಹ್ಲಾ ವಿರುದ್ಧ ಕಾನೂನುಕ್ರಮಕ್ಕೆ ಎಲ್‌ಜಿ ಅನುಮತಿ

ನವದೆಹಲಿ: ಭಾರತೀಯ ಸೇನೆ ಕುರಿತು ಟ್ವೀಟ್ ಮಾಡಿದ್ದ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಮಾಜಿ ಉಪಾಧ್ಯಕ್ಷೆ ಶೆಹ್ಲಾ ರಶೀದ್ ಶೋರಾ ವಿರುದ್ಧ ಕಾನೂನು ಕ್ರಮಕ್ಕೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅನುಮತಿ ನೀಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

2019ರ ಆಗಸ್ಟ್‌ನಲ್ಲಿ ಟ್ವೀಟ್ ಮಾಡಿದ್ದ ಶೆಹ್ಲಾ, ‘ಸೇನೆಯು ಕಾಶ್ಮೀರದಲ್ಲಿ ಮನೆಗಳಿಗೆ ನುಗ್ಗಿ ಸ್ಥಳೀಯರಿಗೆ ಹಿಂಸೆ ನೀಡುತ್ತಿದೆ’ ಎಂದು ಆರೋಪಿಸಿದ್ದರು.

ಜೊತೆಗೆ ಮತ್ತಷ್ಟು ಆರೋಪಗಳನ್ನು ಮಾಡಿದ್ದರು. ಈ ಎಲ್ಲಾ ಆರೋಪಗಳು ನಿರಾಧಾರ ಎಂದು ಸೇನೆ ಹೇಳಿತ್ತು.

ಉಗ್ರನಿಗೆ 7 ವರ್ಷ ಕಠಿಣ ಶಿಕ್ಷೆ

ನವದೆಹಲಿ (ಪಿಟಿಐ): ಐಎಸ್ ಉಗ್ರ ಸಂಘಟನೆಯಿಂದ ಪ್ರಭಾವಿತನಾಗಿರುವ ಭಯೋತ್ಪಾದಕನಿಗೆ ಕೇರಳದಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ದೇಶದಲ್ಲಿರುವ ವಿದೇಶಿಯರೂ ಸೇರಿದಂತೆ ಹಲವರನ್ನು ಗುರಿಯಾಗಿಸಿ ವಿವಿಧೆಡೆ ದಾಳಿ ಮಾಡುವ ಯೋಜನೆಯನ್ನು ಈ ಉಗ್ರ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಯಿಕೋಡ್‌ನ ನಿವಾಸಿ ಮುಹಮ್ಮದ್ ಪೊಲಕನ್ನಿ ಶಿಕ್ಷೆಗೆ ಒಳಗಾದ ವ್ಯಕ್ತಿ.

ಸಂಕ್ಷಿಪ್ತ ಸುದ್ದಿ

ನೇಪಾಳ: ವಿಶ್ವಾಸಮತ ಗೆದ್ದ ಪ್ರಚಂಡ

ಕಠ್ಮಂಡು (ಪಿಟಿಐ): ನೇಪಾಳದ ನೂತನ ಪ್ರಧಾನಿ ಪುಷ್ಪ ಕಮಲ್ ದಹಾಲ್ ‘ಪ್ರಚಂಡ’ ಅವರು ಹೌಸ್ ಆಫ್ ರೆಪ್ರೆಸೆಂಟೇಟೀವ್ಸ್‌ನಲ್ಲಿ ಮಂಗಳವಾರ ವಿಶ್ವಾಸ ಮತ ಗೆದ್ದಿದ್ದಾರೆ.



ನೇಪಾಳಿ ಕಾಂಗ್ರೆಸ್ ನೇತೃತ್ವದ ಚುನಾವಣಾ ಪೂರ್ವ ಮೈತ್ರಿಕೂಟದಿಂದ ನಾಟಕೀಯವಾಗಿ ಹೊರನಡೆದು ವಿರೋಧ ಪಕ್ಷದ ನಾಯಕ ಕೆ.ಪಿ.ಶರ್ಮಾ ಓಲಿ ಯೊಂದಿಗೆ ಕೈಜೋಡಿಸಿದ ನಂತರ ಸಿಪಿಎನ್‌-ಮಾವೋವಾದಿ ಸೆಂಟರ್ ನಾಯಕ ಪ್ರಚಂಡ ಅವರು ಕಳೆದ ಡಿಸೆಂಬರ್ 26 ರಂದು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

270 ಸದಸ್ಯರ ಪೈಕಿ 268 ಜನರು ಪ್ರಧಾನ ಮಂತ್ರಿ ಪ್ರಚಂಡ ಪರವಾಗಿ ಮತ ಚಲಾಯಿಸಿದರೆ, ಇಬ್ಬರು ಅವರ ವಿರುದ್ಧ ಮತ ಚಲಾಯಿಸಿದರು.

ನಾಸಾದ ನಿಷ್ಕ್ರಿಯ ಉಪಗ್ರಹ ಪತನ

ಕೇಪ್ ಕ್ಯಾನವೆರಲ್, ಅಮೆರಿಕ (ಎಪಿ): ಸುಮಾರು 40 ವರ್ಷಗಳ ಕಾಲ ಭೂಮಿಯನ್ನು ಸುತ್ತಿದ್ದ ನಾಸಾದ ನಿಷ್ಕ್ರಿಯ ಉಪಗ್ರಹವೊಂದು ಅಲಾಸ್ಕಾ ಕರಾವಳಿಯಲ್ಲಿ ಸುರಕ್ಷಿತವಾಗಿ ಪತನಗೊಂಡಿದೆ.

1984ರಲ್ಲಿ ಕಕ್ಷೆಗೆ ಕಳುಹಿಸಲಾಗಿದ್ದ ಉಪಗ್ರಹವು ಭಾನುವಾರ ತಡರಾತ್ರಿ ಬೇರಿಂಗ್ ಸಮುದ್ರದಲ್ಲಿ ಪತನಗೊಂಡಿತು. ಇದರಿಂದ ಯಾವುದೇ ಹಾನಿಯಾದ ಬಗ್ಗೆ ಅಥವಾ ಭಗ್ನಾವಶೇಷಗಳು ಲಭ್ಯವಾದ ಬಗ್ಗೆ ವರದಿ ಇಲ್ಲ ಎಂದು ನಾಸಾದ ಪ್ರಕಟಣೆ ತಿಳಿಸಿದೆ.

ಎಲ್‌ಜಿ ಭೇಟಿಗೆ ಅನುಮತಿ ನಿರಾಕರಣೆ– ಆರೋಪ

ನವದೆಹಲಿ (ಪಿಟಿಐ): ‘ದೆಹಲಿಯ ಲೆಫ್ಟಿನೆಂಟ್ ಜನರಲ್ (ಎಲ್‌ಜಿ) ವಿ.ಕೆ. ಸಕ್ಸೇನಾ ಹಾಗೂ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಭೇಟಿಗೆ ಎಲ್‌ಜಿ ಕಚೇರಿಯು ಅನುಮತಿ ನೀಡಲು ನಿರಾಕರಿಸಿದೆ’ ಎಂದು ಎಎಪಿ ಪಕ್ಷ ಮಂಗಳವಾರ ಆರೋಪಿಸಿದೆ.

ಬ್ರೆಜಿಲ್: ಸಂಸತ್ತಿಗೆ ನುಗ್ಗಿದವರ ವಿರುದ್ಧ ಹೋರಾಟ

‘ದಾಂದಲೆ ಮಾಡಿದವರನ್ನು ಕ್ಷಮಿಸಬೇಡಿ’

ರಿಯೊ ಡಿ ಜನೈರೊ (ಎಪಿ): ‘ಬ್ರೆಜಿಲ್‌ನ ಸಂಸತ್ತು, ಸುಪ್ರೀಂ ಕೋರ್ಟ್ ಮತ್ತು ಅಧ್ಯಕ್ಷರ ಅರಮನೆಗೆ ಭಾನುವಾರ ನುಗ್ಗಿ ದಾಂದಲೆ ನಡೆಸಿದವರು ಕ್ಷಮೆಗೆ ಅರ್ಹರಲ್ಲ. ಅವರಿಗೆ ಯಾವುದೇ ಕಾರಣಕ್ಕೂ ಕ್ಷಮೆ ನೀಡಬಾರದು’ ಎಂದು ಆಗ್ರಹಿಸಿ ಬ್ರೆಜಿಲ್‌ನ ರಿಯೊ ಡಿ ಜನೈರೊ ಮತ್ತು ಸಾವ್ ಪೌಲೊ ನಗರಗಳಲ್ಲಿ ಪ್ರಜಾಪ್ರಭುತ್ವ ಪರ ಹೋರಾಟಗಾರರು ಸೋಮವಾರ ಪ್ರತಿಭಟನೆ ನಡೆಸಿದರು.

ಸಾವ್ ಪೌಲೊ ಕಾನೂನು ವಿಶ್ವವಿದ್ಯಾಲಯದಲ್ಲಿ ಜಮಾಯಿಸಿದ್ದ ಪ್ರತಿಭಟನಕಾರರು, ಭಾನುವಾರ ದಾಂದಲೆ ನಡೆಸಿದವರಿಗೆ ಕ್ಷಮೆಯಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತ ಘೋಷಣೆಗಳನ್ನು ವಿ.ವಿಯ ಗೋಡೆಗಳ ಮೇಲೂ ಬರೆಯಲಾಗಿತ್ತು. ಅಲ್ಲದೆ ವಿ.ವಿ ಸಭಾಂಗಣದಲ್ಲೂ ಈ ಘೋಷಣೆಗಳು ಮಾರ್ದನಿಸಿದವು.

ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಳ್ಳದೇ, ಸೋತ ರಾಜಕೀಯ ನಾಯಕರ ಬೆಂಬಲಿಗರು ಸಂಸತ್ತಿಗೇ ನುಗ್ಗಿ ದಾಂದಲೆ ನಡೆಸಿದ್ದನ್ನು ಪ್ರತಿಭಟನಕಾರರು ತೀವ್ರವಾಗಿ ಖಂಡಿಸಿದರು.

‘ದಾಂದಲೆ ನಡೆಸಿದವರು, ಅದಕ್ಕೆ ಕುಮ್ಮಕ್ಕು ನೀಡಿದವರು ಮತ್ತು ಅದಕ್ಕೆ ಆರ್ಥಿಕ ನೆರವು ಒದಗಿಸಿದವರನ್ನು ಶಿಕ್ಷಿಸಬೇಕು’ ಎಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ 61 ವರ್ಷದ ಮಹಿಳೆ ಬೆಟೆ ಅಮಿನ್ ಎಂಬುವವರು ಆಗ್ರಹಿಸಿದರು. ಅವರ ಟಿ–ಶರ್ಟ್‌ನ ಹಿಂಭಾಗದಲ್ಲಿ ‘ಡೆಮಾಕ್ರಸಿ’ ಪದ ಬರೆಯಲಾಗಿತ್ತು.

₹4,274 ಕೋಟಿ ಮೊತ್ತದ ರಕ್ಷಣಾ ಖರೀದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಉತ್ತರ ಭಾಗದಲ್ಲಿ ದೇಶದ ರಕ್ಷಣಾ ಬಲವನ್ನು ವೃದ್ಧಿಸುವ ಉದ್ದೇಶದಿಂದ ಸ್ವದೇಶಿ ನಿರ್ಮಿತ ವಾಯುದಾಳಿ ತಡೆ ಕ್ಷಿಪಣಿ ವ್ಯವಸ್ಥೆಯನ್ನು ಖರೀದಿಸಲು ರಕ್ಷಣಾ ಸಚಿವಾಲಯ ಮಂಗಳವಾರ ನಿರ್ಧರಿಸಿದೆ. ಲಡಾಖ್ ಹಾಗೂ ಅರುಣಾಚಲ ಪ್ರದೇಶದ ಗಡಿಯಲ್ಲಿ ಚೀನಾದ ಜತೆ ಉದ್ವಿಗ್ನತೆ ಉಂಟಾಗಿರುವ ಸಮಯದಲ್ಲಿ ಭಾರತ ಈ ನಿರ್ಧಾರ ತೆಗೆದುಕೊಂಡಿದೆ.

ಶಿವಾಲಿಕ್ ಶ್ರೇಣಿಯ ನೌಕೆಗೆ ಅಳವಡಿಸುವ ಬ್ರಹ್ಮೋಸ್ ಲಾಂಚರ್, ಅಗ್ನಿ ನಿಯಂತ್ರಣ ವ್ಯವಸ್ಥೆ ಮತ್ತು ಮುಂದಿನ ತಲೆಮಾರಿನ ತಂತ್ರಜ್ಞಾನ ಅಳವಡಿಸಿರುವ ಕ್ಷಿಪಣಿಗಳ ಖರೀದಿಗೂ ಒಪ್ಪಿಗೆ ನೀಡಲಾಗಿದೆ. ಹೆಲಿಕಾಪ್ಟರ್ ಮೂಲಕ ದಾಳಿ ನಡೆಸಬಲ್ಲ ಸಾಮರ್ಥ್ಯದ ಸ್ವದೇಶಿ ನಿರ್ಮಿತ ಟ್ಯಾಂಕ್ ನಿರೋಧಕ ‘ಹೆಲಿನಾ’ ಕ್ಷಿಪಣಿಯನ್ನು ಸೇನಾಪಡೆಗಾಗಿ ಖರೀದಿಸಲೂ ಇದೇ ವೇಳೆ ಅನುಮೋದನೆ ಸಿಕ್ಕಿದೆ.

ಈ ಮೂರು ಖರೀದಿ ಪ್ರಕ್ರಿಯೆಗೆ ₹4,274 ಕೋಟಿ ವೆಚ್ಚವಾಗಲಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಮಂಡಳಿಯು (ಡಿಎಸಿ) ಅನುಮೋದನೆ ನೀಡಿದೆ.

ಇನ್‌ಫ್ರಾರೆಡ್ ತಂತ್ರಜ್ಞಾನದ, ಅತಿ ಕಡಿಮೆ ವ್ಯಾಪ್ತಿಯ ರಕ್ಷಣಾ ವ್ಯವಸ್ಥೆಯನ್ನು (ವಿಎಸ್‌ಎಚ್‌ಒಆರ್‌ಎಡಿ) ಮೂರು ತಿಂಗಳ ಹಿಂದೆ ಚಾಂಡಿಪುರದಲ್ಲಿ ಡಿಆರ್‌ಡಿಒ ಪರೀಕ್ಷೆಗೆ ಒಳಪಡಿಸಿತ್ತು. ಹೆಲಿನಾ ಕ್ಷಿಪಣಿಯು ಮೂರನೇ ತಲೆಮಾರಿನ ತಂತ್ರಜ್ಞಾನದಿಂದ ನಿರ್ಮಾಣವಾಗಿದೆ.

ಇನಿಂಗ್ಸ್ ಮುನ್ನಡೆಯತ್ತ ಕರ್ನಾಟಕ

ರಣಜಿ ಟ್ರೋಫಿ ಕ್ರಿಕೆಟ್: ವೈಶಾಖ, ಕೌಶಿಕ್, ವಿದ್ವತ್ ಕಾವೇರಪ್ಪ ದಾಳಿಗೆ ತತ್ತರಿಸಿದ ರಾಜಸ್ಥಾನ

• ಗಿರೀಶ ದೊಡ್ಡಮನಿ

ಆಲೂರು (ಬೆಂಗಳೂರು): ಕರ್ನಾಟಕದ ಮೂವರು ವೇಗಿಗಳ ಶಿಸ್ತುಬದ್ಧ ದಾಳಿಯ ಮುಂದೆ ರಾಜಸ್ಥಾನ ತಂಡವು ಮಂಗಳವಾರ ಇಲ್ಲಿ ಆರಂಭವಾದ ರಣಜಿ ಕ್ರಿಕೆಟ್ ಪಂದ್ಯದ ಮೊದಲ ದಿನವೇ ಕುಸಿಯಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಆತಿಥೇಯ ತಂಡವು ಮೊದಲ ದಿನವೇ ಇನಿಂಗ್ಸ್ ಮುನ್ನಡೆಯ ಹೊಸ್ತಿಲಿಗೆ ಬಂದು ನಿಂತಿದೆ. ಟಾಸ್ ಗೆದ್ದ ರಾಜಸ್ಥಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ತಲಾ ನಾಲ್ಕು ವಿಕೆಟ್ ಗಳಿಸಿದ ವೈಶಾಖ ವಿಜಯಕುಮಾರ್, ವಾಸುಕಿ ಕೌಶಿಕ್ ಹಾಗೂ ಎರಡು ವಿಕೆಟ್ ತಮ್ಮ ಬುಟ್ಟಿಗೆ ಹಾಕಿಕೊಂಡ ವಿದ್ವತ್ ಕಾವೇರಪ್ಪ ಅವರ ದಾಳಿಯ ಮುಂದೆ ರಾಜಸ್ಥಾನ ತಂಡವು 45.3 ಓವರ್‌ಗಳಲ್ಲಿ 129 ರನ್ ಗಳಿಸಿ ಆಲೌಟ್ ಆಯಿತು.

ಚಹಾ ವಿರಾಮಕ್ಕೆ ಇನ್ನೂ 40 ನಿಮಿಷಗಳು ಬಾಕಿಯಿರುವಾಗಲೇ ಇನಿಂಗ್ಸ್ ಆರಂಭಿಸಿದ ಕರ್ನಾಟಕ ದಿನದಾಟದ ಮುಕ್ತಾಯಕ್ಕೆ 30 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 106 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಮುನ್ನಡೆಗೆ 23 ರನ್‌ಗಳ ಅಗತ್ಯವಿದೆ. ಮಯಂಕ್ (ಬ್ಯಾಟಿಂಗ್ 49) ಮತ್ತು ನಿಕಿನ್ ಜೋಸ್ (ಬ್ಯಾಟಿಂಗ್ 10) ಕ್ರೀಸ್‌ನಲ್ಲಿದ್ದಾರೆ.

ವೈಶಾಖ ವಿಜಯಕುಮಾರ್ ಸಂಭ್ರಮ (ಎಡ) ವಿ. ಕೌಶಿಕ್ ಬೌಲಿಂಗ್ –ಪ್ರಜಾವಾಣಿ ಚಿತ್ರಗಳು/ ಬಿ.ಎಚ್. ಶಿವಕುಮಾರ್

12 ವಿಕೆಟ್‌ಗಳು: ಹದವಾದ ಬೌನ್ಸ್ ಮತ್ತು ಸ್ವಿಂಗ್ ಎಸೆತಗಳಿಗೆ ನೆರವಾದ ಸ್ಪರ್ಧಾತ್ಮಕ ಪಿಚ್‌ನಲ್ಲಿ ಪಂದ್ಯದ ಮೊದಲ ದಿನವೇ ಒಂದು ಡಜನ್ ವಿಕೆಟ್ ಪತನವಾದವು. ಅವೆಲ್ಲವೂ ಮಧ್ಯಮವೇಗಿಗಳ ಪಾಲಾದವು.

ಲೈನ್ ಮತ್ತು ಲೆಂಗ್ತ್ ಜೊತೆಗೆ ವೇಗಕ್ಕೂ ಆದ್ಯತೆ ನೀಡುವ ವಿದ್ವತ್ ಈ ಪಂದ್ಯದಲ್ಲಿಯೂ ಎದುರಾಳಿ ತಂಡವು ಖಾತೆ ತೆರೆಯುವ ಮುನ್ನವೇ ಆಘಾತ ನೀಡಿದರು. ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಆರಂಭಿಕ ಬ್ಯಾಟರ್ ಯಶ್ ಕೊಠಾರಿ ಅವರು ವಿದ್ವತ್ ಎಸೆತಕ್ಕೆ ವಿಕೆಟ್ ಒಪ್ಪಿಸಿದರು. ನಾಲ್ಕು ಓವರ್‌ಗಳ ನಂತರ ಕೌಶಿಕ್ ಎಸೆತದಲ್ಲಿ ಮಹಿಪಾಲ್ ಲೊಮ್ರೊರ್ ಅವರ ವಿಕೆಟ್ ಕಬಳಿಸಿದರು.

ವಿದ್ವತ್ ಎರಡನೇ ಸ್ಪೆಲ್‌ನಲ್ಲಿಯೂ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಆದಿತ್ಯ ಗಡ್ವಾಲ್ ಬಿದ್ದರು. ಕುನಾಲ್ ಸಿಂಗ್ ರಾಥೋಡ್ (33; 54ಎ, 4X5, 6X1) ವಿಕೆಟ್ ಗಳಿಸುವ ಮೂಲಕ ವೈಶಾಖ ತಮ್ಮ ಖಾತೆ ತೆರೆದರು. ಇದರಿಂದಾಗಿ ಭೋಜನ ವಿರಾಮಕ್ಕೆ ರಾಜಸ್ಥಾನ 84 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ನಂತರದ ಅವಧಿಯಲ್ಲಿ ರಾಜಸ್ಥಾನದ ಪತನಕ್ಕೆ ವೈಶಾಖ ಮತ್ತು ಕೌಶಿಕ್ 'ಜೊತೆಯಾಟ' ಕಾರಣವಾಯಿತು. ತಂಡದ ಮೊತ್ತಕ್ಕೆ 45 ರನ್‌ಗಳು ಸೇರುವಷ್ಟರಲ್ಲಿ 6 ವಿಕೆಟ್‌ಗಳು ಪತನವಾದವು. ವೈಶಾಖ ಕಳೆದ ಪಂದ್ಯದಲ್ಲಿ ಛತ್ತೀಸಗಢ ಎದುರಿನ ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ್ದರು.

ಮಯಂಕ್‌ಗೆ ಅದೃಷ್ಟ

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಕರ್ನಾಟಕ ತಂಡದ ನಾಯಕ ಮಯಂಕ್ ಅವರಿಗೆ ಆಲೂರಿನಲ್ಲಿ ಅದೃಷ್ಟವು 'ನೋಬಾಲ್' ರೂಪದಲ್ಲಿ ಜೊತೆಗೂಡಿತು. 22 ರನ್ ಗಳಿಸಿದ್ದ ಅವರು ಅರಾಫತ್ ಖಾನ್ ಬೌಲಿಂಗ್‌ನಲ್ಲಿ ವಿಕೆಟ್‌ಕೀಪರ್ ರಾಥೋಡ್‌ಗೆ ಔಟಾಗಿದ್ದರು. ಆದರೆ, ಮೂರನೇ ಅಂಪೈರ್ ನೋಬಾಲ್ ತೀರ್ಪಿತ್ತರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ರಾಜಸ್ಥಾನ: 129 (45.3 ಓವರ್‌ಗಳಲ್ಲಿ)
ಯಶ್ ಸಿ ಗೌತಮ್ ಬಿ ವಿದ್ವತ್ 0 (2ಎ)
ಕುನಾಲ್ ಸಿಂಗ್ ಸಿ ಸಮರ್ಥ್ ಬಿ ವೈಶಾಖ 33(54ಎ, 4X5, 6X1), ಲೊಮ್ರೊರ್ ಸಿ ಪಡಿಕ್ಕಲ್ ಬಿ ಕೌಶಿಕ್ 0 (17ಎ), ಆದಿತ್ಯ ಎಲ್‌ಬಿಡಬ್ಲ್ಯು ಬಿ ವಿದ್ವತ್ 19 (36ಎ, 4X3), ಮನೇರಿಯಾ ಸಿ ಶರತ್ ಬಿ ವೈಶಾಖ 12 (46ಎ, 4X2), ಕರಣ್ ಸಿ ನಿಕಿನ್ ಬಿ ಕೌಶಿಕ್ 31 (59ಎ, 4X5, 6X1), ಸಂಪ್ರೀತ್ ಬಿ ಕೌಶಿಕ್ 5 (28ಎ), ಮಾನವ್ ಬಿ ವೈಶಾಖ 0 (1ಎ) ಅರಾಫತ್ ಸಿ ಮನೀಷ್ ಬಿ ವೈಶಾಖ 6 (14ಎ, 4X1), ಖುತುರಾಜ್ ಔಟಾಗದೆ 10 (9ಎ, 4X2), ಅನಿಕೇತ್ ಸಿ ಪಡಿಕ್ಕಲ್ ಬಿ ಕೌಶಿಕ್ 4 (7ಎ, 4X1)
ಇತರೆ: 9 (ಲೆಗ್‌ಬೈ 9)
ವಿಕೆಟ್ ಪತನ: 1–0 (ಯಶ್ ಕೊಠಾರಿ; 0.2), 2–9 (ಮಹಿಪಾಲ್ ಲೊಮ್ರೊರ್; 5.3), 3–51 (ಆದಿತ್ಯ ಗಡ್ವಾಲ್;17.5), 4–53 (ಕುನಾಲ್ ಸಿಂಗ್ ರಾಥೋಡ್; 18.2), 5–86 (ಅಶೋಕ ಮನೇರಿಯಾ; 32.4), 6–104 (ಕರಣ್ ಲಾಂಬಾ; 37.6), 7–105 (ಮಾನವ್ ಸುತಾರ್; 38.2), 8–115 (ಅರಾಫತ್ ಖಾನ್; 42.3), 9–119 (ಸಂಪ್ರೀತ್ ಜೋಶಿ; 43.2), 10–129 (ಅನಿಕೇತ್; 45.3)
ಬೌಲಿಂಗ್: ವಿದ್ವತ್ ಕಾವೇರಪ್ಪ 8–4–12–2, ವಾಸುಕಿ ಕೌಶಿಕ್ 17.3–5–37–4, ವಿಜಯಕುಮಾರ್ ವೈಶಾಖ 14–4–50–4, ಕೃಷ್ಣಪ್ಪ ಗೌತಮ್ 6–1–21–0

ಕರ್ನಾಟಕ: 2ಕ್ಕೆ 106 (30 ಓವರ್‌ಗಳಲ್ಲಿ)
ಸಮರ್ಥ್ ಸಿ ಕುನಾಲ್‌ಸಿಂಗ್ ಬಿ ಅನಿಕೇತ್ 8 (15ಎ, 42), ಮಯಂಕ್ ಬ್ಯಾಟಿಂಗ್ 49 (98ಎ, 4X8), ಪಡಿಕ್ಕಲ್ ಬಿ ಅನಿಕೇತ್ 32 (47ಎ, 4X5), ನಿಕಿನ್ ಬ್ಯಾಟಿಂಗ್ 10 (22ಎ, 4X2)
ಇತರೆ: 7 (ಬೈ 4, ಲೆಗ್‌ಬೈ 1, ನೋಬಾಲ್ 2)
ವಿಕೆಟ್ ಪತನ: 1–14(ಆರ್. ಸಮರ್ಥ್; 4.3), 2–88 (ದೇವದತ್ತ ಪಡಿಕ್ಕಲ್; 23.4)
ಬೌಲಿಂಗ್: ಅನಿಕೇತ್ ಚೌಧರಿ 10–2–40–2, ಖುತುರಾಜ್ ಸಿಂಗ್ 10–3–27–0, ಅರಾಫತ್ ಖಾನ್ 9–1–32–0, ಮಾನವ್ ಸುತಾರ್ 1–0–2–0

ಜೇನ್ನೊಣ ಹಿಂದು; ಕೆಲಹೊತ್ತು ಆಟ ಸ್ಥಗಿತ

ಆಲೂರು (ಬೆಂಗಳೂರು): ಕರ್ನಾಟಕದ ಇನಿಂಗ್ಸ್ ಆರಂಭವಾಗಿ ಅರ್ಧ ಗಂಟೆ ಕಳೆದಿತ್ತು. ಜೇನ್ನೊಣಗಳ ದೊಡ್ಡ ಗುಂಪೊಂದು ಮೈದಾನದ ಮೇಲೆ ಹಾರಿದವು. ಅವುಗಳಿಂದ ರಕ್ಷಿಸಿಕೊಳ್ಳಲು ಆಟಗಾರರು ಮತ್ತು ಅಂಪೈರ್‌ಗಳು ತಾವು ನಿಂತ ಜಾಗದಲ್ಲಿಯೇ ಮಕಾಡೆ ಮಲಗಿದರು.

ಜೇನ್ನೊಣಗಳು ಚದುರಿದ ನಂತರ ಮತ್ತೆ ಆಟ ಆರಂಭಿಸಿದರು. ಇದರಿಂದಾಗಿ ಕೆಲವು ನಿಮಿಷಗಳ ಕಾಲ ಆಟ ಸ್ಥಗಿತವಾಯಿತು.

21ರಿಂದ ಆರ್ಚರಿ ಚಾಂಪಿಯನ್‌ಷಿಪ್

ಬೆಂಗಳೂರು: ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು ಜನವರಿ 21 ಮತ್ತು 22ರಂದು ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಆರ್ಚರಿ ಚಾಂಪಿಯನ್‌ಷಿಪ್ ಅನ್ನು ಆಯೋಜಿಸಲಿದೆ.

14, 17 ಮತ್ತು 20 ವರ್ಷದೊಳಗಿನವರು, ಸೀನಿಯರ್ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ.

ಆಸಕ್ತರು ಇದೇ 18ರೊಳಗೆ ಸಂಸ್ಥೆಯ ಕಾರ್ಯದರ್ಶಿ ಟಿ. ಅನಂತರಾಜು ಅವರಲ್ಲಿ ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–22275656 ಸಂಖ್ಯೆಯನ್ನು ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ರಣಜಿ ಅಂಗಳದಲ್ಲಿ ಮಹಿಳಾ ಅಂಪೈರ್‌ಗಳು

ನವದೆಹಲಿ(ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಮಹಿಳಾ ಅಂಪೈರ್‌ಗಳು ಕಾರ್ಯಾರಂಭ ಮಾಡಿದರು.

ವೃಂದಾ ರಾಠಿ, ಜನನಿ ನಾರಾಯಣ ಮತ್ತು ಗಾಯತ್ರಿ ವೇಣುಗೋಪಾಲನ್ ಅವರು ಇತಿಹಾಸ ಬರೆದರು.

ಜೆಮ್ಷೆಡ್‌ಪುರದಲ್ಲಿ ನಡೆಯುತ್ತಿರುವ ಜಾರ್ಖಂಡ್ ಮತ್ತು ಛತ್ತೀಸಗಢ ನಡುವಣ ಪಂದ್ಯದಲ್ಲಿ ಗಾಯತ್ರಿ ವೇಣುಗೋಪಾಲ್ ಕಾರ್ಯನಿರ್ವಹಿಸುತ್ತಿದ್ದಾರೆ.

ಸೂರತ್‌ನಲ್ಲಿ ನಡೆಯುತ್ತಿರುವ ರೈಲ್ವೆಸ್ ಮತ್ತು ತ್ರಿಪುರ ನಡುವಣ ಪಂದ್ಯದಲ್ಲಿ ಜನನಿ ನಾರಾಯಣನ್, ಪೊರ್ವೊರಿಯಂನಲ್ಲಿ ಗೋವಾ ಹಾಗೂ ಪುದುಚೇರಿ ನಡುವಣ ಪಂದ್ಯದಲ್ಲಿ ವೃಂದಾ ಅಂಪೈರಿಂಗ್ ಮಾಡುತ್ತಿದ್ದಾರೆ.

ಚೆನ್ನೈನ ಜನನಿ ಹಾಗೂ ಮುಂಬೈನ ವೃಂದಾ ಅವರು 2018ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಡೆವಲಪ್‌ಮೆಂಟ್ ಅಂಪೈರ್ ಪ್ಯಾನೆಲ್‌ಗೆ ಸೇರ್ಪಡೆಯಾಗಿದ್ದರು. ದೆಹಲಿಯ ಗಾಯತ್ರಿ ಅವರು ಬಿಸಿಸಿಐ ಪ್ಯಾನೆಲ್‌ನಲ್ಲಿದ್ದಾರೆ.

32 ವರ್ಷದ ವೃಂದಾ ಮುಂಬೈನಲ್ಲಿ ಕ್ರಿಕೆಟ್ ಆಡುತ್ತ ಬೆಳೆದವರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ 36 ವರ್ಷದ ಜನನಿ ಅವರು ಅಂಪೈರಿಂಗ್‌ಗಾಗಿ ಉತ್ತಮ ಸಂಬಳ ಪಡೆಯುತ್ತಿದ್ದ ಉದ್ಯೋಗವನ್ನು ಬಿಟ್ಟಿದ್ದಾರೆ. 43 ವರ್ಷದ ಗಾಯತ್ರಿ ಅವರು 2019ರಲ್ಲಿ ಬಿಸಿಸಿಐ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಂಪೈರಿಂಗ್ ಮಾಡುತ್ತಿದ್ದಾರೆ.

'ಅಂಪೈರಿಂಗ್‌ನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿಸುವ ಗುರಿ ಇದೆ. ಅದರಲ್ಲೂ ಪುರುಷರ ಕ್ರಿಕೆಟ್‌ನಲ್ಲಿಯೂ ಮಹಿಳಾ ಅಂಪೈರ್‌ಗಳು ಕಾರ್ಯನಿರ್ವಹಿಸುವ ಅವಕಾಶಗಳನ್ನು ಹೆಚ್ಚಿಸುವುದು ನಮ್ಮ ಉದ್ದೇಶ' ಎಂದೂ ಬಿಸಿಸಿಐ ಅಧಿಕಾರಿ ಹೇಳಿದ್ದಾರೆ.

ಜನನಿ ನಾರಾಯಣನ್, ಗಾಯತ್ರಿ ವೇಣುಗೋಪಾಲನ್ ಮತ್ತು ವೃಂದಾ

ಅಂಧರ ಕ್ರಿಕೆಟ್: ಕರ್ನಾಟಕಕ್ಕೆ ಮತ್ತೊಂದು ಜಯ

ಬೆಂಗಳೂರು: ಗಂಗಾ (ಅಜೇಯ 74) ಅವರ ಅರ್ಧಶತಕದ ಬಲದಿಂದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ಇಂಡಸ್ ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯ ತನ್ನ ಎರಡನೇ ಲೀಗ್ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ 29 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಟೂರ್ನಿಯಲ್ಲಿ ಎರಡನೇ ಜಯ ಸಂಪಾದಿಸಿತು.

ಸಚಿನ್ ತೆಂಡೂಲ್ಕರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕರ್ನಾಟಕ, ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ಇದಕ್ಕುತ್ತರವಾಗಿ ಮಧ್ಯಪ್ರದೇಶ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 129 ರನ್ ಗಳಿಸಲಷ್ಟೇ ಶಕ್ತವಾಯಿತು.

ಗುಜರಾತ್ 10 ವಿಕೆಟ್‌ಗಳಿಂದ ಪಶ್ಚಿಮ ಬಂಗಾಳ ತಂಡಕ್ಕೆ ಸೋಲುಣಿಸಿತು. ಇನ್ನುಳಿದ ಲೀಗ್ ಪಂದ್ಯಗಳಲ್ಲಿ ದೆಹಲಿ 179 ರನ್‌ಗಳಿಂದ ಅಸ್ಸಾಂ ಎದುರು, ಕೇರಳ 9 ವಿಕೆಟ್‌ಗಳಿಂದ ತಮಿಳುನಾಡು ವಿರುದ್ಧ ಗೆದ್ದಿತು.

ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಸಾಮಾಜಿಕ ಅಂತರ ಮತ್ತು ಎಲ್ಲಾ ಸುರಕ್ಷತಾ ನಿಯಮಗಳನ್ನು ಅನುಸರಿಸುತ್ತದೆ ಮತ್ತು ಪ್ರಚಾರ ಮಾಡುತ್ತದೆ. ಷರತ್ತುಗಳು ಮತ್ತು ನಿರ್ಬಂಧನೆಗಳು ಅನ್ವಯಿಸುತ್ತವೆ. ತೋರಿಸಿರುವ ವೈಶಿಷ್ಟ್ಯಗಳು ಮತ್ತು ಪರಿಕರಗಳು ಗುಣಮಟ್ಟದ ಸಲಕರಣೆಗಳ ಭಾಗವಾಗಿರುವುದಿಲ್ಲ. ಚಿತ್ರಗಳನ್ನು ವಿವರಣೆ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗಿದೆ. ಬೆಳಕಿನ ಪರಿಣಾಮದಿಂದಾಗಿ ಕಪ್ಪು ಗಾಜಿನ ನೋಟ ಪ್ರದರ್ಶಿತಗೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.marutisuzukidrivingschool.com ಗೆ ಭೇಟಿ ನೀಡಿ.

AUTHORISED MARUTI SUZUKI DRIVING SCHOOLS:
KARNATAKA: BANGALORE: BIMAL AUTO AGENCY INDIA PVT. LTD., BANASWADI, 8884433994; VARTHUR, 9742212348; KALENA AGRAHARA, 9742262456; BANASHANKARI, 9742261929; MAHADEVPURA, 9742296140; KANAKAPURA ROAD, 9742168888; KODIHALLI, 9945235299; OLD AIRPORT ROAD, 9742232068; HOSKOTE, 9742290421; INTL. AIRPORT ROAD, 9742289868; KALYANI MOTORS PVT. LTD., KALYAN NAGAR, 9900037130, KUNDANAHALLI, 9900038123; MYSORE ROAD, 9900038118; MANDOVI MOTORS PVT LTD., RR NAGAR, 7022026950; BASAVESHWAR NAGAR, 7760989042; JP NAGAR, 8861208492; YELAHANKA NEW TOWN, 9591293972, SARJAPUR ROAD, 7760989030; BASAVANGUDI, 9686023298; PRATHAM MOTORS PVT LTD, SOMASUNDARAPALYA, 8971422226, HSR LAYOUT, 8884017222; KORMANGALA, 9845599222; INDIRANAGAR, 9538889733; DOMMASANDRA, 9008022113; BELLANDUR, 9538889600; RNS MOTORS LIMITED, BANNERGHATTA ROAD, 6366558920; RNS MOTORS LTD, YESHWANTHPUR, 6366558920; NELAMANGALA, 6366558920; SURAKSHAA CAR CARE PVT. LTD., KORMANGALA, 8884419021; ELECTRONIC CITY, 8884419020; VARUN MOTORS PVT LTD, HESARAGHATTA, 7337834589; HEBBAL, 7337834589; BELGAUM: SHANTESHA MOTORS PVT LTD, UDYAMBAG, 9902043718; NEHRU NAGAR, 7829925757; DHARWAD: REVANKAR MOTORS PVT LTD, P.B. ROAD, 9845294058; RNS MOTORS LIMITED, HALIYAL ROAD, 8861002284; GULBARGA: LAHOTI MOTORS PVT. LTD, LAHOTI GARDEN, 9480825030; HOSPET: MUNEER CARS (A UNIT OF MUNEER ENTERPRISES PVT. LTD.), APMC DAM ROAD, 7026609474; HUBLI: REVANKAR MOTORS PVT LTD, DESHPANDE NAGAR, 8861304749, RNS MOTORS LIMITED, UNKAL, 8861002284; MANGALORE: BHARATH AUTO CARS PVT. LTD., KADRI, 9886527330; MANDOVI MOTORS PVT LTD., HAMPANKATTA, 9845741230; MYSORE: MANDOVI MOTORS PVT LTD., HUNSUR ROAD, 9980546204; SHIMOGA:SHRUTI MOTORS, SHANKAR MUTT ROAD, 9880077379; TUMKUR: SAKETH AUTOMOBILES, SIDDALINGAIAHNA PALYA, 9845577444; UDUPI: ABHARAN MOTORS PVT LTD., JODUKATTE, 7760987555.